# ಕರ್ನಾಟಕದ ಜ್ಞಾನಸಮಾಜಕ್ಕಾಗಿ
# ಉನ್ನತ ಶಿಕ್ಷಣ ವ್ಯವಸ್ಥೆ

ಅರಕಲಗೂಡು ರಾಮಪ್ರಸಾದ್, ತೇಜಸ್ವಿನಿ ನಿರಂಜನ, ತನ್ವೀರ್ ಹಸನ್,
ಚೇತನ್ ಸಿಂಘಾಯ್, ಭೂಮಿಕಾ ಧನರಾಜು

**ಉನ್ನತ ಶಿಕ್ಷಣದ ನಾವೀನ್ಯತೆಗಳು ಮತ್ತು ಸಂಶೋಧನಾ ಅನ್ವಯಿಕಗಳು (ಎಚ್ಇಐಆರ್ಎ)**
**ಸಂಸ್ಕೃತಿ ಮತ್ತು ಸಮಾಜದ ಅಧ್ಯಯನಗಳ ಕೇಂದ್ರ**
**ನಂ. ೮೨೭, ೨೯ನೇ ಮುಖ್ಯರಸ್ತೆ**
**ಪೂರ್ಣಪ್ರಜ್ಞಾ ಎಚ್‌ಬಿಸಿಎಸ್‌ಲೇಔಟ್**
**ಉತ್ತರಹಳ್ಳಿ, ಬೆಂಗಳೂರು – ೫೬೦೦೬೧**
**ದೂ:+೯೧=೮೦–೨೬೪೨೩೦೦೨, ೨೬೪೨೩೨೬೬/೬೭/೬೮**
**ಫ್ಯಾಕ್ಸ್:+೯೧=೮೦=೨೬೩೨೩೦೦೨**
**ಅಂತರ್ಜಾಲ: http://hecell.in, http://www.cscsarchive.org**

***ರವರಿಂದ ಅಂತಿಮ ವರದಿಯನ್ನು***
***ಕರ್ನಾಟಕ ಜ್ಞಾನ ಆಯೋಗ, ಕರ್ನಾಟಕ ಸರ್ಕಾರರವರಿಗೆ ಸಲ್ಲಿಕೆ***

**ನವೆಂಬರ್ ೨೦, ೨೦೧೨**

## ಕಾರ್ಯಕಾರಿ ಸಂಕ್ಷೇಪ

ಕರ್ನಾಟಕ ಜ್ಞಾನ ಸಮಾಜದ ಮಾರ್ಗಸೂಚಿಯು, ಶಿಕ್ಷಣ, ಆರೋಗ್ಯ, ಕೃಷಿ, ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿಗಳಲ್ಲಿನ ಜ್ಞಾನ ಸೃಷ್ಟಿ, ಪ್ರಸರಣ ಮತ್ತು ಅನ್ವಯಿಕಗಳ ಸಲುವಾಗಿ ಅಂತರ್ವೇಶನ, ವಿಸ್ತರಣ ಮತ್ತು ಸಂಸ್ಥೆಗಳ ಶ್ರೇಷ್ಠತೆಯ ನಿಟ್ಟಿನೆಡೆಗೆ ಚಿಂತಿಸುತ್ತಿದೆ (ಕರ್ನಾಟಕ ಜ್ಞಾನ ಆಯೋಗ, 2011). ಮಾರ್ಗಸೂಚಿಯನ್ನು ಕ್ರಮಿಸುವಾಗಿ, ರಾಜ್ಯವು, ವ್ಯವಸ್ಥೆಯ ಆಕಾಂಕ್ಷೆಗಳು, ಅದರ ಪ್ರಸ್ತುತ ಸ್ಥಿತಿ, ಎರಡು ಅಂತರಗಳ ನಿರ್ಣಯ ಹಾಗೂ ಅಂತರಗಳನ್ನು ಸಂಯೋಜಿಸುವ ಕಾರ್ಯತಂತ್ರಗಳನ್ನು ಮಾಪಿಸುವುದು ಅತ್ಯಗತ್ಯ. ಈ ಅಧ್ಯಯನದ ಉದ್ದೇಶಗಳು ಈ ಕೆಳಗಿನಂತಿವೆ:

1. ಸ್ಪಷ್ಟವಾಗಿ ನಮೂದಿಸಿದ ಆಕಾಂಕ್ಷೆಗಳು ಮತ್ತು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ವಾಸ್ತವತೆಯನ್ನು ಮಾಪಿಸುವುದು ಹಾಗೂ
2. ಎರಡು ಅಂತರಗಳ ಕುರಿತಾದ ನಿರ್ಣಯ ಮತ್ತು ವಿಶ್ಲೇಷಣೆ

ನಾವು ಮೂಲತತ್ವ ಶಾಸ್ತ್ರದ ಚೌಕಟ್ಟನ್ನು (ರಾಮಪ್ರಸಾದ 2011) ಬಳಸಿ, ವ್ಯವಸ್ಥೆಯ ಆಕಾಂಕ್ಷೆಗಳ ಮನೋರೂಢಿ ಮತ್ತು ಆಚರಣೆಗಳ ಮನೋರೂಢಿಗಳನ್ನು ಮಾಪನ ಮಾಡಲಾಗಿದೆ. ಪ್ರತಿಯೊಂದು ಸಂಸ್ಥೆಯ ಆಶೋತ್ತರಗಳನ್ನು, ಆಯಾ ಸಂಸ್ಥೆಗಳ ದಿಗ್ದರ್ಶಕಗಳು, ಧ್ಯೇಯ ವಾಕ್ಯಗಳು, ಉದ್ದೇಶಗಳು, ಕುಲಪತಿಗಳ ಭಾಷಣಗಳು ಹಾಗೂ ಸಂಸ್ಥೆಗಳ ಜಾಲತಾಣಗಳಲ್ಲಿ ಲಭ್ಯವಿರುವ ಸದೃಶ ದಾಖಲೆಗಳ ಆಧಾರದ ಮೇರೆಗೆ ನಿರ್ಣಯಿಸಲಾಗಿದೆ. ಆಚರಣೆಗಳನ್ನು ಮಾಪನ ಮಾಡುವ ಸಲುವಾಗಿ ದತ್ತಾಂಶಗಳನ್ನು ಸಾಂಸ್ಥಿಕ ಹಾಗೂ ಬಾಹ್ಯ ಮೂಲಗಳಿಂದ ಸಂಗ್ರಹಿಸಲಾಗಿದೆ. ಸಂಸ್ಥೆಗಳ ವಾರ್ಷಿಕ ವರದಿಗಳು, ಐಕ್ಯೂಎಸಿ (ಆಂತರಿಕ ಗುಣಮಟ್ಟ ಖಾತರಿ ಕೋಶ) ವರದಿಗಳು, ಎಕ್ಯೂಎಆರ್ (ವಾರ್ಷಿಕ ಗುಣಮಟ್ಟ ಖಾತರಿ ವರದಿಗಳು), ನಿಯತಕಾಲಿಕೆಗಳು, ಕಿರುಹೊತ್ತಿಗೆಗಳು, ಪುನರ್ನಮನ ತರಬೇತಿ ಕಾರ್ಯಕ್ರಮಗಳ ವಿಷಯ ಸಾಮಗ್ರಿಗಳು, ಘಟಿಕೋತ್ಸವದ ಭಾಷಣಗಳು, ವಾರ್ಷಿಕ ಮುಂಗಡಪತ್ರ ಮತ್ತು ಸುದ್ದಿಪತ್ರಗಳು ಆಂತರಿಕ ಮೂಲದ ದತ್ತಾಂಶಗಳಾಗಿದ್ದವು. ಯುಜಿಸಿ (ವಿಶ್ವವಿದ್ಯಾಲಯಗಳ ಅನುದಾನ ಆಯೋಗ), ಎನ್‌ಎಎಸಿ (ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿ), ಶ್ರೇಣಿಗಳು ಮತ್ತು ಸಮೀಕ್ಷೆಗಳು, ಆಯ್ದ ಆನ್‌ಲೈನ್ ಜಾಲತಾಣಗಳು, ಐಸಿಎಸ್‌ಎಸ್‌ಆರ್ (ಭಾರತೀಯ ಸಮಾಜ ವಿಜ್ಞಾನಗಳ ಸಂಶೋಧನಾ ಪರಿಷತ್ತು), ಎಐಸಿಟಿಇ (ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ), ಎಂಸಿಐ (ಭಾರತದ ವೈದ್ಯಕೀಯ ಮಂಡಳಿ), ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ ಹಾಗೂ ಎಐಸಿಟಿಇ ವತಿಯಿಂದ ಸ್ಥಾಪಿತವಾದ ಎನ್‌ಬಿಎ (ರಾಷ್ಟ್ರೀಯ ಮಾನ್ಯತಾ ಮಂಡಳಿ)ಗಳು ಬಾಹ್ಯ ಮೂಲದ ದತ್ತಾಂಶಗಳಾಗಿದ್ದವು.

ಕರ್ನಾಟಕದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯ ಆಕಾಂಕ್ಷೆಗಳ ಕುರಿತಾದ ಮನೋಭವಗಳು ಸಮೃದ್ಧವಾಗಿವೆ ಆದರೆ, ಆದರ್ಶಪ್ರಾಯವಾಗಿಲ್ಲ. ಸಾರಾಂಶವಾಗಿ:

1. ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರಗಳು ಸಾಧಾರಣ ಮತ್ತು ವೈವಿಧ್ಯತೆಯಿಂದ ಕೂಡಿದೆ ಅದರೆ ಪರಿಪೂರ್ಣವಾಗಿ ಸಮತೋಲನವನ್ನು ಕಾಯ್ದಿಟ್ಟುಕೊಂಡಿಲ್ಲ;
2. ಇದರ ಪರಿಧಿಯು ಸಮೃದ್ಧ ಹಾಗೂ ವಿಭಿನ್ನವಾಗಿದೆ, ಅದರೆ ಉತ್ತಮವಾಗಿ ವಿತರಣೆಯಾಗಿಲ್ಲ;
3. ಇದರ ಒಟ್ಟಾರೆ ಕಾರ್ಯಚಟುವಟಿಕೆಗಳು ಯುಕ್ತವಾಗಿದ್ದು, ಸಮಂಜಸವಾಗಿ ಹಂಚಿಕೆಯಾಗಿಲ್ಲ;
4. ಕೇಂದ್ರಿಕರಣದಲ್ಲಿ ವೈವಿಧ್ಯತೆಯಿದ್ದು, ಸಮಾನರೂಪ ರಹಿತವಾಗಿದೆ ಹಾಗೂ ಮರುಮೌಲ್ಯಮಾಪನದ ಅಗತ್ಯವಿದೆ; ಮತ್ತು

5. ಇದರ ಫಲಿತಾಂಶಗಳು ಸಮರ್ಪಕವಾಗಿದೆ, ಆದರೆ ಪ್ರಾಧಾನ್ಯತೆಗಳು ವಿಚಲಿತವಾಗಿದ್ದು, ಜ್ಞಾನ ಸಮಾಜದ ಅಭಿವೃದ್ಧಿಯನ್ನು ಪೋಷಿಸಲು ಮರುಜೋಡಣೆಯ ಅವಶ್ಯಕತೆ ಇದೆ.

ಕರ್ನಾಟಕವನ್ನು ಜ್ಞಾನಸಮಾಜವನ್ನಾಗಿ ಪರಿವರ್ತಿಸುವ ದೃಷ್ಟಿಕೋನದಿಂದ ನೋಡಿದಾಗ, ಆಶೋತ್ತರಗಳ ಸಮೂಹಗಳು ನಿರೀಕ್ಷಿಸಬಹುದಾದ ಮತ್ತು ಅನಿರೀಕ್ಷಿತ ರೀತಿಯಲ್ಲಿ, ಸಮೃದ್ಧ ವೈವಿಧ್ಯತೆಯನ್ನು ಹೊಂದಿರುವ ಸಂಸ್ಥೆಗಳು ಇವೆ ಹೀಗಾಗಿ, ಉತ್ತಮ ರೀತಿಯಲ್ಲಿ ನಿರೂಪಿತವಾದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಕರ್ನಾಟಕದ ಜ್ಞಾನ ಪರಿಸರದೊಂದಿಗೆ ಸಂಯೋಜಿಸಲು ತಳಹದಿಯನ್ನು ಕಲ್ಪಿಸಲಾಗಿದೆ. ವಿಶೇಷವಾದ ಹಾಗೂ ಸಮಗ್ರವಾದ ಸಂಸ್ಥೆಗಳು ತಮ್ಮ ಆಶೋತ್ತರಗಳಲ್ಲಿ ಸಮ್ಮಿಶ್ರಿತವಾಗಿವೆಯಲ್ಲದೆ, ಸಂಶೋಧನೆ, ಖಾಸಗಿ, ರಾಜ್ಯ, ಸ್ವಾಯತ್ತ ಮತ್ತು ರಾಷ್ಟ್ರೀಯ ಸಂಸ್ಥೆಗಳು ಒಟ್ಟಿಗೆ ಬೆರೆತಿವೆ. ಇಂತಹ ಸಮ್ಮಿಶ್ರತೆಯು, ಒಂದೆಡೆ, ಸಂಸ್ಥೆಗಳ ಧ್ಯೇಯಗಳು ಮತ್ತು ಆದೇಶವನ್ನು ಸಾರಗುಂದಿಸುವುದಲ್ಲದೇ, ಮತ್ತೊಂದೆಡೆ, ಸಂಸ್ಥೆಗಳ ವಿಕಸನವನ್ನು ಪ್ರತಿನಿಧಿಸುತ್ತದೆ ಹಾಗೂ ಇವುಗಳು ಜ್ಞಾನಸಮಾಜದೊಂದಿಗೆ ಸಂಯೋಜನೆಗೊಳ್ಳುವ ಅವಕಾಶವನ್ನೀಯುತ್ತವೆ.

ಕರ್ನಾಟಕದ ಉನ್ನತ ಶಿಕ್ಷಣ ಸಂಸ್ಥೆಗಳ ಆಚರಣೆಗಳ ಮನಸ್ಥಿತಿ ಉತ್ತಮವಾಗಿದೆ ಮತ್ತು ಸುಧಾರಿಸಬಹುದಾಗಿದೆ. ಸಾರ್ವಜನಿಕ ಹಾಗೂ ಮಾಧ್ಯಮಗಳ ಗ್ರಹಿಕೆಗಳಿಗಿಂತಲೂ ಉತ್ತಮ ಸ್ಥಿತಿಯಲ್ಲಿದೆ. ಅಂತರ್ಜಾಲ, ವರದಿಗಳು ಮತ್ತು ಇತರೆ ದತ್ತಾಂಶಗಳ ಮೂಲಗಳ ಮಾಹಿತಿಗಳು ಸಾಂಸ್ಥಿಕ ಗುರುತಿನ ಮೇಲಿನ ಅಶಕ್ತವಾದ ಪ್ರಕ್ಷೇಪಣಗಳು ಎಂದು ಗೋಚರಿಸುತ್ತಿದೆ. ಕಳಪೆಯಾದ ಅಸಮಾನ ದತ್ತಾಂಶ ಈ ಸಮಸ್ಯೆಯ ಭಾಗವಾಗಿ ಪ್ರತಿಫಲಿಸುತ್ತಿದೆ. ಈ ತೊಡಕು, ವಿವಿಧ ಮಾಧ್ಯಮಗಳಲ್ಲಿನ ಮಾಹಿತಿ ಸಂಘಟನೆ ಕೊರತೆಯ ಸಂಯುಕ್ತವಾಗಿದೆ, ಇದು ಲಭ್ಯವಿದ್ದರೂ ಸಹಾ ತನ್ನ ಪರಿಮಿತಿಗಳನ್ನು ಸೀಮಿತಗೊಳಿಸಿದೆ.

ಸಮೃದ್ಧವಾದ ಆಧಾರಗಳನ್ನು ಸಂಪಾದಿಸಿ ಮತ್ತು ಸಂಘಟಿಸುವ ತೊಂದರೆಗಳ ಹೊರತಾಗಿಯೂ, ಮಹತ್ವದ (ಕೆಲವೊಮ್ಮೆ ಅನಿರೀಕ್ಷಿತ) ಸಾಮರ್ಥ್ಯಗಳು ಮತ್ತು ನ್ಯೂನತೆಗಳನ್ನು ಪ್ರದರ್ಶಿಸುತ್ತದೆ.

1. ವಿಶೇಷವಾಗಿ, ಉನ್ನತ ಶಿಕ್ಷಣದ ಜಾಗತಿಕ ಮಾರುಕಟ್ಟೆ ಸನ್ನಿವೇಶದಲ್ಲಿ, ಉನ್ನತ ಶಿಕ್ಷಣದ ಸಾಕ್ಷಾತ್ಕಾರ ವಿನೀತ ಹಾಗೂ ಭಿನ್ನ, ಆದರೆ ಸೂಕ್ತವಾಗಿ ಸಮತೋಲನವನ್ನು ಕಾಯ್ದಿಟ್ಟುಕೊಂಡಿಲ್ಲ.
2. ಇದರ ವಿಸ್ತರವು ವಿಫುಲ ಹಾಗೂ ಸಂಕೀರ್ಣ ಅದರೆ, ಉತ್ತಮವಾಗಿ ಹಂಚಿಕೆಯಾಗಿಲ್ಲ.
3. ಸಮಗ್ರವಾಗಿ ಹಾಗೆಯೇ ಸಂಸ್ಥೆಗಳ ಸಮೂಹಗಳೊಳಗೆ ಸಮೂಹ ಕ್ರಿಯೆಗಳ ಕುರಿತ ಪ್ರಾಮುಖ್ಯತೆಯು ವೈವಿಧ್ಯ ಮತ್ತು ವಿಭಿನ್ನ. ಸಂಸ್ಥೆಗಳ ಈ ಭಿನ್ನತೆಯು ವ್ಯವಸ್ಥೆಯ ಸಾಮರ್ಥ್ಯವಾಗಿದೆ. ಅವುಗಳ ಸಮಷ್ಟಿ ಕೊರತೆಯು ಒಂದು ದೌರ್ಬಲ್ಯ ಆಗಿರಬಹುದು.
4. ಏಕಾಗ್ರತೆಯು ವೈವಿಧ್ಯತೆವುಳ್ಳದಾಗಿದ್ದು, ಏಕರೂಪವಾಗಿಲ್ಲದಾಗಿದೆ ಹಾಗೂ ಮರುಮೌಲ್ಯಾಂಕನದ ಅವಶ್ಯವಿದೆ. ಒಂದು ವೇಳೆ, ಜ್ಞಾನಸಮಾಜದ ಅಭಿವೃದ್ಧಿಗಾಗಿ ಎಲ್ಲಾ ಕೇಂದ್ರೀಕೃತ ಕ್ಷೇತ್ರಗಳು ಬಹುಮುಖ್ಯವಾದುವು ಎಂದು ಭಾವಿಸಿದರೆ, ಸ್ಪಷ್ಟವಾಗಿ ಆಚರಣೆಯ ಮಾರ್ಗವು ತನ್ನ ಸಂತುಲತೆಯನ್ನು ಕಳೆದುಕೊಳ್ಳುತ್ತದೆ
5. ಒಟ್ಟಾರೆಯಾಗಿ ಹಾಗೂ ಜೊತೆಗೆ ಮೂರು ಕಾರ್ಯಗಳಿಂದಲೂ, ಫಲಿತಾಂಶಗಳು ಅತೀವ ವ್ಯತ್ಯಾಸಗಳನ್ನು ಕಂಡಿವೆ. ವ್ಯತ್ಯಾಸಗಳು ಸ್ವತಃ ಉತ್ತಮವಾಗಿದ್ದು, ಜ್ಞಾನಸಮಾಜದ ಅಭಿವೃದ್ಧಿಯೆಡೆಗೆ ಇದರ ಪರಿಣಾಮಕಾರಿತ್ವ ಅವುಗಳ ಅನುಕಲನಗಳ ಮೇಲೆ ಅವಲಂಬಿತವಾಗಿರುತ್ತದೆ. ಇದಕ್ಕೂ ಮಿಗಿಲಾಗಿ ವಿವಿಧ ಪ್ರಕಾರದ ಬೆಳವಣಿಗೆಗಳು, ಅವುಗಳ ಆದ್ಯತೆ, ಹಾಗೂ ಅನುಕ್ರಮಗಳ ನಡುವಿನ, ಸಮತೋಲನ (ಅಥವಾ ಅಸಮತೋಲನ) ಗಳನ್ನು ಚರ್ಚಿಸಬೇಕಾಗಿದೆ ಮತ್ತು ನಿರ್ಣಯಿಸಬೇಕಾಗಿದೆ.

ಆಶೋತ್ತರಗಳ ಮನೋರೂಢಿಗಳು ಹಾಗೂ ಮೂಲತತ್ವ ಶಾಸ್ತ್ರ ಚೌಕಟ್ಟಿನ ಎಲ್ಲಾ ಅಗತ್ಯ ಆಯಾಮಗಳ ನಡುವೆ ಕೆಲವು ಕಾರ್ಯಸಾಮರ್ಥ್ಯಗಳ ಅಂತರಗಳಿವೆ. ಅವುಗಳಲ್ಲಿ ಕೆಲವು ಅಪೇಕ್ಷಣೀಯವಾಗಿರಬಹುದು ಮತ್ತೂ ಕೆಲವು ಅನಪೇಕ್ಷಿತವಾಗಿರಬಹುದು. ಕಾರ್ಯಸಾಮರ್ಥ್ಯ ಅಂತರಗಳನ್ನುದ್ದೇಶಿಸುವಾಗ, ಆಕಾಂಕ್ಷೆಗಳು ಸ್ವತಃ ಸೂಕ್ತವಾಗಿವೆಯೇ ಅಥವಾ ಇಲ್ಲವೇ – ಅವುಗಳು ಬೇಡಿಕೆಗಳಿಗೆ ಸರಿಹೊಂದುತ್ತವೆಯೇ? ಒಂದು ನಿರ್ಧರಿಸಬೇಕು. ಜ್ಞಾನಸಮಾಜದ ಅಭಿವೃದ್ಧಿಯ ಕುರಿತಂತೆ ಕರ್ನಾಟಕದ ಅಗತ್ಯತೆಗಳ ಸ್ಪಷ್ಟವಾದ ಗ್ರಹಿಕೆಯಿಲ್ಲದೇ ಇದ್ದರೆ, ಆಶೋತ್ತರಗಳು ಸಂಪೂರ್ಣವಾಗಿ ಕಾಲ್ಪನಿಕವಾಗಿರಬಹುದು ಅಥವಾ ನಿರಂಕುಶ ಸ್ವರೂಪದಲ್ಲಿರಬಹುದು. ಈ ಆಶೋತ್ತರಗಳು ಆಚರಣೆಗಳಿಗೆ ತಕ್ಕಂತೆ, ಕರ್ನಾಟಕವನ್ನು ಜ್ಞಾನಸಮಾಜವನ್ನಾಗಿ ಪರಿವರ್ತಿಸಲು ಪರಿಣಾಮಕಾರಿ ಇಲ್ಲದಿರಬಹುದು – ಅಗತ್ಯತೆಗಳ ಮನೋರೂಢಿಗಳ ಕುರಿತು ಅರಿವಿರಬೇಕು.

ಸಂಸ್ಥೆಗಳ ಹಾಗೂ ವ್ಯವಸ್ಥೆಯ ಮೌಲ್ಯಮಾಪನ ಅಥವಾ ವಿಮರ್ಶನವಲ್ಲದೆ, ಅಧ್ಯಯನದ ಮಾಪನವು ದರ್ಪಣದಂತೆ ಕಾರ್ಯನಿರ್ವಹಿಸುತ್ತದೆ ಎಂದು ಆಶಿಸುತ್ತೇವೆ. ಯಾವುದೇ ಮೌಲ್ಯದ ವಿವೇಚನೆ ಇಲ್ಲದೆ ಹಾಗೂ ಯಾವುದೇ ತಾರ್ಕಿಕತೆ ಇಲ್ಲದೆ ಅಥವಾ ಸಮಜಾಯಿಷಿ ಯಾವುದಕ್ಕೆ ಎಂಬ ಮುಂತಾದವುಗಳಿಗೆ ಮಾಪನಗಳನ್ನು ನಿರೂಪಕಗಳಾಗಿ ನಾವು ಸಮರ್ಪಿಸುತ್ತಿದ್ದೇವೆ. ನಿರ್ಧಾರ/ನಿರ್ಣಯಗಳನ್ನು ಕೈಗೊಳ್ಳಲು, ಸಂಸ್ಥೆಗಳು ಮತ್ತು ವ್ಯವಸ್ಥೆ ಈ ವಿಷಯಗಳನ್ನು ಚರ್ಚಿಸಬೇಕು. ಮಾಪನಗಳು ದರ್ಪಣದಂತೆ, ವ್ಯವಸ್ಥೆ ಹಾಗೂ ಸಂಸ್ಥೆಗಳಿಗೆ ಪ್ರತಿಕ್ರಿಯಿಸುತ್ತದೆ ಮತ್ತು ಪ್ರತಿಯಾಗಿ ದೋಷಗಳು, ಅನಿಷ್ಕೃಷ್ಟತೆ ಅಥವಾ ತಪ್ಪಿಹೋದ ವಿವರಗಳ ಕುರಿತು ನಮಗೆ ಹಿಮ್ಮಾಹಿತಿಯನ್ನು ಒದಗಿಸುತ್ತದೆ ಎಂಬ ವಿಶ್ವಾಸವಿದೆ. ಹೆಚ್ಚುವರಿ ಆಧಾರಗಳು ಮಾಪನಗಳನ್ನು ಮಾರ್ಪಡಿಸಿದರೆ, ಜ್ಞಾನ ನೆಲೆ ಮತ್ತು ಮಾಪನಗಳ ಬದಲಾವಣೆಯನ್ನು ನಾವು ಸಂಯೋಜಿಸುತ್ತೇವೆ. ಮೇಲಿನ ಸಂವಾದಾತ್ಮಕ ಪ್ರತಿಕ್ರಿಯೆ ಕುಣಿಕೆಯು ಮಾಪನಗಳ ಗುಣಮಟ್ಟವನ್ನು ಸುಧಾರಿಸಲು ಹಾಗೂ ಅವುಗಳ ವಿಷಯಗ್ರಹಣ ಮತ್ತು ಬಳಕೆಗೆ ಸಹಾಯಕವಾಗುತ್ತದೆ.

ಜ್ಞಾನ ಮೂಲ ತಳಪಾಯವಾಗಿ ಸಾಕ್ಷ್ಯಾಧಾರಿತ ಕಾರ್ಯತಂತ್ರಗಳು ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯ ಪರಿವರ್ತನೆಯ ನಿರ್ವಹಣೆ ಮತ್ತು ಅಭಿವೃದ್ಧಿಯನ್ನು ಕರ್ನಾಟಕ ಸರ್ಕಾರವು ಮುಂದುವರಿಸಬೇಕು ಎಂದು ಶಿಫಾರಸ್ಸು ಮಾಡುತ್ತೇವೆ.

**ಪರಿವಿಡಿ**


ಅಧ್ಯಾಯ 1 ಪೀಠಿಕೆ

- ಹಿಂದಿನ ಅಧ್ಯಯನ
- ಕರ್ನಾಟಕದ ಜ್ಞಾನಪರಿಸರ
- ಉನ್ನತ ಶಿಕ್ಷಣ ವ್ಯವಸ್ಥೆ
- ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆ
- ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನಕ್ಕಾಗಿ ಮೂಲತತ್ವದ ಚೌಕಟ್ಟು
- ಉಲ್ಲೇಖಗಳು

ಅಧ್ಯಾಯ 2 ಅಧ್ಯಾಯ 2 ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಕುರಿತಾದ ಆಕಾಂಕ್ಷೆಗಳ ಮನೋಭಾವ

- ದತ್ತಾಂಶ ಸಂಗ್ರಹ
- ದತ್ತಾಂಶ ಸಂಕೇತಿಕರಣ
- ದತ್ತಾಂಶ ವಿಶ್ಲೇಷಣೆ ಮತ್ತು ಫಲಿತಾಂಶ
  - ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮನೋಭಾವಗಳ ವಿಘುಲ ಚಿತ್ರಣ
  - ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರ ಮನೋಭಾವಗಳ ಸ್ತರೀಕೃತ ಚಿತ್ರಣ
  - ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಕಾಂಕ್ಷಾ ಮನೋಭಾವಗಳ ಸಮೂಹ ವಿಶ್ಲೇಷಣೆ
- ಚರ್ಚೆಗಳು ಮತ್ತು ಉಪಸಂಹಾರ
- ಸಾಧಾರಣ ಆಶೋತ್ತರಗಳು
- ಜಾಗತಿಕ ಮತ್ತು ಸ್ಥಳೀಯ ವಿಸ್ತಾರ
- ಕಾರ್ಯಗಳ ಸಮತೋಲನ
- ಅಸಮಾನವಾದ ಕೇಂದ್ರಿತ ವಲಯಗಳು
- ತ್ರಿವಿಮಿತೀಯ ಫಲಿತಾಂಶಗಳು
- ಉಪಸಂಹಾರ

ಅಧ್ಯಾಯ 3 ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ಆಚರಣೆಗಳ ಮನೋಭಾವ

- ದತ್ತಾಂಶ ಸಂಚಯ
  - ದತ್ತಾಂಶಗಳ ಮೂಲಗಳು
  - ದತ್ತಾಂಶದ ಅನುಶೋಧನೆ
  - ದತ್ತಾಂಶಗಳ ಆಯ್ಕೆ
  - ದತ್ತಾಂಶಗಳ ಸಂಗ್ರಹಣೆ ಮತ್ತು ನವೀಕರಣ
- ದತ್ತಾಂಶಗಳ ಸಂಕೇತಿಕರಣ
- ದತ್ತಾಂಶ ವಿಶ್ಲೇಷಣೆ ಮತ್ತು ಫಲಿತಾಂಶಗಳು
  - ದತ್ತಾಂಶಗಳ ರಚನೆ
  - ದತ್ತಾಂಶ ಚಲಾವಣೆ, ಪ್ರಮಾಣ ಮತ್ತು ಗುಣಮಟ್ಟ
  - ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಆಚರಣೆಯ ಮನೋಭಾವಗಳು
  - ಸಂಸ್ಥೆಗಳ ಮತ್ತು ಗುಣಲಕ್ಷಣಗಳ ಸಮೂಹ ವಿಶ್ಲೇಷಣೆ
- ಚರ್ಚೆಗಳು ಮತ್ತು ಉಪಸಂಹಾರ
  - ಸಾಧಾರಣ ಆಶೋತ್ತರಗಳು
  - ಜಾಗತಿಕ ಮತ್ತು ಸ್ಥಳೀಯ ವಿಸ್ತಾರ
  - ಕಾರ್ಯಗಳ ಸಮತೋಲನ
  - ಅಸಮಾನವಾದ ಕೇಂದ್ರಿತ ವಲಯಗಳು

ತ್ರಿವಿಮಿತೀಯ ಫಲಿತಾಂಶಗಳು
ಉಪಸಂಹಾರ
ಅಧ್ಯಾಯ 4 ಉಪಸಂಹಾರ
ಆಶೋತ್ತರ ಮತ್ತು ಆಚರಣಾ ಮನೋಭಾವಗಳ ನಡುವಿರುವ ಕಾರ್ಯಕ್ಷಮತೆಯ ಅಂತರ
ಆಶೋತ್ತರ/ಸಫಲತೆಯ ಅಂತರ
ವಿಸ್ತಾರದಲ್ಲಿನ ಅಂತರ
ಕ್ರಿಯೆಗಳ ಅಂತರ
ಕೇಂದ್ರಿತ ವಲಯಗಳಲ್ಲಿನ ಅಂತರ
ಫಲಿತಾಂಶಗಳ ಅಂತರ
ಕಾರ್ಯಕ್ಷಮತೆಯ ಅಂತರ – ಸಾರಾಂಶ
ಜೋಟೋರೋನ ಜ್ಞಾನಮಾದರಿಯು ಚಾಲ್ತಿಯಲ್ಲಿರುವ ಪರಿವೀಕ್ಷಣಾ ವ್ಯವಸ್ಥೆಯ ಸಾಧನವಾಗಿ ನಿರೂಪಣೆ
ಅಗತ್ಯಗಳ ಮನೋಭಾವಗಳ ಮಾಪನ
ಪ್ರಕಲ್ಪದ ಸಮಗ್ರವಾದ ಮಿತಿಗಳು, ಸಾಮರ್ಥ್ಯ ಮತ್ತು ಮುಕ್ತಾಯ
ಕರ್ನಾಟಕ ಸರ್ಕಾರಕ್ಕೆ ಮಂಡಿಸಲಾಗುವ ಶಿಫಾರಸ್ಸುಗಳು
ಅನುಬಂಧ ಅ – ಸಂಸ್ಥೆಗಳ ಪಟ್ಟಿ
ಅನುಬಂಧ ಆ – ಶಬ್ದಸಂಗ್ರಹ
ಅನುಬಂಧ ಇ – ಕುಲಪತಿಗಳು ಮತ್ತು ಕುಲಸಚಿವರಿಗೆ ಬರೆದ ಪತ್ರ

**ಚಿತ್ರಗಳ ಕೋಷ್ಟಕ**

ಚಿತ್ರ 1–1: ಕರ್ನಾಟಕದ ಜ್ಞಾನಸಮಾಜದ ಮಾರ್ಗಸೂಚಿ (ಕರ್ನಾಟಕ ಜ್ಞಾನ ಆಯೋಗ, 2011)

ಚಿತ್ರ 1–2: ಕರ್ನಾಟಕದ ಜ್ಞಾನಪರಿಸರ

ಚಿತ್ರ 1–3: ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನಕ್ಕಾಗಿ ಮೂಲತತ್ವದ ಚೌಕಟ್ಟು

ಚಿತ 2–1: ಆಕಾಂಕ್ಷೆಗಳ ಮನೋಭಾವಗಳ ಸಂಕೇತೀಕರಣದ ನಮೂನೆ

ಚಿತ್ರ 2–2: ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮನೋಭಾವಗಳ ಮೂಲತತ್ವ ಮಾಪನ

ಚಿತ್ರ 2–3: ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮನೋಭಾವಗಳ ವೃಕ್ಷ/ಟ್ರೀ ಮಾಪನ

ಚಿತ್ರ 2–4: ಕಾರ್ಯಚಟುವಟಿಕೆಗಳು, ಕೇಂದ್ರೀಕೃತ ವಲಯಗಳು ಮತ್ತು ಫಲಿತಾಂಶಗಳಲ್ಲಿನ ಆದ್ಯತೆ

ಚಿತ್ರ 2.5: ಸಂಸ್ಥೆಗಳ ವಿಸ್ತಾರ ಮತ್ತು ಮಾದರಿಗಳ ಆಧಾರಿತ ಆಶೋತ್ತರ ಮನೋಭಾವಗಳ ಸ್ತರೀಕೃತ ಪಟ್ಟಿ

ಚಿತ್ರ 2–7: ಗುಣಲಕ್ಷಣಗಳ ಸಮೂಹಗಳು

ಚಿತ್ರ 2–8: ಭೌಗೋಳಿಕವಾಗಿ ವಿತರಣೆಯಾದ ಕರ್ನಾಟಕದ ಉನ್ನತ ಶಿಕ್ಷಣ ಸಂಸ್ಥೆಗಳು

ಚಿತ್ರ 2–9: ಅಮೇರಿಕಾದ ಉನ್ನತ ಶಿಕ್ಷಣ ವ್ಯವಸ್ಥೆಯ ಸ್ವವಿವರ

ಚಿತ್ರ 2–10: ಮೂಲತತ್ವ ಚೌಕಟ್ಟಿನ ಮುಖೇನ ಕನ್ನಡದಲ್ಲಿ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನ

ಚಿತ್ರ 3–1: ಆಚರಣೆಗಳ ಮನೋಭಾವದ ದತ್ತಾಂಶಗಳ ರಚನೆ

ಚಿತ್ರ 3–2: ದತ್ತಾಂಶಗಳ ಚಲಾವಣೆ, ಪ್ರಮಾಣ ಮತ್ತು ಗುಣಮಟ್ಟ

ಚಿತ್ರ 3–3: ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಆಚರಣೆಯ ಮನೋಭಾವಗಳು

ಚಿತ್ರ 3–4: ಸಂಶೋಧನಾ ಆಚರಣೆಗಳ ಮನೋಭಾವಗಳಾಧಾರಿತ ಸಂಸ್ಥೆಗಳ ಸಮೂಹಗಳು

ಚಿತ್ರ 3–5: ಸಂಶೋಧನಾ ಆಚರಣೆಗಳ ಮನೋಭಾವಗಳಾಧಾರಿತ ಗುಣಲಕ್ಷಣಗಳ ಸಮೂಹಗಳು

ಚಿತ್ರ 3–6: ಶಿಕ್ಷಣ ಆಚರಣೆಗಳ ಮನೋಭಾವಗಳಾಧಾರಿತ ಸಂಸ್ಥೆಗಳ ಸಮೂಹಗಳು

ಚಿತ್ರ 3–7: ಶಿಕ್ಷಣ ಆಚರಣೆಗಳ ಮನೋಭಾವಗಳಾಧಾರಿತ ಗುಣಲಕ್ಷಣಗಳ ಸಮೂಹಗಳು

ಚಿತ್ರ 3–8: ಸೇವಾ ಆಚರಣೆಗಳ ಮನೋಭಾವಗಳಾಧಾರಿತ ಸಂಸ್ಥೆಗಳ ಸಮೂಹಗಳು

ಚಿತ್ರ 3–9: ಸೇವಾ ಆಚರಣೆಗಳ ಮನೋಭಾವಗಳಾಧಾರಿತ ಗುಣಲಕ್ಷಣಗಳ ಸಮೂಹಗಳು

ಚಿತ್ರ 4–1: ಕಾರ್ಯಕ್ಷಮತೆಯ ಅಂತರ

## ಅಧ್ಯಾಯ ೧ – ಪೀಠಿಕೆ

ಶಿಕ್ಷಣ, ಆರೋಗ್ಯ, ಕೃಷಿ, ನಗರ ಮತ್ತು ಗ್ರಾಮೀಣಾಭಿವೃದ್ಧಿ ವಲಯಗಳಲ್ಲಿನ ಜ್ಞಾನ ಸೃಷ್ಟಿ, ಪ್ರಸಾರ ಮತ್ತು ಅನ್ವಯಿಕಗಳಿಗೆ ಸಂಬಂಧಿಸಿದ ಒಳಗೊಳ್ಳುವಿಕೆ, ವಿಸ್ತರಣೆ ಹಾಗೂ ಸಂಸ್ಥೆಗಳ ಉತ್ಕೃಷ್ಟತೆ ಹೆಚ್ಚಿಸುವೆಡೆಗೆ ಕರ್ನಾಟಕದ ಮಾರ್ಗಸೂಚಿಯು ರಾಜ್ಯದಲ್ಲಿ ಜ್ಞಾನ ಸಮಾಜದ ನಿರ್ಮಾಣ ಕುರಿತಂತೆ ಆಲೋಚಿಸುತ್ತಿದೆ (ಕರ್ನಾಟಕ ಜ್ಞಾನ ಆಯೋಗ, ೨೦೧೧). ರಾಜ್ಯ ನವೀನ ವಿಶ್ವವಿದ್ಯಾನಿಲಯಗಳ ಶಾಸಕಾಂಗ ಮಸೂದೆಯು ಈ ಮಾರ್ಗಸೂಚಿಯ ಭಾಗವಾಗಿದೆ (ಕರ್ನಾಟಕ ಸರ್ಕಾರ, ೨೦೧೧). ರಾಜ್ಯದ ಮಾರ್ಗಸೂಚಿಯನ್ನು ಕ್ರಮಿಸಲು ವ್ಯವಸ್ಥೆಯ ಅಕಾಂಕ್ಷೆಗಳು, ಪ್ರಸ್ತುತ ಸ್ಥಿತಿ, ಆಕಾಂಕ್ಷೆಗಳು ಮತ್ತು ವಾಸ್ತವತೆಯ ನಡುವಿರುವ ಅಂತರಗಳು ಹಾಗೂ ಈ ಅಂತರಗಳನ್ನು ಕುಗ್ಗಿಸಲು ಅಳವಡಿಸಲು ಅಗತ್ಯವಾದ ಕಾರ್ಯತಂತ್ರಗಳನ್ನು ರೂಪಿಸುವುದು ಅತ್ಯಗತ್ಯ. ಅಧ್ಯಯನದ ಉದ್ದೇಶಗಳು/ಗುರಿಗಳು ಈ ಕೆಳಗಿನಂತಿವೆ.

೧. ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಕಾಂಕ್ಷೆಗಳು ಮತ್ತು ನೈಜತೆಗಳನ್ನು ರೂಪಿಸುವುದು
೨. ಎರಡರ ನಡುವಿನ ಅಂತರಗಳನ್ನು ನಿರ್ಣಯಿಸುವುದು ಹಾಗೂ ವಿಶ್ಲೇಷಿಸುವುದು

## ಈ ಹಿಂದಿನ ಅಧ್ಯಯನ

ಜ್ಞಾನ ಸಮಾಜವನ್ನಾಗಿ ಪರಿವರ್ತಿಸಲು ಬಯಸುತ್ತಿರುವ ಭಾರತದ ಅನೇಕ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಒಂದಾಗಿದೆ. ಜ್ಞಾನ ಸಮಾಜವು ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜ್ಞಾನದ ಮೌಲ್ಯಗಳನ್ನು ಅರ್ಥೈಸುತ್ತದೆ (ಬಿಂಡೆ, ೨೦೦೫). ಇಂತಹ ಸಮಾಜವು ವಿಶ್ವವ್ಯಾಪಿ, ಸಾರ್ವತ್ರಿಕ ಲಭ್ಯತೆ, ಸಬಲೀಕರಣ ಮತ್ತು ಅಜೀವ ಕಲಿಕೆಗಳನ್ನು ಅನ್ವೇಷಿಸುತ್ತದೆ (ಕರ್ನಾಟಕ ಜ್ಞಾನ ಆಯೋಗ, ೨೦೧೧). ದೃಷ್ಟಿಕೋನವನ್ನು ಕೈಗೂಡಿಸಿಕೊಳ್ಳಲು ವೈವಿಧ್ಯಯುತವಾದ ಸಾಂಪ್ರದಾಯಿಕ ಸ್ವತ್ತುಗಳು ಮತ್ತು ನವೀನ ಅಭಿವೃದ್ಧಿಯ ಪ್ರಕಾರಗಳು, ಸ್ವಾಧೀನತೆ ಹಾಗೂ ಜ್ಞಾನದ ಆರ್ಥಿಕ ಮಾದರಿಯ ಮನ್ನಣೆಯನ್ನು ಹೊಂದಿರುವ ಜ್ಞಾನದ ಹರವುಗಳೊಂದಿಗೆ ಸಂಪರ್ಕ ಹೊಂದಲೇಬೇಕು (ಬಿಂಡೆ, ೨೦೦೫ ಪುಟ. ೧೭). ತನ್ನ ಜ್ಞಾನ ಪರಿಸರವನ್ನು ಪರಿವರ್ತಿಸಿಕೊಳ್ಳಲೇಬೇಕು. ರಾಜ್ಯದ ಮಾಹಿತಿ ತಂತ್ರಜ್ಞಾನ ವಲಯದ ಕ್ಷಿಪ್ರ ಬೆಳವಣಿಗೆಯು ಪರಿವರ್ತನೆಯ ಪ್ರಮುಖ ಪ್ರಚೋದಕ ಶಕ್ತಿಯಾಗಿದೆ. ಕರ್ನಾಟಕವನ್ನು ಜ್ಞಾನ ಸಮಾಜವನ್ನಾಗಿ ಪರಿವರ್ತಿಸುವ ಹೆಬ್ಬಯಕೆಯನ್ನು ಸುಗಮಗೊಳಿಸಲು, ರಾಜ್ಯ ಸರ್ಕಾರವು ರಾಷ್ಟ್ರೀಯ ಜ್ಞಾನ ಆಯೋಗದ (ರಾಷ್ಟ್ರೀಯ ಜ್ಞಾನ ಆಯೋಗ ೨೦೦೬ಎ, ೨೦೦೬ ಬಿ) ಮಾದರಿಯಲ್ಲಿ ಕರ್ನಾಟಕ ಜ್ಞಾನ ಆಯೋಗವನ್ನು (ಕರ್ನಾಟಕ ಜ್ಞಾನ ಆಯೋಗ; ರಾಮಪ್ರಸಾದ ಹಾಗೂ ಶ್ರೀಧರ್, ೨೦೧೧) ರಚಿಸಿದೆ.

ಕರ್ನಾಟಕ ಜ್ಞಾನ ಆಯೋಗದ ವತಿಯಿಂದ ನಿಯೋಜಿತವಾದ ಕರ್ನಾಟಕದ ಜ್ಞಾನ ಸಮಾಜದ ಅಧ್ಯಯನದ ವರದಿಯು ಇಂತಹ ಸಮಾಜದ ಅಭಿವೃದ್ಧಿಗಾಗಿ ಗ್ರಹಿಸಿದ ಮಾರ್ಗಸೂಚಿಯನ್ನು ಪ್ರತಿನಿಧಿಸುತ್ತದೆ (ಕರ್ನಾಟಕ ಜ್ಞಾನ ಆಯೋಗ, ೨೦೧೧). ಮಾರ್ಗಸೂಚಿಯನ್ನು ಮೂಲತತ್ವದ ಅಡಕವಾಗಿ ಚಿತ್ರ ೧–೧ರಲ್ಲಿ ನಿರೂಪಿಸಲಾಗಿದೆ.

ಮಾರ್ಗಸೂಚಿಯು ಐದು ಫಲಿತಾಂಶಗಳಿಗೆ ಸಂಬಂಧಿಸಿದ ಐದು ವಲಯಗಳಲ್ಲಿನ ಜ್ಞಾನ ಸೃಷ್ಟಿ, ಪ್ರಸರಣ ಮತ್ತು ಅನ್ವಯಿಕಗಳ ಸಾಧನೆಗಾಗಿ ಸಂಸ್ಥೆಗಳ ಒಳಗೊಳ್ಳುವಿಕೆ, ವಿಸ್ತರಣೆ ಹಾಗೂ ಶ್ರೇಷ್ಠತೆಯನ್ನು ಹೊಂದುವೆಡೆಗೆ ಗುರಿಮಾಡುತ್ತಿದೆ. ಮೂಲತತ್ವದಲ್ಲಿ ಕೋಶೀಕರಿಸಲ್ಪಟ್ಟ ಸುಮಾರು ೨೨೫ ಸಂಯೋಜನೆಗಳ ಕುರಿತು ವರದಿಯು ಸ್ಪಷ್ಟವಾಗಿ ಅಭಿವ್ಯಕ್ತಿಗೊಳಿಸಿದೆ ಹಾಗೂ ಇದರಲ್ಲಿ ಮೂರನ್ನು ಕೆಳಗಿನ ಚಿತ್ರ ೧ರಲ್ಲಿ ವಿವರಿಸಲಾಗಿದೆ. ಈ ಪ್ರಕಲ್ಪವು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ಜ್ಞಾನ ಸೃಷ್ಟಿ, ಪ್ರಸರಣ ಮತ್ತು ಅನ್ವಯಿಕಗಳಿಗಾಗಿ ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳ (ಚಿತ್ರವನ್ನು ಕೆಂಪು ಬಣ್ಣದಲ್ಲಿ ನಮೂದಿಸಲಾಗಿದೆ) ಸುತ್ತ ಕೇಂದ್ರಿಕೃತವಾಗಿದೆ.

ಕರ್ನಾಟಕ ರಾಜ್ಯ ನವೀನ ವಿಶ್ವವಿದ್ಯಾನಿಲಯಗಳ ಮಸೂದೆ, ೨೦೧೧ (ಕರ್ನಾಟಕ ಸರ್ಕಾರ, ೨೦೧೧) ಯು ಮಾರ್ಗಸೂಚಿಯನ್ನು ಒಂದು ಹೊಸ ವಿಧದ ಸಂಸ್ಥೆಯ ಮುಖೇನ ಅನುಷ್ಠಾನಗೊಳಿಸುವ ಒಂದು ಭಾಗವಾಗಿ ಪರಿಣಮಿಸಿದೆ. ಕರ್ನಾಟಕ ರಾಜ್ಯದ ಕೆಲವು ವಿಶ್ವವಿದ್ಯಾನಿಲಯಗಳ ಪುನರ್ರಚನೆ ಮತ್ತು ವಿಕೇಂದ್ರಿಕೃತ ಹಾಗೂ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯಚಟುವಟಿಕೆಗಳನ್ನು ಪ್ರತ್ಯೇಕಿಸುವುದರ ಮುಖಾಂತರ ಶೈಕ್ಷಣಿಕ ಪರಿಧಿಯಲ್ಲಿ ಸ್ವಾಯತ್ತತೆಯನ್ನು ಒದಗಿಸಿ ನವೀನ ವಿಶ್ವವಿದ್ಯಾನಿಲಯಗಳಾಗಿ ರೂಪಾಂತರಿಸುವ ತ್ವರಿತ ಕ್ರಿಯೆಯನ್ನು ವರದಿಯು ಒದಗಿಸುತ್ತಿದೆ. ಅಂತರವಿಭಾಗೀಯ ವಿಧಾನ ಹಾಗೂ ಇದಕ್ಕೆ ಸಂಬಂಧಿಸಿದ ಅಥವಾ ಸಾಂದರ್ಭಿಕ ಇತರೆ ವಿಷಯಗಳ ಮುಖಾಂತರ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಹಾಗೂ ಸಂಶೋಧನಾ ವಿನ್ಯಾಸಗಳಿಗೆ ಮಹತ್ತರವಾದ ನಮನೀಯತೆಯನ್ನು ಒದಗಿಸುತ್ತದೆ (ಕರ್ನಾಟಕ ಸರ್ಕಾರ, ೨೦೧೧). ಕರ್ನಾಟಕದ ಅತ್ಯಂತ ಹಳೆಯ ವಿಶ್ವವಿದ್ಯಾನಿಲಯಗಳಾದ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳು ನವೀನ ವಿಶ್ವವಿದ್ಯಾನಿಲಯಗಳೆಂದು ನಿಯೋಜಿತವಾಗಿವೆ.

| **ಹಂತ** | | **ಪ್ರಕ್ರಿಯೆ** | | **ವಲಯ** | | **ಫಲಿತಾಂಶ** | |
|---|---|---|---|---|---|---|---|
| ಅಂತರ್ಗತ | ಸಂ | ಸೃಷ್ಟಿ | ಜ್ಞಾ | ಶಿಕ್ಷಣ | ಗೆ | ಜಾಗತಿಕ ಉಪಸ್ಥಿತಿ | ಜ್ಞಾ |
| ವಿಸ್ತರಣೆ | ಸ್ಥೆ | ಪ್ರಸರಣೆ | ನ | ಆರೋಗ್ಯ | | ಜಾಗತಿಕ ನಿಲುಕಣೆ | ನ |
| ಶ್ರೇಷ್ಠತೆ | | ಅನ್ವಯಿಕ | | ಕೃಷಿ | | ಸಮಾನ ಪ್ರವೇಶ | |
| | ಗ | | ದ | ನಗರಾಭಿವೃದ್ಧಿ | | ಸಬಲತೆ | ಸ |
| | | | | ಗ್ರಾಮೀಣಾಭಿವೃದ್ಧಿ | | ಅಜೀವಮಾನ ಕಲಿಕೆ | |
| | ಳಿ | | | | | | ಮಾ |

**<u>ವಿವರಣಾತ್ಮಕವಾದ ಸಂಯೋಜನೆಗಳು</u>**

ಜ್ಞಾನಸಮಾಜದಲ್ಲಿ ಜಾಗತಿಕ ಉಪಸ್ಥಿತಿಗಾಗಿ ಶಿಕ್ಷಣದ ಜ್ಞಾನ ಪ್ರಸರಣದಲ್ಲಿ ಸಂಸ್ಥೆಗಳ ಒಳಗೊಳ್ಳುವಿಕೆ
ಜ್ಞಾನಸಮಾಜದಲ್ಲಿ ಜಾಗತಿಕ ನಿಲುಕಣೆಗಾಗಿ ಆರೋಗ್ಯ ಕ್ಷೇತ್ರದ ಜ್ಞಾನ ಅನ್ವಯಿಕಗಳಲ್ಲಿ ಸಂಸ್ಥೆಗಳ ವಿಸ್ತರಣೆ
ಜ್ಞಾನಸಮಾಜದಲ್ಲಿ ಸಬಲೀಕರಣಕ್ಕಾಗಿ ಕೃಷಿ ಕ್ಷೇತ್ರದ ಜ್ಞಾನ ಸೃಷ್ಟಿಯಲ್ಲಿ ಸಂಸ್ಥೆಗಳ ಹಿರಿಮೆ

ಚಿತ್ರ ೧–೧: ಕರ್ನಾಟಕದ ಜ್ಞಾನಸಮಾಜದ ಮಾರ್ಗಸೂಚಿ (ಕರ್ನಾಟಕ ಜ್ಞಾನ ಆಯೋಗ, ೨೦೧೧)

ನವೀನ ವಿಶ್ವವಿದ್ಯಾನಿಲಯಗಳ ಮಸೂದೆ ಮತ್ತು ಕರ್ನಾಟಕ ಜ್ಞಾನ ಸಮಾಜದ ಅಧ್ಯಯನಗಳು ಜ್ಞಾನ ಸಮಾಜವನ್ನಾಗಿ ಪರಿವರ್ತಿಸುವಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯು ಸಲ್ಲಿಸಿರುವ ಮಹತ್ತರವಾದ ಪಾತ್ರಗಳನ್ನು ಒತ್ತಿಹೇಳಿವೆ. ಪ್ರತಿ ಸಂಸ್ಥೆಗಳು ಪರಿವರ್ತನೆಯತ್ತ ದಾಪುಗಾಲು ಹಾಕುವಲ್ಲಿ ಮಹತ್ತರ ಪಾತ್ರವನ್ನು ವಹಿಸಬಹುದಾಗಿದೆ (ಚಿತ್ರ ೧–೧ ಬಲತುದಿಯ ಅಂಕಣದಲ್ಲಿ). ಅದಾಗ್ಯೂ, ಉನ್ನತ ಶಿಕ್ಷಣ ವ್ಯವಸ್ಥೆಯು ಪರಿವರ್ತನೆಯಾದಲ್ಲಿ ಮಾತ್ರವೇ ಪರಿಣಾಮಕಾರಿಯಾದ ಪರಿವರ್ತನೆಯನ್ನು ಜ್ಞಾನ ಸಮಾಜದಲ್ಲಿ ಅದರಲ್ಲೂ ಇಚ್ಛಿತ ಫಲಿತಾಂಶಗಳನ್ನು ಸಾಧಿಸಬಹುದಾಗಿದೆ. 'ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನ' ಯೋಜನೆಯು ಅಕ್ಷರಶಃ ರಾಜ್ಯದ ಪರಿವರ್ತನೆಯ ಕಾರ್ಯಸೂಚಿಯ ಅಂಗವಾಗಿದೆ. ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯು ಕರ್ನಾಟಕವನ್ನು, ೧೨ನೇ ಪಂಚವಾರ್ಷಿಕ ಯೋಜನೆಯೊಂದಿಗೆ ಬೆರೆಯಲು ನೆರವಾಗುವುದಲ್ಲದೇ, ರಾಜ್ಯದ ಉನ್ನತ ಶಿಕ್ಷಣದ ಯೋಜನೆಗಳ ಮಹತ್ವಗಳನ್ನು ತನ್ನ ವರದಿಯಲ್ಲಿ ಪ್ರಸ್ತಾಪಿಸಿದೆ (ಯೋಜನಾ ಆಯೋಗ, ೨೦೧೧).


ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನವು ರಾಜ್ಯದ ಪರಿವರ್ತನೆಯ ಒಂದು ನಿರ್ಣಾಯಕ ಘಟಕವಾಗಿ ಪರಿಣಮಿಸಲಿದೆ ಎಂದು ವರದಿಯಲ್ಲಿ ಪ್ರತಿಪಾದಿದ್ದೇವೆ. ಉನ್ನತ ಶಿಕ್ಷಣ ವ್ಯವಸ್ಥೆಯು ಜ್ಞಾನ ಪರಿಸರವನ್ನು ಪೋಷಿಸುತ್ತಿದೆಯಲ್ಲದೇ, ಜ್ಞಾನ ಪರಿಸರದಿಂದ ತನ್ನನ್ನು ತಾನು ಆರೈಸಿಕೊಳ್ಳುತ್ತಿದೆ. ಸಂಸ್ಥೆಗಳು ಸಂಕೀರ್ಣ

ಜಾಲಬಂಧಗಳಿಂದ ಜ್ಞಾನ ಸಮಾಜವನ್ನು ಸಾಧಿಸುತ್ತವೆ ಎಂಬ ಅಂಶವನ್ನು ರೂಪುರೇಷೆಗಳ ಸಹಿತ ಕರ್ನಾಟಕದ ಜ್ಞಾನ ಪರಿಸರವನ್ನು ನಾವು ಮುಂದಿನ ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಿದ್ದೇವೆ. ನಂತರದ ಹಂತದಲ್ಲಿ ವಿಶಾಲವಾಗಿ ಮಾಪಿಸಲು ಉನ್ನತ ಶಿಕ್ಷಣ ವ್ಯವಸ್ಥೆ ಹಾಗೂ ಅದರ ಪ್ರಸ್ತುತ ಚೌಕಟ್ಟನ್ನು ದೀರ್ಘವಾಗಿ ಚರ್ಚಿಸಿದ್ದೇವೆ.

## ಕರ್ನಾಟಕದ ಜ್ಞಾನ ಪರಿಸರ

ಜ್ಞಾನ ಸಮಾಜದ ಗುರಿಗಳು ವಿಶಾಲವಾಗಿವೆ ಮತ್ತು ವಿಭಿನ್ನತೆಯಿಂದ ಕೂಡಿದೆ. (ಅ)ಸಂಶೋಧನೆ ಮತ್ತು ಅವಿಷ್ಕಾರ (ಆ) ನಾವೀನ್ಯತೆ ಮತ್ತು ಸೃಜನಶೀಲತೆ (ಇ) ಶಿಕ್ಷಣ, ಕಲಿಕೆ ಮತ್ತು ಮಾನವ ಬಂಡವಾಳದ ಅಭಿವೃದ್ಧಿ (ಈ) ಸಾಂಸ್ಕೃತಿಕ ಪ್ರಗತಿ ಮತ್ತು ಪ್ರಜಾಸತ್ತೀಯ ಮೌಲ್ಯಗಳು (ಉ) ಸೇವಾ ಸೌಲಭ್ಯಗಳು ಹಾಗೂ ಸಮಾಜದೊಂದಿಗಿನ ಬಾಂಧವ್ಯಗಳ ಮುಖಾಂತರ ಸಮಾಜದ ಪ್ರಗತಿಗಾಗಿ ಜ್ಞಾನದ ವಿವಿಧ ತಲೆಮಾರುಗಳನ್ನು ಹಾಗೂ ಅನ್ವಯಿಕಗಳನ್ನು ಪೋಷಿಸಿ, ಸಲಹುವ ಜ್ಞಾನ ಪರಿಸರದ ವಿಕಸನ ಅಗತ್ಯ (ಡುಡರ್‌ಸ್ಟಾಟ್, ೨೦೧೧). ಸಮಾಜಕ್ಕೆ ಸುಲಭಸಾಧ್ಯವಾದ ಗುಣಮಟ್ಟ ಜ್ಞಾನ ಹಾಗೂ ಅದರ ಲಭ್ಯತೆಯ ವ್ಯವಸ್ಥೆಯನ್ನು ಹೊಂದಿರುವುದು (ಬಿಂಡೆ, ೨೦೦೫). ಸಮಾಜದ ಶಿಕ್ಷಣ ಮೂಲಸೌಕರ್ಯಗಳು ಈ ಗುರಿಗಳನ್ನು ಸಮರ್ಥವಾಗಿ ಸಾಧಿಸಲು ಹಾಗೂ ಅರಿತುಕೊಳ್ಳಲು ಕೇಂದ್ರಬಿಂದುವಾಗಿದೆ, ಈ ಅಂಶವನ್ನು ಸಚಿತ್ರ ಸಹಿತ ಚಿತ್ರ ೧–೨ ರಲ್ಲಿ ವಿವರಿಸಲಾಗಿದೆ.

ಜ್ಞಾನ ಪರಿಸರವು ಒಟ್ಟು ಏಳು ಸಂಸ್ಥೆಗಳ ನಡುವಿನ ಸಮಾಲೋಚನೆಯಿಂದ ಕೂಡಿದೆ. ಪರಿಸರದ ಅಕ್ಷವು ವಿಶ್ವವಿದ್ಯಾನಿಲಯಗಳು, ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳು, ಕಾಲೇಜುಗಳು ಮತ್ತು ಶಾಲೆಗಳನ್ನು ಹೊಂದಿದೆ. ಸರ್ಕಾರೀ ವಿಶ್ವವಿದ್ಯಾನಿಲಯಗಳು, ಇತರ ವಿಶ್ವವಿದ್ಯಾನಿಲಯಗಳು, ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳು/ಕೇಂದ್ರಗಳು ಮತ್ತು ವಿಶ್ವವಿದ್ಯಾನಿಲಯ ರೀತಿಯ ಕಾರ್ಪೊರೇಟ್ ಘಟಕಗಳು ಮೇಲ್ಭಾಗದಲ್ಲಿ, ಕಾಲೇಜುಗಳು ಮಧ್ಯಭಾಗದಲ್ಲಿ ಹಾಗೂ ಶಾಲೆಗಳು ತಳಭಾಗದಲ್ಲಿ ಇವೆ. ವೃತ್ತಿಪರ ಶಿಕ್ಷಣ, ಸಾಂಸ್ಕೃತಿಕ ಸಂಪನ್ಮೂಲಗಳು, ಅನೌಪಚಾರಿಕ ಮತ್ತು ಪೂರಕ ಶಿಕ್ಷಣ ಸಂಸ್ಥೆಗಳು ಪರಿಸರದ ಅವಿಭಾಜ್ಯ ಅಂಗವಾಗಿದೆ. ಪ್ರತಿಯೊಂದು ಉಪ–ವಿಭಾಗಗಳು ಮತ್ತು ಅದರ ಅಂದಾಜು ಸಂಖ್ಯೆಗಳ ಮಾಹಿತಿಗಳನ್ನು ಕೋಷ್ಟಕದಲ್ಲಿ ನೀಡಲಾಗಿದೆ. ಪರಿಸರವು ಸಂಕೀರ್ಣ ಮತ್ತು ವಿಕಸನಗೊಳ್ಳುತ್ತದೆ.




ಚಿತ್ರ ೧–೨: ಕರ್ನಾಟಕದ ಜ್ಞಾನಪರಿಸರ

ರೂಪುರೇಷೆಯಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯು ವಿವಿಧ ವಿಭಾಗಗಳ ವಿಶ್ವವಿದ್ಯಾನಿಲಯಗಳು, ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳು ಮತ್ತು ಕಾಲೇಜುಗಳನ್ನು ಒಳಗೊಂಡಿರುವುದನ್ನು ಕೆಂಪು ಬಣ್ಣದಲ್ಲಿ ತೋರಿಸಲಾಗಿರುವ ಕೋಷ್ಟಕದಲ್ಲಿ, ಬಹುಸಂಖ್ಯೆಯಲ್ಲಿ ಸಂಸ್ಥೆಗಳು ಈ ವ್ಯವಸ್ಥೆಯನ್ನು ಪ್ರತಿನಿಧಿಸಿವೆ. ೬೫ಕ್ಕಿಂತ ಹೆಚ್ಚು ವಿಶ್ವವಿದ್ಯಾನಿಲಯಗಳು ಹಾಗೂ

ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳು ಮತ್ತು ೧೨೨೮ಕಿಂತ ಹೆಚ್ಚು ಕಾಲೇಜುಗಳು ಕರ್ನಾಟಕ ರಾಜ್ಯಾದಾದ್ಯಂತ ಹಬ್ಬಿವೆ. ಹೀಗಾಗಿ ಉನ್ನತ ಶಿಕ್ಷಣ ವ್ಯವಸ್ಥೆಯು ಜ್ಞಾನ ಪರಿಸರವನ್ನು ಪ್ರೇರೇಪಿಸಬೇಕು ಹಾಗೂ ಸ್ವತಃ ಪ್ರೇರೇಪಿಸಲ್ಪಡಬೇಕು.

ಜ್ಞಾನ ಪರಿಸರದ ಪರಿಣಾಮಕಾರಿತ್ವ ಪ್ರತಿ ಘಟಕಗಳ ಭಿನ್ನತೆ ಹಾಗೂ ಸಂಯೋಜನೆಯ ಮೇಲೆ ನಿರ್ಧರಿತವಾಗಿದೆ. ಉದಾಹರಣೆಗೆ, ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯ ವ್ಯವಸ್ಥೆಗಳು ಪ್ರಭಾವಶಾಲಿಯಾದ ಜ್ಞಾನ ಪೂರೈಕಾ ಸರಪಳಿಯನ್ನು ರೂಪಿಸುವುದು. ಶಾಲಾ ವಿದ್ಯಾರ್ಥಿಗಳು ಕಾಲೇಜು ವಿದ್ಯಾಭ್ಯಾಸವನ್ನು ಪೂರೈಸಲು ಅಸಮರ್ಥನಾಗಿದ್ದಲ್ಲಿ, ಹಾಗೂ ಕಾಲೇಜು ವಿದ್ಯಾರ್ಥಿಗಳು ಉದ್ಯೋಗಾಕಾಂಕ್ಷಿಗಳಾಗದೇ ಇದ್ದಲ್ಲಿ ಈ ಸರಪಳಿಯು ನಿಷ್ಫಲವಾಗುವುದು. ಅಂತೆಯೇ, ಜ್ಞಾನ ಪರಿಸರದಿಂದ ನೇಯಲ್ಪಟ್ಟ ಸಾಂಸ್ಕೃತಿಕ ಸಂಪನ್ಮೂಲಗಳು ತಾಂತ್ರಿಕವಾಗಿ ಪ್ರವೀಣ ಹಾಗೂ ಉತ್ತಮ ವಿದ್ಯಾರ್ಥಿಗಳ ಉಗಮವಾಗುವುದಲ್ಲದೇ, ಮಾನವೀಯ ಮೌಲ್ಯಗಳು ಹಾಗೂ ನೈತಿಕತೆಗಳನ್ನು ಬದಿಗೊತ್ತು ಅಪೂರ್ಣರಾಗಿರುತ್ತಾರೆ.

## ಉನ್ನತ ಶಿಕ್ಷಣ ವ್ಯವಸ್ಥೆ

ಉನ್ನತ ಶಿಕ್ಷಣ ವ್ಯವಸ್ಥೆಯು ಜ್ಞಾನ ಪರಿಸರದ ಚಲನಾಶಕ್ತಿ ಹಾಗೂ ಜ್ಞಾನ ಪೀಳಿಗೆ, ಪ್ರಸರಣ ಮತ್ತು ಅನ್ವಯಿಕಗಳ ಕೇಂದ್ರಬಿಂದುವಾಗಿದೆ. ಉನ್ನತ ಶಿಕ್ಷಣದ ಪರಿಣಾಮಕಾರಿತ್ವ ರಾಜ್ಯವನ್ನು ಜ್ಞಾನ ಸಮಾಜವನ್ನಾಗಿ ಪರಿವರ್ತಿಸುವುದರಲ್ಲಿದೆ. ಹೀಗಾಗಿ ಶ್ರೇಷ್ಠ ಉನ್ನತ ಶಿಕ್ಷಣ ಸಂಸ್ಥೆಗಳ ಜೊತೆ ಜೊತೆಯೊಂದಿಗೆ ಉತ್ತಮ ಉನ್ನತ ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿಯು ಒಂದು ಸವಾಲಾಗಿ ಪರಿಣಮಿಸಿದೆ.

> ಕೆಲವು ದೇಶಗಳ ಸಣ್ಣ ಪ್ರಮಾಣದ ಮುಂಚೂಣಿ ವಿಶ್ವವಿದ್ಯಾನಿಲಯಗಳು ಯಥಾರ್ಥವಾಗಿ ವಿಶ್ವ ದರ್ಜೆಯ ವಿಶ್ವವಿದ್ಯಾಲಯದ ಹಕ್ಕನ್ನು ಸಾಧಿಸುತ್ತದೆ. ಬಹುತೇಕ ಉನ್ನತ ಶಿಕ್ಷಣದ ಸಂಸ್ಥಾಪನೆಗಳ ಗುರಿ ನಿರ್ದಿಷ್ಟ ಕ್ಷೇತ್ರಗಳನ್ನು ಸಶಕ್ತಗೊಳಿಸುವ ಬದಲು ವಿದ್ಯಾರ್ಥಿ ವೃಂದಗಳ ಲಕ್ಷ್ಯ ಸೆಳೆಯುವುದಾಗಿದೆ. ಉತ್ತಮ ಗುಣಮಟ್ಟದ ಪದವಿಗಳು ಹಾಗೂ ಡಿಪ್ಲೋಮಾಗಳ ಬದಲಿಗೆ ಉನ್ನತ ಶಿಕ್ಷಣದ ಸಮೂಹೀಕರಣ ಸಮರ್ಪಕವಾಗಿ ಸ್ಪಂದಿಸುತ್ತವೆ; ಗುಣಮಟ್ಟ ನಿಯಂತ್ರಣ ಕಾರ್ಯವಿಧಾನಗಳು ಶಿಕ್ಷಕರ ಶೈಕ್ಷಣಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸಿಲ್ಲ; ಸಾರ್ವಜನಿಕ ನಿಧಿ ಗಣನೀಯವಾಗಿ ಇಳಿಕೆಯಾಗುತ್ತಿರುವ ಸಂದರ್ಭದಲ್ಲಿಯೂ ಸಹಾ ವಿಭಿನ್ನ ಕೋರ್ಸುಗಳನ್ನು ನಿಭಾಯಿಸುತ್ತಿವೆ; ಹೊಣೆ ಮತ್ತು ನಾಗರೀಕ ಮನೋಭಾವ ಹಾಗೂ ಸಂಶೋಧನಾ ಹಿರಿಮೆಯೊಂದಿಗೆ ಬೋಧನಾ ಶ್ರೇಷ್ಠತೆಯನ್ನು ಉಳಿಸಿಕೊಂಡೇ ಸ್ವಾಯತ್ತತೆಯನ್ನು ಹೊಂದಿರುವುದು, ಇವುಗಳೆಲ್ಲದರ ನಡುವೆಯೂ ಈ ಸಂಸ್ಥಾಪನೆಗಳು ಆಗಾಗ್ಗೆ ವಿರೋಧಾತ್ಮಕ ಬೇಡಿಕೆಗಳನ್ನು ಪೂರೈಸಲು ಪ್ರಯತ್ನಿಸುತ್ತಿರುತ್ತವೆ (ಬಿಂಡೆ, ೨೦೦೫ ಪುಟ ೯೧).

ಸೈದ್ಧಾಂತಿಕವಾಗಿ ಅತ್ಯುತ್ತಮ ಉನ್ನತ ಶಿಕ್ಷಣ ವ್ಯವಸ್ಥೆಯು ಹೆಚ್ಚಿನ ಭಿನ್ನತೆ ಹೊಂದಿರುವ ಸಂಸ್ಥೆಗಳಿಂದ ಕೂಡಿದ್ದರೂ ಕೂಡಾ ದೃಢವಾದ ಸಮಗ್ರ ದೃಷ್ಟಿಕೋನಗಳಿಂದ ಕೂಡಿದ ವಿಶ್ವವಿದ್ಯಾನಿಲಯಗಳು, ಕಾಲೇಜುಗಳು, ಶಾಲೆಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳು; ನಗರ, ರಾಜ್ಯ, ಪ್ರಾಂತ ಮತ್ತು ವಿಶ್ವ ಕೇಂದ್ರಿತ, ವಿಜ್ಞಾನ, ಉದ್ಯೋಗ, ವೃತ್ತಿ ಪರಿಣಿತಿ, ಕಲೆ, ಮಾನವಿಕಗಳಲ್ಲಿನ ಪರಿಣಿತಿ; ವೈಜ್ಞಾನಿಕ, ತಾಂತ್ರಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಪರಿಣಾಮಗಳಿಂದ ಸಂಸ್ಥೆಗಳ ಪ್ರಾಧಾನ್ಯತೆಗಳನ್ನು ಹೋಲಿಸಬಹುದಾಗಿದೆ. ಇನ್ನೂ ಸಂಸ್ಥೆಗಳು ಸಮಾಜದ ಅಭಿವೃದ್ಧಿಗೆ ತಕ್ಕಂತೆ ವರ್ತಿಸಬೇಕಾಗಿದೆ. ಜ್ಞಾನ ವೃದ್ಧಿಸಲು, ಸಂಗ್ರಹಿಸಲು, ಹರಡಲು ಮತ್ತು ಸಮಾಜದ ಅಭಿವೃದ್ಧಿಯ ಅನ್ವಯಕ್ಕಾಗಿ ಸುಸಂಬದ್ಧ, ಸಂಯೋಜಿತ, ಸಂಕೀರ್ಣ ಜಾಲಬಂಧ ರೂಪಿಸಬೇಕು (ಬಿಂಡೆ, ೨೦೦೫).

ಪರಸ್ಪರಾವಲಂಬನೆ ಮತ್ತು ಸಮಾಜದೊಂದಿಗಿನ ಸಂವಹನ ಮತ್ತು ಜ್ಞಾನ ಸಮಾಜವನ್ನು ಮುನ್ನಡೆಸಲು ಜೀವಂತ ಸಮಾಜದ ರಚನೆ ನಿಟ್ಟಿನತ್ತ ವ್ಯವಸ್ಥೆಯು ದಾಪುಗಾಲು ಹಾಕಬೇಕು. ಗಣಕಯಂತ್ರ ಸಂಬಂಧಿತ ಪಠ್ಯಕ್ರಮ ಮತ್ತು ತರಬೇತಿ ಕಾರ್ಯಕ್ರಮಗಳ ಭಾರಿ ಪ್ರಗತಿಯನ್ನು ಪರಿಗಣಿಸಿದರೆ ಹಾಗೂ ಸಂಸ್ಥೆಗಳ ಸಂಶೋಧನಾ ನಾವೀನ್ಯತೆಗಳು ಹೊಸ ಉದ್ಯೋಗಗಳ ಉಗಮಕ್ಕೆ ನಾಂದಿಯಾಡುತ್ತದೆ. ಶುಶ್ರೂಷಾ ವೃತ್ತಿ ಮತ್ತು ಫ್ಯಾಷನ್ ವಿನ್ಯಾಸಗಳ ಹೊರಹೊಮ್ಮಿಕೆಗಳನ್ನು ಗಮನಿಸಿದರೆ, ಸಾಮಾಜಿಕ ಬದಲಾವಣೆಗಳು ವ್ಯವಸ್ಥೆಯ ನವೀನ ಪಠ್ಯಕ್ರಮಗಳು ಮತ್ತು ತರಬೇತಿ ಕಾರ್ಯಕ್ರಮಗಳ ಜನನಕ್ಕೆ ಕಾರಣವಾಗುತ್ತವೆ.

ಏಕಪ್ರಕಾರದ ವ್ಯವಸ್ಥೆಯನ್ನು ಹೊಂದಿರುವ ಸಂಸ್ಥೆಗಳು ಬದ್ಧವಾಗಿರುವ ಸಾಮಾನ್ಯ ಅವಶ್ಯಕತೆಗಳಲ್ಲಿನ ಭಿನ್ನತೆಯು (ಮತ್ತು ಸಂಯೋಜನೆ) ಪರ್ಯಾವಸಾನಗೊಳ್ಳುವುದಿಲ್ಲ ಬದಲಿಗೆ ರಾಜ್ಯಗಳು ಮತ್ತು ದೇಶದಲ್ಲಿ ಅಂತರ್ಗತ ಬೆಳವಣಿಗೆಯನ್ನು ಸಮರ್ಥಿಸುವ ಮಾದರಿಯ ಅಗತ್ಯತೆ ಇದೆ. ಏಕರೂಪತೆಯು ಉನ್ನತ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಸಾಧ್ಯತೆ ಇದೆಯೇ ವಿನಾಃ ಬಲಪಡಿಸುವುದಿಲ್ಲ. ರಾಜ್ಯ ವಿಶ್ವವಿದ್ಯಾನಿಲಯಗಳು, ಖಾಸಗಿ ವಿಶ್ವವಿದ್ಯಾನಿಲಯಗಳು, ಸ್ವಾಯತ್ತ ವಿಶ್ವವಿದ್ಯಾನಿಲಯಗಳು ಮತ್ತು ಇತರ ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳು ವಿವಿಧ ಧ್ಯೇಯಗಳನ್ನು ಹೊಂದಿದ್ದರೂ ಸಹಾ ಮತ್ತು ಅತ್ಯುತ್ತಮ ಕುಶಲತೆಗಳನ್ನು ಸಾಧಿಸುವ ಪೈಪೋಟಿಯ ಸಂದರ್ಭದಲ್ಲಿ, ಗುಣಮಟ್ಟದ ಶಿಕ್ಷಣದ ನಿಲುಕಣೆ ಹಾಗೂ ಸಮಾನತೆಯನ್ನು ಸಾರಲು ಪರಸ್ಪರ ಸಹಯೋಗವನ್ನು ಹೊಂದಬೇಕು.

ಒಂದು ವ್ಯವಸ್ಥೆಯು ನಿರಂತರ ವಿಕಸನ ಮತ್ತು ಬದಲಾಗುತ್ತಿರುವ ಸ್ಥಳೀಯ ಹಾಗೂ ಜಾಗತಿಕ ಪರಿಸರಕ್ಕೆ ಆಳವಡಿಕೆಯಾಗುತ್ತಿರಬೇಕು. ವ್ಯವಸ್ಥೆಯನ್ನು ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಬೇಕೇ ಹೊರತು, ಕೆಲವೇ ಕೆಲವು ವಿಶ್ವ ದರ್ಜೆಯ ವಿಶ್ವವಿದ್ಯಾನಿಲಯಗಳಿಂದ ರೂಪಿತವಾಗುತ್ತಿವೆ ಎಂಬ ಅಂಶ ಅಸಂಭವ, ವಿಶ್ವ ದರ್ಜೆಯ ವಿಶ್ವವಿದ್ಯಾನಿಲಯಗಳ ಅಗತ್ಯವೂ ಇದಕ್ಕೆ ಇಲ್ಲ ಮತ್ತು ವಿಶ್ವ ದರ್ಜಾ ಉನ್ನತ ಶಿಕ್ಷಣ ವ್ಯವಸ್ಥೆ ಪೂರ್ಣವಾಗಿಯೂ ಇಲ್ಲ. ಫಿನ್‌ಲ್ಯಾಂಡ್ ದೇಶವು ವಿಶ್ವ ದರ್ಜೆಯ ಉನ್ನತ ಶಿಕ್ಷಣದ ವ್ಯವಸ್ಥೆಯನ್ನು ಹೊಂದಿದ್ದರೂ, ಪರಿಪೂರ್ಣ ವಿಶ್ವ ದರ್ಜೆಯ ವಿಶ್ವವಿದ್ಯಾನಿಲಯ ರೂಪದಲ್ಲಿ ವಿಕಸನವಾಗಿಲ್ಲ, ಆದರೆ ಭಾರತ ದೇಶವು ಕೆಲವು ವಿಶ್ವ ದರ್ಜೆಯ ವಿಶ್ವವಿದ್ಯಾನಿಲಯಗಳನ್ನು ಹೊಂದಿದ್ದರೂ, ಇದಕ್ಕೆ ಪೂರಕವಾದ ವ್ಯವಸ್ಥೆಯನ್ನು ಹೊಂದಿಲ್ಲ.

ಪ್ರಸ್ತುತ ಅತ್ಯುತ್ತಮ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಅಳೆಯಲು ಯಾವುದೇ ಜಾಗತಿಕ ಮಾನದಂಡಗಳಾಗಲೀ ಅಥವಾ ಅಳತೆಗೋಲಾಗಲೀ ಇಲ್ಲ. ಆದರೂ, ಕೆಲ ಸಂಸ್ಥೆಗಳು ಶ್ರೇಷ್ಠ ಮತ್ತು ಉತ್ತಮ ಸ್ಥಾನಗಳಿಂದ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿವೆ. ಬಂಡವಾಳ ಬಿಕ್ಕಟ್ಟನ್ನು ಎದುರಿಸುತ್ತಿದ್ದರೂ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯ ವ್ಯವಸ್ಥೆ, ಅಮೇರಿಕಾದ ಸಂಯುಕ್ತ ಸಂಸ್ಥಾನವು ಮತ್ತು ಉಲ್ಲೇಖಿತ ಫಿನ್‌ಲ್ಯಾಂಡ್ ದೇಶಗಳ ವ್ಯವಸ್ಥೆಗಳೊಂದಿಗೆ ಈ ಪಟ್ಟಿಯಲ್ಲಿ ಸೇರಿವೆ.

ಉತ್ತಮ ಉನ್ನತ ಶಿಕ್ಷಣ ವ್ಯವಸ್ಥೆಯ ಸ್ವರೂಪವು ನವೀನ ಮತ್ತು ಈಗಷ್ಟೇ ವಿಕಸನಗೊಳ್ಳುತ್ತಿದೆ. ಮೊದಲಾದ ದೇಶಗಳು ಮತ್ತು ಪ್ರಾಂತಗಳು ಸಂಶೋಧನೆಗಳನ್ನು ಕೈಗೊಳ್ಳುವಾಗ, ವಿಶ್ವವಿದ್ಯಾನಿಲಯಗಳು ಘೋಷಿಸುತ್ತಿದ್ದ ಶ್ರೇಣಿಗಳನ್ನು ಮೀರಲು ಸಂಕುಚಿತ ಮತ್ತು ಆಯ್ಕಾ ಮಾನದಂಡಗಳ ಆಧಾರಿತವಾಗಿಟ್ಟುಕೊಂಡು, ಧ್ಯೇಯಕ್ಕೆ ಸಂಬಂಧಿಸಿದಂತೆ, ತಮ್ಮ ಕಾರ್ಯಕ್ಷಮತೆಯನ್ನು ಮೂಲವಾಗಿಟ್ಟುಕೊಂಡು ಪೂರ್ಣ ವ್ಯವಸ್ಥೆಯನ್ನು ನಿರೂಪಿಸಿದ್ದರು.

## ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆ

ಕರ್ನಾಟಕವು ಸುದೀರ್ಘ ಮತ್ತು ಸಮೃದ್ಧವಾದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಹೊಂದಿದೆ. ಭಾರತದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ರಾಜ್ಯದ ವಿಶ್ವವಿದ್ಯಾನಿಲಯಗಳ ಪೈಕಿ ಅತಂತ್ಯ ಹಳೆಯ ವಿಶ್ವವಿದ್ಯಾನಿಲಯವಾಗಿದೆ. ಸಂಶೋಧನೆಗಳು ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಖ್ಯಾತಿಯನ್ನು ಪಡೆದಿರುವ ಭಾರತೀಯ ವಿಜ್ಞಾನ ಸಂಸ್ಥೆ, ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ ಮತ್ತು ಭಾರತೀಯ ಪ್ರಬಂಧ ಸಂಸ್ಥೆಗಳು, ರಾಜ್ಯದ ಮತ್ತು ದೇಶದ ಪರಿಮಿತಿಗಳನ್ನು ಮೀರಿಸಿ ಬೆಳೆದಿವೆ ಮತ್ತು ವಿಸ್ತರಿಸಿವೆ. ಕಳೆದ ಕೆಲ ದಶಕಗಳಲ್ಲಿ ಹೊಸ ವಿಶ್ವವಿದ್ಯಾನಿಲಗಳು ಮತ್ತು ವಿಶ್ವವಿದ್ಯಾಲಯ ರೀತಿಯ ಸಂಸ್ಥೆಗಳು ಸ್ವತಃ ಜೊತೆಗೂಡಿ ಒಂದು ಸುಸ್ಸಂಘಟಿತ ವಿಶ್ವವಿದ್ಯಾನಿಲಯಗಳ ರೂಪವನ್ನು ಪಡೆದಿದ್ದವು. ಜಾಗತಿಕ ಆರ್ಥಿಕತೆಯ ಉತ್ತಮ ವ್ಯವಸ್ಥೆಗಳ ಪೈಪೋಟಿಗಳನ್ನು ಎದುರಿಸಲು, ಅತ್ಯುನ್ನತ ಉನ್ನತ ಶಿಕ್ಷಣ ವ್ಯವಸ್ಥೆ ಒದಗಿಸುವ ವಿವಿಧ ಬಗೆಯ ವಿಶ್ವವಿದ್ಯಾನಿಲಗಳು ಮತ್ತು ವಿಶ್ವವಿದ್ಯಾಲಯ ರೀತಿಯ ಸಂಸ್ಥೆಗಳ ನಿರ್ಮಾಣವು ಜ್ಞಾನ ಸಮಾಜವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಎದುರಿಸಿದ ಸವಾಲು.

ಪ್ರತಿ ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳು ಶ್ರೇಷ್ಠ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಒದಗಿಸಲು ಉತ್ತಮ ವಿದ್ಯಾಕೇಂದ್ರಗಳಾಗಿರಬೇಕಿಲ್ಲ, ಆದರೆ ಸಂಯೋಜಿತವಾಗಿ ಶ್ರೇಷ್ಠತೆಯನ್ನು ಹೊಂದಬೇಕು. ಕೆಲವರು ಜಗತ್ತಿನ ಪ್ರಮುಖ ಮತ್ತು ವಿಸ್ತೃತವಾದ ವಿಶ್ವವಿದ್ಯಾನಿಲಯಗಳಲ್ಲಿ ಶ್ರೇಣಿಯನ್ನು ಗಳಿಸಬೇಕೆಂದು ಆಕಾಂಕ್ಷಿಸಿದರೆ, ಮತ್ತೂ ಕೆಲವರು ವಿಶ್ವದ ಸರ್ವಶ್ರೇಷ್ಠವಾದ ನೆಲೆಯೂರಿದ ಸಂಸ್ಥೆಗಳಲ್ಲಿ ಸ್ಥಾನವನ್ನು ಬಯಸಿದರೆ, ಇನ್ನೂ ಉಳಿದವರು ತಾವು ಏನೇ ಮಾಡಿದರೂ, ಎಲ್ಲಿಯೇ ಮಾಡಿದರೂ ತಾವು ಉತ್ತಮರು ಎಂದು ತಿಳಿಯಬಯಸುತ್ತಾರೆ. ಉತ್ತಮ ಗುಣಮಟ್ಟದ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳು ಉತ್ತಮ ವಿಶ್ವವಿದ್ಯಾನಿಲಯಗಳು ಮತ್ತು ಸಂಸ್ಥೆಗಳ ಏಕಸ್ವಾಮ್ಯತೆಗೆ ಒಳಪಡಬೇಕೆಂದೇನೂ ಇಲ್ಲ. ಜ್ಞಾನ ಪರಿಸರವನ್ನು ಮುನ್ನಡೆಸಲು ಹೊದಿಕೆಯನ್ನು ನೇಯುವಂತೆ ರಾಜ್ಯದ ಉನ್ನತ ಶಿಕ್ಷಣದ ಪ್ರಗತಿಯನ್ನು ಸಾಧಿಸಬೇಕು. ಕರ್ನಾಟಕದ ಜ್ಞಾನ ಸಮಾಜವನ್ನು ಚಲಾಯಿಸುವ ವ್ಯವಸ್ಥೆಯು ಹಲವಾರು ಜಾಗತಿಕ ಪೈಪೋಟಿಗೆ ಒಳಪಟ್ಟಿದ್ದರೂ ಸಹಾ (ಅ) ಸಂಶೋಧನೆ, ಶಿಕ್ಷಣ ಮತ್ತು ಸೇವೆ (ಆ) ಸ್ಥಳೀಯ, ಪ್ರಾಂತೀಯ, ರಾಷ್ಟ್ರೀಯ ಹಾಗೂ ಜಾಗತಿಕ ಸಮಸ್ಯೆಗಳು (ಇ) ವೃತ್ತಿ ಭಾವನೆ, ಉದ್ಯೋಗ, ವಿಜ್ಞಾನ, ಮಾನವಿಕಗಳು, ಕಲೆ ಮತ್ತು (ಈ) ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳ ಕುರಿತಾದ ಆಶೋತ್ತರಗಳನ್ನು ಸರಿದೂಗಿಸಿ ಉಚ್ಛ್ರಾಯ ಸ್ಥಿತಿ ತಲುಪಲು ಸಾಧ್ಯ.

ಈ ಅಧ್ಯಯನವು ಕರ್ನಾಟಕದ ಉನ್ನತ ಶಿಕ್ಷಣದ ೬೫ ಸಂಸ್ಥೆಗಳನ್ನು ಅಭ್ಯಸಿಸಿದೆ (ಅನುಬಂಧ ಅ). ಸಾಂಪ್ರದಾಯಿ ವಿಶ್ವವಿದ್ಯಾನಿಲಯಗಳು ಮತ್ತು ಇತರ ಉನ್ನತ ಶಿಕ್ಷಣದ ಸಂಸ್ಥೆಗಳು ಈ ಬಂಧದಲ್ಲಿ ಸೇರಿವೆ. ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಸಮಗ್ರ ಪಟ್ಟಿ ತಯಾರಿಸಲು ಮತ್ತು ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ಪಟ್ಟಿಯ ವ್ಯಾಪ್ತಿಗೆ ಒಳಪಟ್ಟಿರದಂತಹ ಸಂಸ್ಥೆಗಳನ್ನು ಮಂಡಿಸಲು, ರಾಜ್ಯದ ಜ್ಞಾನ ಪರಿಸರಕ್ಕೆ ಕೊಡುಗೆ ಸಲ್ಲಿಸುತ್ತಿರುವ ಸಂಸ್ಥೆಗಳ ಸೇರ್ಪಡಿಕೆಗೆ ಪ್ರಮುಖವಾದ ಕಾರಣವಾಗಿದೆ. ಈ ಸಂಸ್ಥೆಗಳಿಲ್ಲದೆ, ಜ್ಞಾನ ಪರಿಸರದ ಕುರಿತಂತೆ ಉನ್ನತ ಶಿಕ್ಷಣ ಸಂಸ್ಥೆಗಳ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ಅಪೂರ್ಣ ಎಂದು ನಾವು ಭಾವಿಸಿದ್ದೇವೆ. ನಮ್ಮ ಪಟ್ಟಿಯಲ್ಲಿ ಸೇರಿಸಲಾದ ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳು ಸುಸ್ಥಿರ ಜ್ಞಾನ ಪರಿಸರದ ನೆಲೆಯ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿವೆ. ಈ ಎಲ್ಲಾ ಸಂಸ್ಥೆಗಳ ಆಶೋತ್ತರಗಳು ಜ್ಞಾನ ಪರಿಸರಕ್ಕೆ ಕೊಡುಗೆಗಳನ್ನು ನೀಡುತ್ತದೆ ಎಂದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಸಂಶೋಧನೆ (ಪ್ರಕಟಣೆಗಳು, ಹಕ್ಕುಸ್ವಾಮ್ಯ ಇತ್ಯಾದಿ), ಶಿಕ್ಷಣ (ಪದವಿಗಳು, ಕಾರ್ಯಕ್ರಮಗಳು, ಇತ್ಯಾದಿ) ಮತ್ತು ಸೇವೆಗಳ (ವೃತ್ತಿಪರ, ವಿಸ್ತರಣೆ ಇತ್ಯಾದಿ) ಮುಖೇನ ಸ್ಪಷ್ಟವಾಗಿ ಗೋಚರಿಸುತ್ತಿದೆ. ಇವುಗಳಲ್ಲಿ ಅನೇಕವು ಬದಲಾವಣೆಗಳಿಗೆ ಕೊಡುಗೆ ಹಾಗೂ ದೃಢವಾದ ಜ್ಞಾನ ಪರಿಸರಗಳ ಕುರಿತಾದ ಭಿನ್ನ ವಿವರಗಳನ್ನು ಹೊಂದಿವೆ. ಕೊನೆಯದಾಗಿ, ಈ

ಸಂಸ್ಥೆಗಳು ಭೌಗೋಳಿಕ ಮತ್ತು ಸಾಮಾಜಿಕ ಆಕಾಂಕ್ಷೆಗಳನ್ನು ಮತ್ತು ಕರ್ನಾಟಕ ಜ್ಞಾನ ಪರಿಸರದ ಪ್ರಾಮುಖ್ಯತೆಯನ್ನು ಹೊಂದುವಲ್ಲಿ ಸಾಧಿಸುವ ಕಾರ್ಯತಂತ್ರಗಳನ್ನು ಎತ್ತಿಹಿಡಿದಿವೆ.

## ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನಕ್ಕಾಗಿ ಮೂಲತತ್ವದ ಚೌಕಟ್ಟು

ಮೂಲತತ್ವ ಚೌಕಟ್ಟು ಉತ್ತಮ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಪ್ರತಿನಿಧಿಸುವ ದಿಗ್ದರ್ಶನ ಮತ್ತು ಧ್ಯೇಯ ವಾಕ್ಯಗಳ ಸಂಮಿಶ್ರಣದ ನಿರೂಪಣೆ, ಇದನ್ನು ಚಿತ್ರ ೧–೩ ರಲ್ಲಿ ಬಿಂಬಿಸಲಾಗಿದೆ (ರಾಮಪ್ರಸಾದ, ೨೦೧೧). ಕೆಳಗಿನ ವಿವರಣೆಗಳನ್ನು ರಾಮಪ್ರಸಾದರವರು ಒದಗಿಸಿದ್ದಾರೆ (೨೦೧೧).

ಮೂಲತತ್ವ ಚೌಕಟ್ಟು ಒಟ್ಟು ಐದು ಆಯಾಮಗಳಿಂದ ರಚಿತವಾಗಿದ್ದು, ಆರು ಸ್ತಂಭಗಳನ್ನು ಪ್ರತಿನಿಧಿಸುತ್ತಿರುವುದನ್ನು ಚಿತ್ರ ೧–೩ರಲ್ಲಿ ನೀಡಲಾಗಿದೆ. ಆಕಾಂಕ್ಷೆಗಳ ಆಯಾಮಗಳು ಎರಡು ಸ್ತಂಭಗಳಿಂದ ಕೂಡಿದ್ದು, ಅವುಗಳು ಎಡದಿಂದ ಬಲವಾಗಿ (ಅ) ಆಕಾಂಕ್ಷೆಗಳು – ಸಂಸ್ಥೆಯ ಆಕಾಂಕ್ಷೆಯ ಮಟ್ಟ, (ಆ) ಪರಿಧಿ – ದಿಗ್ದರ್ಶನದ ಭೌಗೋಳಿಕ ವ್ಯಾಪ್ತಿ (ಇ) ಕಾರ್ಯಗಳು – ವಿಶ್ವವಿದ್ಯಾನಿಲಯದ ಕ್ರಿಯೆಗಳು (ಈ) ಕೇಂದ್ರ ವಲಯ – ವಿಶ್ವವಿದ್ಯಾನಿಲಯ ಕೇಂದ್ರಿತ (ಉ) ಫಲಿತಾಂಶ – ಅಪೇಕ್ಷಿತ ಜ್ಞಾನಸಮಾಜದ ಅಭಿವೃದ್ಧಿಯ ಪ್ರಕಾರಗಳನ್ನು ಒಳಗೊಂಡಿದೆ. ಈ ಆಯಾಮವು ಪೂರ್ಣಪ್ರತ್ಯಯ ಗುಣವಾಚಿ ಮತ್ತು ವಿಶೇಷಣ ಎಂಬ ಎರಡು ಘಟಕಗಳನ್ನು (ಸ್ತಂಭ) ಹೊಂದಿದೆ. ಒಟ್ಟಾಗಿ, ಎಂಟು ಸಂಭಾವ್ಯ ಆಶೋತ್ತರಗಳಿವೆ. ಐದು ಆಯಾಮಗಳನ್ನು ಉನ್ನತ ಶಿಕ್ಷಣ ಸಂಸ್ಥೆಗಳ ದಿಗ್ದರ್ಶನ ವಾಕ್ಯಗಳ ಐದು ಘಟಕಗಳಾಗಿ ಕಾಣಬಹುದಾಗಿದೆ. ಪದ್ಧತಿಯ ಮನೋಭಾವಗಳನ್ನು ಮಾಪಿಸಲು, ನಾವು ಇದೇ ಮೂಲತತ್ವ ಚೌಕಟ್ಟನ್ನು ಬಳಸಿ, ಆಕಾಂಕ್ಷೆಗಳನ್ನು ಸಾಕ್ಷಾತ್ಕಾರ/ಮನವರಿಕೆ ಎಂದು ಗುರುತಿಸಲಾಗಿದೆ. (ಉಳಿದ ವರದಿಯ ಪುಟಗಳಲ್ಲಿ ಆಯಾಮಗಳ ಮತ್ತು ವರ್ಗಗಳ ಹೆಸರುಗಳನ್ನು ದಪ್ಪ ಅಕ್ಷರದಲ್ಲಿ ನೀಡಲಾಗಿದೆ. ಹೀಗೆ ವಿಜ್ಞಾನ ಗಮನೀಕೃತ ಆಯಾಮ/ಸ್ತಂಭದ ವರ್ಗವನ್ನು ಪ್ರಸ್ತಾಪಿಸಿದರೆ, ವಿಜ್ಞಾನಗಳು ವಿಜ್ಞಾನ ವಿಭಾಗಗಳ ಸಂಗ್ರಹವನ್ನು ಉಲ್ಲೇಖಿಸುತ್ತದೆ.)

ಸಂಸ್ಥೆಯ ಆಕಾಂಕ್ಷೆಯು ತಾನು ಬಯಸಿದ ಪ್ರಸಿದ್ಧಿಯನ್ನು ವ್ಯಾಖ್ಯಾನಿಸುತ್ತದೆ. ನಾವು ಇಲ್ಲಿ ನಾಲ್ಕು ಆಕಾಂಕ್ಷೆಗಳ ವರ್ಗೀಕರಣ – ಸರ್ವಶ್ರೇಷ್ಠ, ಪ್ರಮುಖ, ಮುಂದುವರಿದಿರುವ ಮತ್ತು ಸಾಮಾನ್ಯಗಳನ್ನು ಬಳಸಲಾಗಿದೆ. ಪ್ರತಿ ವರ್ಗದಲ್ಲಿಯೂ ಒಂದು ಅಥವಾ ಒಂದರ ಪೈಕಿ ಅನೇಕ ಸಂಸ್ಥೆಯನ್ನು ವಿಶೇಷಣದ ಹಿಂದಿನ ಗುಣವಾಚಿಯಿಂದ ಸೂಚಿಸಿದೆ. ವರ್ಗಗಳು ವಸ್ತುನಿಷ್ಠವಾಗಿದ್ದು, ಮೂರನ್ನು ಪ್ರತ್ಯೇಕಿಸಲು ಯಾವುದೇ ನಿರ್ದಿಷ್ಟವಾದ ಮಾನದಂಡಗಳಿಲ್ಲ. ಉದಾಹರಣೆಗೆ, ಭಾರತದಲ್ಲಿ ಭಾರತೀಯ ತಾಂತ್ರಿಕ ಸಂಸ್ಥೆಗಳು (ಐಐಟಿಗಳು) ಮತ್ತು ಭಾರತೀಯ ಪ್ರಬಂಧ ಸಂಸ್ಥೆಗಳನ್ನು (ಐಐಎಮ್‌ಗಳು) ಸರ್ವಶ್ರೇಷ್ಠ ಸಂಸ್ಥೆಗಳೆಂದು, ರಾಷ್ಟ್ರೀಯ ತಾಂತ್ರಿಕ ಸಂಸ್ಥೆ (ಎನ್‌ಐಟಿ) ಯು ಮುಂಚೂಣಿ ಸಂಸ್ಥೆಯೆಂದು, ವಿಶಿಷ್ಟ ಖ್ಯಾತಿಯನ್ನು ಹೊಂದಿಲ್ಲದ ಸುಧಾರಿತವಾದ ದೊಡ್ಡ ಪ್ರಮಾಣದ ಇತರೆ ಮಾನ್ಯತಾ ಪ್ರಾಧಿಕಾರಗಳನ್ನು ಗುರುತಿಸಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಸಂಸ್ಥೆಯು ಸರ್ವಶ್ರೇಷ್ಠವಾಗಿದ್ದರೆ, ಪ್ರಾಂತೀಯ ಮತ್ತು ರಾಷ್ಟ್ರೀಯವಾಗಿ ಸರ್ವಶ್ರೇಷ್ಟವಾಗಿರುತ್ತದೆ. ಮತ್ತೊಂದೆಡೆ, ರಾಷ್ಟ್ರೀಯ ಮಟ್ಟದಲ್ಲಿ ಸರ್ವಶ್ರೇಷ್ಟತೆಯನ್ನು ಗಳಿಸಿದ್ದರೆ, ಪ್ರಾಂತೀಯವಾಗಿ ಮತ್ತು ಜಾಗತಿಕವಾಗಿ ಮುಂಚೂಣಿಯಲ್ಲಿರುತ್ತದೆ. ಹೀಗಾಗಿ ಆಕಾಂಕ್ಷೆಗಳನ್ನು ಸೂಚಿಸುವಾಗ ಉದ್ದೇಶ ಸಂಬಂಧಿತವಾಗಿ ನಮೂದಿಸುವುದು ಅಗತ್ಯ. ಹೀಗಾಗಿ, ಐಐಟಿಗಳು ಮತ್ತು ಐಐಎಮ್‌ಗಳು ರಾಷ್ಟ್ರೀಯ ಸರ್ವಶ್ರೇಷ್ಠ ಸಂಸ್ಥೆಗಳಾಗಿದ್ದರೂ, ಇವು ಪ್ರಾದೇಶಿಕ ಮತ್ತು ಜಾಗತಿಕವಾಗಿ ಮುಂಚೂಣಿ ಸಂಸ್ಥೆಗಳಾಗಿವೆ.

| ಆಶೋತ್ತರಗಳು | | ಪರಿಧಿ | | ಕಾರ್ಯಗಳು | | ಕೇಂದ್ರಿತ ವಲಯ | | ಫಲಿತಾಂಶ | |
|---|---|---|---|---|---|---|---|---|---|
| ಸರ್ವಶ್ರೇಷ್ಠ | **[ಸಂ** | ಜಾಗತಿಕ | **[ನ** | ಸಂಶೋಧನೆ | **[ನ** | ವಿಜ್ಞಾನಗಳು | **[ಗೆ]** | ವೈಜ್ಞಾನಿಕ | **[ಜ್ಞಾನ** |
| ಮುಂದುವರಿದಿರುವ | **ಸ್ಥೆ** | ಪ್ರಾಂತ | **ಲ್ಲಿ]** | ಶಿಕ್ಷಣ | **ಲ್ಲಿ]** | ಉದ್ಯೋಗ | | ತಾಂತ್ರಿಕ | **ಸಮಾಜದ** |
| ಸುಧಾರಿತ | **ಗ** | ದೇಶ | | ಸೇವೆ | | ವೃತ್ತಿಪರತೆ | | ಆರ್ಥಿಕ | **ಅಭಿವೃದ್ಧಿ** |
| ಸಾಮಾನ್ಯ | **ಳು]** | ರಾಜ್ಯ | | | | ಲಲಿತ ಕಲೆಗಳು | | ಸಾಮಾಜಿಕ | **ಯಲ್ಲಿ]** |
| | | ಜಿಲ್ಲೆ(ಗಳು) | | | | ಮಾನವಿಕಗಳು/ಸ | | ಸಾಂಸ್ಕೃತಿಕ | |
| | | | | | | .ವಿಗಳು | | | |

ಚಿತ್ರ ೧–೩: ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನಕ್ಕಾಗಿ ಮೂಲತತ್ವದ ಚೌಕಟ್ಟು

ಸಂಸ್ಥೆಯ ಧ್ಯೇಯವು ಖ್ಯಾತಿಯ ವ್ಯಾಪ್ತಿ, ವಿದ್ಯಾರ್ಥಿಗಳ ಸ್ಥಾನಮಾನ ಮತ್ತು ನೇಮಕಾತಿ, ಸೇವೆಗಳ ಒದಗಣೆ, ಬೋಧಕವರ್ಗಗಳ ನೇಮಕಾತಿ, ಇವರುಗಳ ಸಂಶೋಧನಾ ಮಂಡಣೆ ಮತ್ತು ಪ್ರಕಟಣೆ ಇತ್ಯಾದಿಗಳನ್ನು ಒಳಗೊಂಡ ಭೌಗೋಳಿಕ ಹರವನ್ನು ವ್ಯಾಖ್ಯಾನಿಸುತ್ತದೆ. ಸಂಸ್ಥೆಯ ಪರಿಧಿಯು ವಿಶ್ವ, ಪ್ರಾಂತ (ಏಷ್ಯಾ, ಯುರೋಪ್, ಅಮೇರಿಕಾ, ಆಫ್ರಿಕಾ ಇತ್ಯಾದಿ), ದೇಶ, ರಾಜ್ಯ ಅಥವಾ ರಾಜ್ಯದ ಜಿಲ್ಲೆಗಳನ್ನು ಪ್ರತಿನಿಧಿಸುತ್ತದೆ. ಭೌಗೋಳಿಕ ಪರಿಮಿತಿಗಳು ಅಸ್ಪಷ್ಟತೆಗೊಳ್ಳುತ್ತಿದ್ದು, ಉನ್ನತ ಶಿಕ್ಷಣದ ಜಾಗತಿಕ ಮಾರುಕಟ್ಟೆಯಲ್ಲಿ ಸೃಷ್ಟಿಸುತ್ತಿರುವ ಸಂದರ್ಭಗಳು, ಮುಂಬರುವ ದಿನಗಳಲ್ಲಿ ಅಸ್ಪಷ್ಟತೆಗಳು ಕಣ್ಮರೆಯಾಗುವುದು ಅಸಂಭವ ಮತ್ತು ಸಂಸ್ಥೆಗಳ ಕಾರ್ಯತಂತ್ರಗಳಲ್ಲಿ ಮಹತ್ವದ ಪಾತ್ರವಹಿಸುವುದನ್ನು ಮುಂದುವರಿಸುತ್ತದೆ.

ಸಂಸ್ಥೆಯ ಕಾರ್ಯಚಟುವಟಿಕೆಗಳು, ಮೂರು ಶಾಸ್ತ್ರೀಯ ವಿಭಾಗಗಳಾದ ಸಂಶೋಧನೆ, ಬೋಧನೆ ಮತ್ತು ಸೇವೆಗಳನ್ನು ಪ್ರತಿನಿಧಿಸುತ್ತದೆ. ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳ ಮೂರು ಪ್ರಮುಖ ಕ್ರಿಯೆಗಳಾಗಿದ್ದು, ಆದರೆ ವಿವಿಧ ಕಾರ್ಯಗಳ ಕುರಿತು ಒತ್ತುಕೊಡುತ್ತಿವೆ. ಶ್ರೇಣಿಗಳು ಮತ್ತು ಶ್ರೇಯಾಂಕಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಇತ್ತೀಚಿನ ದಿನಗಳಲ್ಲಿ ಸಂಶೋಧನೆ ಮಹೋನ್ನತವಾಗಿ ಗಮನ ಸೆಳೆಯುತ್ತಿವೆ, ಕೆಲವು ನಿದರ್ಶನಗಳಲ್ಲಿ, ವಿಶೇಷವಾಗಿ ವೃತ್ತಿಪರ ವಿದ್ಯಾಲಯಗಳಲ್ಲಿನ ಬೋಧನೆಗಳು ಸಮಾನವಾಗಿ ಲಕ್ಷ್ಯ ಪಡೆದುಕೊಳ್ಳುತ್ತಿವೆ. ಹಿಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯಗಳ ಸೇವಾ ಪಾತ್ರಗಳು ಮೂರನೆ ಸ್ಥಾನಕ್ಕೆ ವರ್ಗಾವಣೆಗೊಂಡಿದ್ದು, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳಲ್ಲಿ ತನ್ನ ಪಾತ್ರಗಳನ್ನು ಹೆಚ್ಚಿಸಿಕೊಂಡು ಗುರುತಿಸಿಕೊಳ್ಳುತ್ತಿದೆ. ಸಂಪನ್ಮೂಲ ಬಿಕ್ಕಟ್ಟಿನ ಸಂದರ್ಭಗಳಲ್ಲಿಯೂ ಆದಾಯ ಸೃಷ್ಟಿಯ ಪಾತ್ರಗಳು ಗಮನ ಸೆಳೆಯುವ ಪ್ರಮುಖ ಅಂಶವಾಗಿದೆ. ಉದಾಹರಣೆಗೆ, ವಿಜ್ಞಾನಗಳಲ್ಲಿ ಸಂಶೋಧನೆಯು ಗಮನಾರ್ಹವಾದ ಅನುದಾನಗಳು ಮತ್ತು ಒಪ್ಪಂದಗಳ ಮುಖೇನ ಆದಾಯಗಳನ್ನು ಉತ್ಪಾದಿಸುತ್ತಿದೆ; ವ್ಯಾಪಾರ ವೃತ್ತಿಗಳಲ್ಲಿ, ಬೋಧನೆಗಳು ದೊಡ್ಡ ಪ್ರಮಾಣದ ಕಾರ್ಯಕ್ರಮಗಳ ಬೇಡಿಕೆಗಳ ಮುಖಾಂತರ ಆದಾಯಗಳನ್ನು ಹುಟ್ಟುಹಾಕುತ್ತಿವೆ; ಮತ್ತು ವೈದ್ಯಕೀಯ ಹಾಗೂ ಚಿಕಿತ್ಸಕ ವೃತ್ತಿಗಳಲ್ಲಿ ರೋಗಿಗಳಿಗೆ ಸೇವೆಗಳನ್ನು ವಿತರಿಸುವ ಮೂಲಕ ಆದಾಯ ಗಳಿಸುತ್ತಿವೆ. ಹೀಗೆ, ಸಂಕೀರ್ಣವಾದ ಪರಿಗಣನೆಗಳು ಉನ್ನತ ಶಿಕ್ಷಣ ಸಂಸ್ಥೆಯ ಮೂರು ಕಾರ್ಯಚಟುವಟಿಕೆಗಳ ಮಹತ್ವವನ್ನು ನಿರ್ಣಯಿಸುತ್ತವೆ.

ಉನ್ನತ ಶಿಕ್ಷಣ ಸಂಸ್ಥೆಗಳು ವಿಜ್ಞಾನ, ವೃತ್ತಿ, ಅರ್ಹತೆ, ಲಲಿತ ಕಲೆ ಅಥವಾ ಮಾನವಿಕಗಳು/ಸಮಾಜ ವಿಜ್ಞಾನಗಳ ಮೇಲೆ ಗಮನ ಹರಿಸಬಹುದು. ಬಹಳಷ್ಟು ವ್ಯಾಪಕ ಸಂಸ್ಥೆಗಳು ಎಲ್ಲಾ ಅಂಶಗಳನ್ನೂ ಕೇಂದ್ರೀಕರಿಸಿರಬಹುದು; ವಿಶೇಷ ಸಂಸ್ಥೆಗಳು ಎಂದು ಅಥವಾ ಉಪವಿಭಾಗಗಳ ಮೇಲೆ ತನ್ನ ಗಮನವನ್ನು ನಾಭಿಕರಿಸಿರಬಹುದು. ಈ ನಾಲ್ಕು ವಿಭಾಗಗಳು ಹಲವು ರೀತಿಯಲ್ಲಿ ಭಿನ್ನವಾಗಿವೆ ಅವುಗಳಲ್ಲಿ ಸಂಶೋಧನೆ, ಬೋಧನೆ ಮತ್ತು ಸೇವೆಗಳ ಪ್ರಾಧಾನ್ಯತೆ, ಇವುಗಳ ಆದಾಯ ಮೂಲಗಳು, ಖರ್ಚುವೆಚ್ಚಗಳು, ಇವುಗಳ ಸಂಶೋಧನಾ ಉತ್ಪಾದಕ ಮಾನದಂಡಗಳು; ಇವುಗಳ ಖ್ಯಾತಿ ಮುಂತಾದವು. ಇದರಿಂದಾಗಿ 'ವ್ಯವಹಾರ ಮಾದರಿ' ಯನ್ನು ಒಂದು ವೇಳೆ ಬಳಸಬಹುದಾದರೆ, ನಾಲ್ಕು ವಿಭಾಗಗಳಿಗೆ ಅರ್ಥಪೂರ್ಣವಾಗಿ ಬಳಸಬಹುದಾಗಿದೆ. ಒಂದೇ ರೀತಿಯ ಪ್ರಮುಖ ಬದಲಾವಣೆಗಳನ್ನು ಪ್ರತಿ

ವಿಭಾಗಗಳಲ್ಲಿ ಕಾಣಬಹುದಾಗಿದೆ. ಸಮಗ್ರ ಸಂಸ್ಥೆಯ ದಿಗ್ದರ್ಶನವು ಈ ಎಲ್ಲಾ ವ್ಯತ್ಯಾಸಗಳಿಗೆ ಅವಕಾಶ ನೀಡಬೇಕು. ಒಂದು ದಿಗ್ದರ್ಶನವು ಎಲ್ಲಾ ಅಂಶಗಳಿಗೆ ಅನುಗುಣವಾಗಿರುವುದಿಲ್ಲ. ಮತ್ತೊಂದೆಡೆ, ವಿಶೇಷ ಸಂಸ್ಥೆಗಳ ಏಕತ್ವ ದರ್ಶನವು ಕಾರ್ಯಕ್ಷೇತ್ರಗಳಿಗೆ ಅನುರೂಪವಾಗಿರಬಹುದು.

ಉನ್ನತ ಶಿಕ್ಷಣ ಸಂಸ್ಥೆಗಳ ಫಲಿತಾಂಶಗಳು ವೈಜ್ಞಾನಿಕ, ತಾಂತ್ರಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಫಲಶ್ರುತಿಗಳಾಗಿರಬಹುದು. ಜ್ಞಾನ ಸಮಾಜದ ಹೊರಹೊಮ್ಮುವಿಕೆಗಾಗಿ ಇವು ಐದು ಪ್ರಾಥಮಿಕ ಬಗೆಯ ಅಭಿವೃದ್ಧಿಯನ್ನು ಪ್ರತಿನಿಧಿಸುತ್ತವೆ. ಸಂಸ್ಥೆಯು ವಿಜ್ಞಾನ ವಿಭಾಗದಲ್ಲಿ ಸಂಶೋಧನೆಯ ಕುರಿತು ಗಮನಹರಿಸಿರಬಹುದು, ಉದಾಹರಣೆಗೆ ತನ್ನ ಆವಿಷ್ಕಾರಗಳ ಮುಖೇನ ವೈಜ್ಞಾನಿಕ ಅಭಿವೃದ್ಧಿಯ ಅರಸುವಿಕೆ ಮಾತ್ರವಲ್ಲದೇ, ಶೋಧನಾ ಅನ್ವಯಗಳ ಮುಖಾಂತರ ಸಾಮಾಜಿಕ ಅಭಿವೃದ್ಧಿಗಳನ್ನು ಪಡೆಯಬಹುದು. ಸಮಾಜದ ದೃಷ್ಟಿಕೋನಗಳಿಂದ, ವಿವಿಧ ಪ್ರಕಾರಗಳ ಅಭಿವೃದ್ಧಿಗಳು ಸಮತೋಲನವನ್ನು ಕಾಯ್ದಿಟ್ಟುಕೊಳ್ಳುವ ಜೊತೆಗೆ ಸಮರ್ಥವಾಗಿರಬೇಕು. ಸಾಂಸ್ಕೃತಿಕ ಅಭಿವೃದ್ಧಿಯನ್ನು ಹೊರಗಿಟ್ಟು ನೋಡುವುದಾದರೆ, ತಾಂತ್ರಿಕ ಅಭಿವೃದ್ಧಿಗಳ ಕುರಿತಾದ ಹೆಚ್ಚಿನ ಪ್ರಾಧಾನ್ಯತೆಯ ಪ್ರತಿಭಾಗವು ನಿಷ್ಕ್ರಿಯವಾಗಿರಬಹುದು.

೩೦೦೦ ಹೇಳಿಕಗಳನ್ನು ಈ ಮೂಲತತ್ವದ ಚೌಕಟ್ಟಿನಲ್ಲಿ ಸೆರೆಹಿಡಿದಿಡಲಾಗಿದೆ. ಈ ಹೇಳಿಕೆಗಳು ಒಂದು ವಾಕ್ಯದ ಎಡಭಾಗದಿಂದ ಬಲಭಾಗದ ಸಂಯೋಜನೆಯಿಂದ, ಪ್ರತಿ ಕಾಲಂನ ಪದದ ಆಯ್ಕೆಯಿಂದ ಮತ್ತು ಕಾಲಂಗಳ ಪಕ್ಕದಲ್ಲಿರುವ ಪದ/ಪದಸಮುಚ್ಚಯವನ್ನು ಮಧ್ಯದಲ್ಲಿಯೇ ಬಿಡುವುದರಿಂದ ರೂಪಿತವಾಗಿರಬಹುದು. ಇಂತಹ ಎರಡು ಹೇಳಿಕೆಗಳು ಇಲ್ಲವೆ: (ಅ) ಜ್ಞಾನ ಆರ್ಥಿಕತೆಯಲ್ಲಿ ವೈಜ್ಞಾನಿಕ ಅಭಿವೃದ್ಧಿಗಾಗಿ ವಿಜ್ಞಾನ ಸಂಶೋಧನೆಯಲ್ಲಿ ತೊಡಗಿರುವ ವಿಶ್ವಖ್ಯಾತಿ ಪಡೆದಿರುವ ಸಂಸ್ಥೆಗಳು ಅಥವಾ (ಆ) ಜ್ಞಾನ ಆರ್ಥಿಕತೆಯಲ್ಲಿ ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ತೊಡಗಿರುವ ಕಲೆ ವಿಭಾಗದ ಶಿಕ್ಷಣ ಕ್ಷೇತದಲ್ಲಿ ಸಂಶೋಧನೆ ಕೈಗೊಂಡಿರುವ ನಗರದ ಸಾಮಾನ್ಯ ಸಂಸ್ಥೆ. ಈ ಎರಡು ಸಂಸ್ಥೆಗಳ ವಿಶಿಷ್ಟ ಗುಣಲಕ್ಷಣಗಳು ವಿಭಿನ್ನವಾಗಿದ್ದಿರಬಹುದು ಆದರೆ ಜ್ಞಾನಾಧಾರಿತ ಆರ್ಥಿಕತೆಗೆ ಸುಸಂಬದ್ಧವಾಗಿವೆ. ಪರಿಣಾಮಕಾರಿ ಉನ್ನತ ಶಿಕ್ಷಣ ವ್ಯವಸ್ಥೆಯು ಪ್ರಸಿದ್ಧ ಸಂಸ್ಥೆಗಳನ್ನು ಅಥವಾ ಸಾಮಾನ್ಯ ಸಂಸ್ಥೆಗಳನ್ನೇ ಹೊಂದಿರಲು ಅಸಾಧ್ಯ, ಎರಡನ್ನು ಸರಿದೂಗಿಸುವುದು ಮತ್ತು ಇತರೆ ೨೯೮ ಪಟ್ಟಿಯಿಂದ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳುವುದು.

ಚೌಕಟ್ಟಿನ ಬಳಕೆಯಿಂದ ಉನ್ನತ ಶಿಕ್ಷಣ ವ್ಯವಸ್ಥೆಯ ಭಾವಚಿತ್ರವನ್ನು ನಾವು ಇಲ್ಲಿ ಚಿತ್ರೀಕರಿಸಿದ್ದೇವೆ. ಸಂಶೋಧನೆಯಲ್ಲಿ ವಿಶ್ವಪ್ರಖ್ಯಾತಿ ಪಡೆದಿರುವ ಸಂಸ್ಥೆಗಳು, ದೊಡ್ಡ ಪ್ರಮಾಣದ ರಾಜ್ಯ/ನಗರ ಪ್ರದೇಶದ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆ ನಡೆಸುತ್ತಿರುವ ಸಾಮಾನ್ಯ ಸಂಸ್ಥೆಗಳು ಮತ್ತೂ ಇವುಗಳ ನಡುವಿನ ಆಕಾಂಕ್ಷೆಗಳು, ವ್ಯಾಪ್ತಿ ಮತ್ತು ಕಾರ್ಯಚಟುವಟಿಕೆಗಳನ್ನು ಹೊಂದಿರಬಹುದು. ಈ ಸಂಸ್ಥೆಗಳು ಒಟ್ಟಿಗೆ ವಿಸ್ತೃತವಾಗಿ ವಿಜ್ಞಾನದಿಂದ ಧಾರ್ಮಿಕ ಕ್ಷೇತ್ರಗಳ ಹರವಿನೆಡೆಗೆ ಕೇಂದ್ರೀಕೃತವಾಗಿದೆ ಮತ್ತು ವೈಜ್ಞಾನಿಕದಿಂದ ಸಾಂಸ್ಕೃತಿಕ ಅಭಿವೃದ್ಧಿಯೆಡೆಗೆ ಫಲಿತಾಂಶಗಳನ್ನು ನಿರೀಕ್ಷಿಸುತ್ತಿವೆ. ವ್ಯವಸ್ಥೆಯ ಭಾವಚಿತ್ರ, ದೇಶ, ಸಂಸ್ಕೃತಿ ಮತ್ತು ಸಂದರ್ಭಗಳ ಮೇಲೆ ಅವಲಂಬಿತವಾಗಿ ವ್ಯತ್ಯಾಸಗೊಳ್ಳುತ್ತಿರಬಹುದು. ನಾವು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಭವಿಷ್ಯದ ಕುರಿತಾದ ಆಕಾಂಕ್ಷೆ, ಪ್ರಸ್ತುತ ಮತ್ತು ಎರಡರ ಅಂತರಗಳ ವಿಶ್ಲೇಷಣೆಯನ್ನು ಮಾಪಿಸುವ ಸಂದರ್ಭದಲ್ಲಿ ಇದನ್ನು ಬಳಸುತ್ತೇವೆ.

ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮೂಲತತ್ವದ ಚೌಕಟ್ಟು ವಿಶಿಷ್ಟವಾದ ಅನುಕೂಲಗಳನ್ನು ನೀಡುತ್ತದೆ. ಇದು ಸೂಚ್ಯಾರ್ಥ ಇಲ್ಲವೆ ಶಬ್ದಾರ್ಥಗಳ ಪ್ರಕಾರ ಸಮಂಜಸವಾದ ರಚನಾತ್ಮಕ ಸ್ವಾಭಾವಿಕ ಭಾಷಾ ವಾಕ್ಯಗಳನ್ನು ಬಳಸಿ, ಸಂಸ್ಥೆ ಮತ್ತು ವ್ಯವಸ್ಥೆಯನ್ನು ವಿವರಿಸುತ್ತದೆ. ಮೂಲತತ್ವದ ಚೌಕಟ್ಟಿನಿಂದ ಸಂಯೋಜಿತ ವಾಕ್ಯಗಳನ್ನು ಬಳಸಿ ಸಂಸ್ಥೆಯ ದರ್ಶನ

ವಾಕ್ಯವನ್ನು ಸಂಕೇತೀಕರಿಸುವುದು ಮೂಲಕ್ಕೆ ತದ್ರೂಪವಾಗಿಲ್ಲದಿರಬಹುದು, ಆದರೆ ಅರ್ಥಕ್ಕೆ ಸಂಬಂಧಿಸಿದಂತೆ ಹೋಲಿಕೆ ಮಾಡಬಹುದು ಮತ್ತು ಸಮಾನತೆಯನ್ನು ಕಾಪಾಡಬಹುದು.

ಬೃಹತ್ ಪ್ರಮಾಣದ ಸಂಯೋಜನೆಗಳನ್ನು ಅತೀ ಕೃಪಣವಾದ ಚೌಕಟ್ಟಿನಲ್ಲಿ ಕಲ್ಪಸಲಾದ ಇದು, ನಮ್ಮ ಮತ್ತು ಅಗತ್ಯವಾದ ವ್ಯಾಪಕ ಶ್ರೇಣಿಯ ಉನ್ನತ ಶಿಕ್ಷಣದ ವ್ಯವಸ್ಥೆಯನ್ನು ಸಂಕೇತಿಕರಿಸುವ ಅವಕಾಶವನ್ನು ಒದಗಿಸುತ್ತದೆ. ಹೀಗೆ ಇವು ಭಾಗಗಳನ್ನು (ಸಂಸ್ಥೆಗಳು) ಮತ್ತು ಸಂಪೂರ್ಣ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ಮಾಪನ ಮಾಡಲು ಅನುವು ಮಾಡಿಕೊಡುತ್ತದೆ. ಇದರ ಪರಿಣಾಮವಾಗಿ, ವ್ಯವಸ್ಥೆಯನ್ನು ವಿಭಿನ್ನ ಮಟ್ಟದ ಪ್ರತಿ ಕಣಗಳನ್ನು ಅಭ್ಯಸಿಸಬಹುದಾಗಿದೆ. ಸಂಸ್ಥೆಯ ಹಂತಗಳನ್ನು, ಸಂಸ್ಥಾ ಸಮುದಾಯವನ್ನು ಭಿನ್ನ ಮಾನದಂಡಗಳಿಂದ ಅಧ್ಯಯಿನಿಸಬಹುದಾಗಿದೆ.

ಚೌಕಟ್ಟು, ಹಲವಾರು ವಿಧಾನಗಳಲ್ಲಿ ವಿಸ್ತರಣೀಯವಾದುದು. ನವೀನ ಮಾನದಂಡಗಳನ್ನು ಪ್ರಸ್ತುತಗಳಿಗೆ ಸೇರಿಸಬಹುದು; ಹೊಸ ವಿಭಾಗಗಳನ್ನು ಅಸ್ತಿತ್ವದಲ್ಲಿರುವ ಆಯಾಮಗಳಲ್ಲಿನ ವರ್ಗೀಕರಣಗಳಿಗೆ ಜೋಡಿಸಬಹುದು ಮತ್ತು ಉಪ ಹಾಗೂ ಉತ್ತಮ ವರ್ಗಗಳನ್ನು ಈಗಾಗಲೇ ಇರುವ ಆಯಾಮಗಳಿಗೆ ಸೇರಿಸಬಹುದಾಗಿದೆ. ಸಂಸ್ಥೆಗಳು ಮತ್ತು ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗ್ರಹಿಸಲು ಸಹಾಯಕವಾಗಿದೆ ಉದಾಹರಣೆಗೆ, ವಿಜ್ಞಾನವನ್ನು, ವಿಜ್ಞಾನ ವಿಭಾಗದ ಉಪವಿಭಾಗಗಳೊಂದಿಗೆ ಸೇರಿಸಬಹುದು. ಮೂಲತತ್ವದ ಚೌಕಟ್ಟಿನ ವಿಸ್ತರಣೆಯು, ತ್ವರಿತವಾಗಿ, ಸಂಭವನೀಯ ಸಂಯೋಜನೆಗಳನ್ನು ಹೆಚ್ಚಿಸುವುದಲ್ಲದೇ, ತತ್ಪರಿಣಾಮವಾಗಿ ಇದರ ಸಂಕೀರ್ಣತೆಯನ್ನು ವರ್ಧಿಸುತ್ತದೆ. ಆದ್ದರಿಂದ ಯಾವುದೇ ವಿಸ್ತರಣೆಯು ಅನುಕೂಲಗಳನ್ನು ಸರಿದೂಗಿಸುವುದಲ್ಲದೇ, ಹೆಚ್ಚಿರುವ ಸಂಕೀರ್ಣತೆಯೊಂದಿಗೆ ಮಿತಿಯನ್ನು ಅಳವಡಿಸಿಕೊಳ್ಳಬೇಕು.

ಈ ರೀತಿಯ ಪ್ರಯೋಜನಗಳನ್ನು ಅನ್ವಯಗಳ ಮೂಲಕ ಮುಂದಿನ ಮೂರು ಅಧ್ಯಾಯಗಳಲ್ಲಿ ವಿಶದಗೊಳಿಸಲಾಗಿದೆ. ಮೂಲತತ್ವದ ಚೌಕಟ್ಟಿನ ಗುಣಗಳನ್ನು ಬಳಸಿಕೊಂಡು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಸಂಕೀರ್ಣತೆಯನ್ನು ಭಾವಚಿತ್ರದಲ್ಲಿ ಹಿಡಿದಿಡಲು ನಾವು ಬಯಸುತ್ತೇವೆ.

**ಆಕರಗಳು**


1. Bindé, J. (2005). *Towards knowledge societies: UNESCO world report*. Retrieved June 18, 2011, from http://unesdoc.unesco.org/images/0014/001418/141843e.pdf
2. Duderstadt, J. J. (2011). A Master Plan for Higher Education in the Midwest: A Roadmap to the Future of the Nation's Heartland. Chicago: The Chicago Council on Global Affairs.
3. Government of Karnataka. (2011). The Karnataka State Innovative Universities Bill. Retrieved June 20, 2011, from http://www.jnanaayoga.in/document/innovative_university/The%20Karnataka%20State%20Innovative%20Universites%20Bill,2011.pdf
4. Karnataka Jnana Aayoga. Retrieved August 30, 2010, from www.jnanaayoga.in
5. National Knowledge Commission. (2006a). NKC Note on Higher Education. Retrieved July 21, 2008, from http://knowledgecommission.gov.in/downloads/recommendations/HigherEducationNote.pdf
6. National Knowledge Commission. (2006b). NKC Recommendations on Higher Education. Retrieved July 21, 2008, from http://knowledgecommission.gov.in/downloads/recommendations/HigherEducationLetterPM.pdf

7. Planning Commission. (2011). Background Note for the First Meeting of the Steering Committee -- XII Five Year Plan.
8. Karnataka Knowledge Commission. (2011). A Study on Karnataka Knowledge Society (unpublished report).
9. Ramaprasad, A. (2011). Envisioning a world-class university system for India. International Journal of Technology Management and Sustainable Development, 10(1), 45-54.
10. Ramaprasad, A., & Sridhar, M. K. (2011). Empowering a state's development of a knowledge society. International Journal of Technology Management and Sustainable Development, 10(1), 11-25

## ಅಧ್ಯಾಯ ೨ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಕುರಿತಾದ ಆಕಾಂಕ್ಷೆಗಳ ಮನೋಭಾವ

೬೫ ವಿಶ್ವವಿದ್ಯಾನಿಲಯಗಳು ಮತ್ತು ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳನ್ನು ಅಭ್ಯಸಿತಾಧಾರಿತವಾಗಿ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಕಾಂಕ್ಷೆಗಳ ಮನೋಭಾವಗಳನ್ನು ಮಾಪಿಸಿರುವುದನ್ನು ತಮ್ಮ ಮುಂದಿಡುತ್ತಿದ್ದೇವೆ. ಸಂಸ್ಥೆಗಳ ಪಟ್ಟಿಯನ್ನು ಅನುಬಂಧ ಅ ನಲ್ಲಿ ಕೊಡಲಾಗಿದೆ ಮತ್ತು ಆಯ್ಕೆಯ ತಾರ್ಕಿಕ ವಿವರಣೆಯನ್ನು ಅಧ್ಯಾಯ ೧ರಲ್ಲಿ ಧೀರ್ಘವಾಗಿ ಚರ್ಚಿಸಲಾಗಿದೆ. ಈ ಅಧ್ಯಾಯವು ಕೆಳಕಂಡ ವಿಭಾಗಗಳನ್ನು ಒಳಗೊಂಡಿದೆ:

೧. ದತ್ತಾಂಶ ಸಂಗ್ರಹ

೨. ದತ್ತಾಂಶ ಸಂಕೇತಿಕರಣ

೩. ದತ್ತಾಂಶ ವಿಶ್ಲೇಷಣೆ ಮತ್ತು ಫಲಿತಾಂಶ

೪. ಚರ್ಚೆಗಳು ಮತ್ತು ಉಪಸಂಹಾರ

**ದತ್ತಾಂಶ ಸಂಗ್ರಹ**

ಪ್ರತಿ ಸಂಸ್ಥೆಯ ಆಕಾಂಕ್ಷೆಗಳನ್ನು ಆಯಾ ಸಂಸ್ಥೆಯ ದರ್ಶನ ಮತ್ತು ಧ್ಯೇಯ ವಾಕ್ಯಗಳು, ಉದ್ದೇಶಗಳು, ಕುಲಪತಿಗಳ ಭಾಷಣಗಳು ಮತ್ತು ಸಂಸ್ಥೆಯ ಅಂತರ್ಜಾಲದಲ್ಲಿ ಲಭ್ಯವಿದ್ದ ದಾಖಲೆಗಳ ಮುಖಾಂತರ ನಿರ್ಣಯಿಸಲಾಗಿದೆ. ಈ ಮಾಹಿತಿಗಳನ್ನು ಮೇ–ಜೂನ್ ೨೦೧೨ರ ಅವಧಿಯಲ್ಲಿ ಹೆಕ್ಕಿ ತೆಗೆಯಲಾಗಿದೆ. ೬೫ ಸಂಸ್ಥೆಗಳ ಪೈಕಿ ೪೭ ಸಂಸ್ಥೆಗಳು ಸ್ಪಷ್ಟವಾದ ದರ್ಶನ/ಧ್ಯೇಯ ವಾಕ್ಯಗಳನ್ನು ಹೊಂದಿದ್ದು, ಉಳಿದ ೧೮ ಸಂಸ್ಥೆಗಳಲ್ಲಿ, ೧೭ ಸಂಸ್ಥೆಗಳ ದತ್ತಾಂಶಗಳ ಮುಖೇನ ದರ್ಶನ ಮತ್ತು ಧ್ಯೇಯ ವಾಕ್ಯಗಳಾಧಾರಿತ ಆಕಾಂಕ್ಷೆಗಳನ್ನು ಹಿಡಿದಿಡಲಾಗಿದೆ ಮತ್ತು ಉಳಿದ ಒಂದು ಸಂಸ್ಥೆಯ ವಿವರಣೆಯ ಮೂಲಕ ತಪಶೀಲು ಮಾಡಲಾಗಿದೆ.

ಮೇಲೆ ತಿಳಿಸಿದ ದಸ್ತಾವೇಜುಗಳ ಸಂಪೂರ್ಣ ವಿವರಗಳನ್ನು ತಂಡದ ಪ್ರತಿನಿಧಿಗಳೊಂದಿಗೆ ಹಂಚಿಕೊಳ್ಳಲಾಯಿತು. ಎಲ್ಲಾ ಸಂಸ್ಥೆಗಳ ದಾಖಲೆಗಳು ಆಂಗ್ಲ ಭಾಷಾ ಆವೃತ್ತಿಯನ್ನು ಹೊಂದಿದ್ದು. ಒಂದು ಸಂಸ್ಥೆಯು ಕನ್ನಡ ಭಾಷೆಯ ಆವೃತ್ತಿಯನ್ನು ಒಳಗೊಂಡಿತ್ತು.

ಎಲ್ಲಾ ದರ್ಶನ ಮತ್ತು ಧ್ಯೇಯ ವಾಕ್ಯಗಳು ಮತ್ತು ಇತರೆ ಸಂಬಂಧಿತ ದಾಖಲೆಗಳಲ್ಲಿ ದಿನಾಂಕ ನಮೂದಿತವಾಗಿದ್ದಿಲ್ಲ. ತದನಂತರದಲ್ಲಿ ಅಧಿಕೃತ ಅಂತರ್ಜಾಲದಲ್ಲಿ ಪ್ರಕಟಿಸಿದ ಪ್ರಸ್ತುತ ದರ್ಶನ ಮತ್ತು ಧ್ಯೇಯ ವಾಕ್ಯಗಳ ಆಧಾರಿತವಾಗಿ ಸಂಸ್ಥೆಗಳ ಆಕಾಂಕ್ಷೆಗಳನ್ನು ಊಹಿಸಲಾಗಿದೆ. ಮೇ–ಜೂನ್ ೨೦೧೨ರ ಪ್ರಕಾರ ಅಡ್ಡ ಛೇದ ಪ್ರಮೇಯದಲ್ಲಿ ಪ್ರಸ್ತುತವನ್ನು ವಿಶ್ಲೇಷಿಸಲಾಗಿದೆ. ಅದಾಗ್ಯೂ, ಸಂಸ್ಥೆಗಳ ಆಕಾಂಕ್ಷೆಗಳಲ್ಲಿ ಬದಲಾವಣೆಗಳಾಗುತ್ತಿದ್ದರೂ, ನವೀಕೃತ ಮಾಪನವನ್ನು ಮತ್ತು ಅನುಲಂಬ ದೃಷ್ಟಿಕೋನಗಳನ್ನು ಒದಗಿಸಲು, ನಿರಂತರವಾಗಿ ಆಕಾಂಕ್ಷೆಗಳನ್ನು ಜ್ಞಾನಾನೆಲೆಯಲ್ಲಿ ಸಂಘಟಿಸಬಹುದಾಗಿದೆ.

**ದತ್ತಾಂಶ ಸಂಕೇತಿಕರಣ**

ಆಕಾಂಕ್ಷೆಗಳ ಹೇಳಿಕೆಗಳ ಸ್ವರೂಪ, ಉದ್ದ, ವಿಷಯ ಮತ್ತು ವಿವರಗಳು ಗಮನೀಯವಾಗಿ ಬದಲಾಗಬಹುದು. ವಿನ್ಯಾಸಿನ ಮೂಲತತ್ವದ ಚೌಕಟ್ಟನ್ನು ಬಳಸಿಕೊಂಡು ಪ್ರತಿ ಸಂಸ್ಥೆಯ ಸಂಶ್ಲೇಷಿತ ದರ್ಶನ/ಧ್ಯೇಯ ವಾಕ್ಯವನ್ನು ರಚಿಸುವುದು ಸಂಕೇತಿಕರಣದ ಉದ್ದೇಶ. ಕೆಳಕಂಡ ಈ ಎರಡು ಉದಾಹರಣೆಗಳನ್ನು ನೀಡಬಹುದಾಗಿದೆ:

- ವಿಶ್ವವಿದ್ಯಾನಿಲಯ 'ಅ'
    - ನಿಜಸ್ವರೂಪ: ವಿಶ್ವವಿದ್ಯಾನಿಲಯ 'ಅ'ನ ದರ್ಶನವು ಬೋಧನೆ, ಸಂಶೋಧನೆ, ಸೇವೆ ಮತ್ತು ಸಮುದಾಯ ಅಭಿವೃದ್ಧಿಯ ಮುಖಾಂತರ ಮಿಲಿಯನ್ ಜೀವಗಳ ಪ್ರತಿಭಾ ಪೋಷಣೆ ಮತ್ತು ವೇಗವರ್ಧಕವಾಗಿ ಪರಿವರ್ತಿಸುವ ವಿಶ್ವ ದರ್ಜೆಯ ವಿಶ್ವವಿದ್ಯಾನಿಲಯದ ಸ್ಥಾನಮಾನವನ್ನು ತಲುಪುವುದಾಗಿದೆ. ಸಮಾಜವನ್ನು

ಸಮಾನವಾಗಿ ಮತ್ತು ಸರ್ವತೋಮುಖ ಪರಿವರ್ತನೆಯ ಹಾದಿಯಲ್ಲಿ ಮಹತ್ವವಾದ ಕೊಡುಗೆಗಳನ್ನು ನೀಡುವ ಸಲುವಾಗಿ ಮತ್ತು ವಿದ್ಯತ್ಪೂರ್ಣ ಬೋಧನೆ, ಕಲಿಕೆಗಳ ಮುಖೇನ ನೂರಾರು ಜೀವಗಳ ಜೀವನವನ್ನು ರೂಪಿಸುವ ಬದ್ಧತೆಯನ್ನು ಹೊಂದಿದೆ.

- ಸಂಶ್ಲೇಷಿತ: ಜ್ಞಾನ ಸಮಾಜದಲ್ಲಿ ವೈಜ್ಞಾನಿಕ, ತಾಂತ್ರಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳಿಗಾಗಿ, ಶಿಕ್ಷಣ, ಸೇವೆ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ, ವೃತ್ತಿ, ಮಾನವಿಕಗಳು ಮತ್ತು ಲಲಿತ ಕಲೆಗಳ ಕ್ಷೇತ್ರದಲ್ಲಿ ಸೇವೆ/ಸಾಧನೆಗೈಯುತ್ತಿರುವ ವಿಶ್ವದ ಒಂದು ಪ್ರಮುಖ ಸಂಸ್ಥೆ

- ವಿಶ್ವವಿದ್ಯಾನಿಲಯ ‘ಆ’
  - ನಿಜಸ್ವರೂಪ: ಜಾಗತಿಕ ಸವಾಲುಗಳನ್ನು ಯಶಸ್ವಿಯಾಗಿ ಪೂರೈಸಲು ಮಾನವ ಸಂಪನ್ಮೂಲಗಳ ಪೀಳಿಗೆಯ ರಚನೆ
  - ಸಂಶ್ಲೇಷಿತ: ಜ್ಞಾನಸಮಾಜದ ಸಾಮಾಜಿಕ ಬೆಳವಣಿಗೆಗಾಗಿ, ಶಿಕ್ಷಣ, ಸಂಶೋಧನೆ ಮತ್ತು ಮಾನವಿಕಗಳು, ವಿಜ್ಞಾನಗಳು ಮತ್ತು ಲಲಿತಕಲೆಗಳಲ್ಲಿ ತೊಡಗಿರುವ ರಾಜ್ಯ/ಪ್ರದೇಶದ ಪ್ರಮುಖ ಸಂಸ್ಥೆ

ರಚನೆಗಳಿಗೆ ಆಧಾರಭೂತವಾಗಿರುವ ಈ ಸಂಶ್ಲೇಷಿತ ಹೇಳಿಕೆಗಳು, ೬೫ ಸಂಸ್ಥೆಗಳ ಆಕಾಂಕ್ಷೆಗಳ ಮನೋಭಾವಗಳನ್ನು ವ್ಯವಸ್ಥಿತವಾಗಿ ಹೋಲಿಸಲು, ವ್ಯತಿರಿಕ್ತಿಸಲು, ವಿಶ್ಲೇಷಿಸಲು ಮತ್ತು ಸಂಯೋಜಿಸಲು ನಮಗೆ ಅವಕಾಶವನ್ನೀಯುತ್ತದೆ.

ಪ್ರತಿ ಸಂಸ್ಥೆಯ ಕೊನೆಯ ಸಂಶ್ಲೇಷಿತ ದರ್ಶನ/ಧ್ಯೇಯ ವಾಕ್ಯಗಳು ನಾಲ್ಕು ತಂಡದ ಪ್ರತಿನಿಧಿಗಳ ಒಮ್ಮತದ ಸಂಕೇತಿಕರಣಾಧಾರಿತವಾಗಿವೆ. ಈ ಒಮ್ಮತವು ಮೂರು ಮುಖ್ಯ ಪ್ರಕ್ರಿಯೆಗಳ ಮೂಲವಾಗಿ ಹೊರಹೊಮ್ಮಿದೆ:

- ೬೫ ಸಂಸ್ಥೆಗಳನ್ನು ಸರಿಸಮಾನವಾಗಿ ಇಬ್ಭಾಗ ಮಾಡಿ ಸಂಶ್ಲೇಷಿತ ಹೇಳಿಕೆಗಳನ್ನು ವೈಯಕ್ತಿಕವಾಗಿ ರಚಿಸಿದ ಎರಡು ತಂಡದ ಸದಸ್ಯರುಗಳಿಗೆ ಸಮಾನವಾಗಿ ಹಂಚಲಾಯಿತು.
- ಕರಡು ಹೇಳಿಕೆಗಳನ್ನು ಆರಂಭ ಹಂತದ ಸಂಕೇತಿಕರಣ ಮತ್ತು ಪರಿಷ್ಕರಣಾ ಪ್ರಕ್ರಿಯೆಯಲ್ಲಿ ಭಾಗಿಯಾಗದಿರುವ ಇತರ ಎರಡು ತಂಡದ ಸದಸ್ಯರು ವೈಯಕ್ತಿಕವಾಗಿ ವಿಮರ್ಶಿಸಿದರು.
- ೩೫ ಸಂಸ್ಥೆಗಳ ಪರಿಶೀಲಿತ ಕರಡು ಹೇಳಿಕೆಗಳು ಎಲ್ಲಾ ನಾಲ್ಕು ತಂಡದ ಸದಸ್ಯರುಗಳಿಂದ ಪುರ್ನವಿಮರ್ಶಿತವಾಯಿತು ಮತ್ತು ಮೂರು ತಂಡದ ಸದಸ್ಯರುಗಳು ಉಳಿದ ೩೦ ಸಂಸ್ಥೆಗಳನ್ನು ಪರಿಶೀಲಿಸಿ ಸಮ್ಮತಿ ಸೂಚಿಸಿದರು. ಒಮ್ಮತವು, ಮುಖಾಮುಖಿ ಚರ್ಚೆಗಳು ಮತ್ತು ಸಂವಾದಗಳ ಫಲಶ್ರುತಿ. ಸಹಭಾಗಿಗಳು ಪುನಃ ಕರಡು ಸಂಶ್ಲೇಷಿತ ಹೇಳಿಕೆಗಳು, ದತ್ತಾಂಶಗಳು ಮತ್ತು ಅಂತರ್ಜಾಲಗಳನ್ನು ಪುನಸ್ಸಂದರ್ಶಿಸಿ, ಸಂಸ್ಥೆಗಳು ಹೇಳಿದ ಆಕಾಂಕ್ಷೆಗಳು ನಿರೂಪಿಸಿದ ಹೇಳಿಕೆಗಳು ಹೊಂದಿಕೆಯಾಗುತ್ತಿದೆಯೇ ಎಂದು ಖಾತ್ರಿಪಡಿಸಿಕೊಂಡರು.
- ತಂಡವು ಕಾರ್ಯಗಳು, ಕೇಂದ್ರೀಕರಣ ಮತ್ತು ಫಲಿತಾಂಶ ಅಂಶಗಳ ಉಪಸ್ಥಿತಿ ಕ್ರಮ ಮತ್ತು ಈ ಮೊದಲೇ ನಮೂದಿಸಿದ ದತ್ತಾಂಶ ಮೂಲಗಳ ಮಹತ್ವದ ಆಧಾರದ ಮೇಲೆ ಮೂಲತತ್ವದ ಚೌಕಟ್ಟಿನಲ್ಲಿ ಆದ್ಯತಾವಾರು ಅಂಶಗಳನ್ನು ಹಿಡಿದಿಡಲಾಗಿದೆ. ಉದಾಹರಣೆಗೆ, ಕೆಲವು ಸಂಸ್ಥೆಗಳು ಬೋಧನೆಯನ್ನು ಮೊದಲ ಸ್ಥಾನದಲ್ಲಿ, ಸಂಶೋಧನೆಯನ್ನು ಎರಡನೆಯ ಮತ್ತು ಸೇವೆಯನ್ನು ಮೂರನೆಯ ಹಾಗೂ ವೈಜ್ಞಾನಿಕ ಅಭಿವೃದ್ಧಿಯನ್ನು ಮೊದಲನೆಯ, ಸಾಮಾಜಿಕ ಅಭಿವೃದ್ಧಿಯನ್ನು ಎರಡನೆಯ ಮತ್ತು ಇತರೆ ಪ್ರಕಾರಗಳ ಅಭಿವೃದ್ಧಿಗಳನ್ನು ಇತರೆ ಎಂದು ಸಂಕೇತಿಕರಿಸಲಾಗಿದೆ.

* ಹೀಗೆ, ಚಿತ್ರ ೨–೧ ವಿಶ್ವವಿದ್ಯಾನಿಲಯ 'ಅ' ಮತ್ತು ವಿಶ್ವವಿದ್ಯಾನಿಲಯ 'ಆ' ಗಳ ಸಂಕೇತಿಕರಿಸಿದ ಆಶೋತ್ತರಗಳನ್ನು ಸ್ಪ್ರೆಡ್ಶೀಟ್‌ನ ದತ್ತಾಂಶಗಳ ಸಾಲಿನಲ್ಲಿ ತೋರಿಸಲಾಗಿದೆ.

| ಹೆಸರು | ಮಾದರಿ | ವಿಸ್ತಾರ | ಸ್ಥಳ | ಆಶೋತ್ತರಗಳು | | | | | | | |
|---|---|---|---|---|---|---|---|---|---|---|---|
| | | | | ಸರ್ವಶ್ರೇಷ್ಠ | ಒಂದು ಸರ್ವಶ್ರೇಷ್ಠ | ಪ್ರಮುಖ | ಒಂದು ಪ್ರಮುಖ | ಮುಂದುವರಿದ | ಒಂದು ಮುಂದುವರಿದ | ಸಾಮಾನ್ಯ | ಒಂದು ಸಾಮಾನ್ಯ |
| ವಿಶ್ವವಿದ್ಯಾನಿಲಯ ಅ | ಖಾಸಗಿ | ಸಮಗ್ರ | ನಗರ ೧ | | | | ೧ | | | | |
| ವಿಶ್ವವಿದ್ಯಾನಿಲಯ ಆ | ರಾಜ್ಯ | ಸಮಗ್ರ | ನಗರ ೨ | | | | | | ೧ | | |

| ಹೆಸರು | ಪರಿಧಿ | | | | | ಕಾರ್ಯಗಳು | | | ಕೇಂದ್ರೀಕರಣ | | | | | | |
|---|---|---|---|---|---|---|---|---|---|---|---|---|---|---|---|
| | ಜಾಗತಿಕ | ಪ್ರದೇಶ | ದೇಶ | ರಾಜ್ಯ | ಜಿಲ್ಲೆ(ಗಳು) | ಸಂಶೋಧನೆ | ಶಿಕ್ಷಣ | ಸೇವೆ | ವಿಜ್ಞಾನಗಳು | ಉದ್ಯೋಗ | ವೃತ್ತಿಪರತೆ | ಕಲೆ | ಮಾನವಿಕ/ಸ.ವಿ | ವೈಜ್ಞಾನಿಕ | ತಾಂತ್ರಿಕ |
| ವಿಶ್ವವಿದ್ಯಾನಿಲಯ ಅ | ೧ | | | | | ೩ | ೧ | ೨ | ೧ | ೨ | | ೪ | ೩ | ೧ | ೨ |
| ವಿಶ್ವವಿದ್ಯಾನಿಲಯ ಆ | | | | ೧ | | ೨ | ೧ | ೩ | ೨ | | | ೩ | ೧ | | |

ಚಿತ ೨–೧: ಆಕಾಂಕ್ಷೆಗಳ ಮನೋಭಾವಗಳ ಸಂಕೇತಿಕರಣದ ನಮೂನೆ

## ದತ್ತಾಂಶಗಳ ವಿಶ್ಲೇಷಣೆ ಮತ್ತು ಫಲಿತಾಂಶಗಳು

ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ (ಅ) ಸಂಪೂರ್ಣತೆ (ಆ) ಸ್ತರೀಕೃತಗೊಂಡ ಸಂಸ್ಥೆಯ ಮಾದರಿ ಮತ್ತು ಧ್ಯೇಯದ ವಿಸ್ತಾರಗಳನ್ನು ಆಧಾರವಾಗಿಟ್ಟುಕೊಂಡು ಆಶೋತ್ತರಗಳನ್ನು ದೃಶ್ಯೀಕರಿಸುವುದು ಈ ವಿಶ್ಲೇಷಣೆಯ ಉದ್ದೇಶವಾಗಿದೆ. ಫಲಿತಾಂಶಗಳನ್ನು ರೇಖಾಚಿತ್ರಗಳ ಮುಖೇನ ಮಂಡಿಸಲಾಗಿದೆ.

ಫಲಿತಾಂಶಗಳ ಸಮೂಹವನ್ನು ಅನುಸರಿತವಾದ ಎರಡು ಅಂಶಗಳ ನೆಲೆಯ ಮೇಲೆ ನೀಡಲಾಗಿದೆ (ಅ) ಮೂಲತತ್ವ ಚೌಕಟ್ಟಿನಲ್ಲಿ ಸೂಚಿಸಲಾದ ಗುಣಲಕ್ಷಣಗಳಾಧಾರಿತವಾದ ಸಂಸ್ಥೆಗಳು (ಆ) ನಮೂನೆಯಲ್ಲಿ ಗುರುತಿಸಲಾದ ಸಂಸ್ಥೆಯ ಸ್ವವಿವರಗಳ ಆಧಾರದ ಮೇಲಿನ ಗುಣಲಕ್ಷಣಗಳು. ಸಮೂಹ ವಿಶ್ಲೇಷಣೆಯ ಫಲಿತಾಂಶಗಳು ಕರ್ನಾಟಕದ ಉನ್ನತ ಶಿಕ್ಷಣ ಸಂಸ್ಥೆಗಳ ಮತ್ತು ಮೂಲಮಾದರಿಯ ಸಂಸ್ಥೆಗಳ ನಡುವಿನ ಸಾಮ್ಯತೆಗಳು ಮತ್ತು ಭಿನ್ನತೆಗಳನ್ನು ಎತ್ತಿಹಿಡಿದಿದೆ. ನಾವು ಸಮೂಹ ವಿಶ್ಲೇಷಣೆಯ ಫಲಿತಾಂಶಗಳನ್ನು ಎರಡನೆಯ ಹಂತದಲ್ಲಿ ಒದಗಿಸುತ್ತೇವೆ.

## ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮನೋಭಾವಗಳ ವಿಫುಲ ಚಿತ್ರಣ

ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮನೋಭಾವಗಳ ವಿಫುಲ ಚಿತ್ರಣವನ್ನು (ಅ) ಚಿತ್ರ ೨.೨ ರ ಮೂಲತತ್ವ ಮಾಪನ (ಆ) ಚಿತ್ರ ೨–೩ ರ ವೃಕ್ಷ/ಟ್ರೀ ಮಾಪನಗಳ ಸಹಾಯದಿಂದ ಪ್ರಸ್ತುತಪಡಿಸಲಾಗಿದೆ.

ಇನ್ನುಳಿದ ವರದಿಯಲ್ಲಿ, ನಾವು ಶೇಕಡಾವಾರರ ಬದಲಿಗೆ ನೈಜ ಆವರ್ತನಗಳನ್ನು ಬಳಸಿದ ಕಾರಣಗಳನ್ನು ನೀಡಲಾಗಿದೆ. ಮಾದರಿಗಳ ಬದಲಿಗೆ ನಾವು ಕರ್ನಾಟಕದ ವಿಶ್ವವಿದ್ಯಾನಿಲಯಗಳ ಮತ್ತು ವಿಶ್ವವಿದ್ಯಾನಿಲಯ ರೀತಿಯ ಸಂಖ್ಯೆಗಳನ್ನು ಅಧ್ಯಯಿನಿಸಲು ಆಯ್ಕೆ ಮಾಡಿಕೊಂಡೆವು. ಇದರಿಂದಾಗಿ ಆವರ್ತನಗಳು ಸಂಸ್ಥೆಗಳ ವಾಸ್ತವ ಸಂಖ್ಯೆಗಳನ್ನು ಗುಣಲಕ್ಷಣಗಳ ಸಮೇತ ವ್ಯಕ್ತಪಡಿಸಿದವು. ಕಾಲ್ಪನಿಕ ೧೦೦ರ ಸಂಖ್ಯೆಯಲ್ಲಿ, ಮಾದರಿಗಳಲ್ಲಿನ ಆವರ್ತನಗಳನ್ನು ಶೇಕಡಾವಾರಿಗೆ ಪರಿವರ್ತಿಸಿದಾಗ ಸಂಸ್ಥೆಗಳ ಸಂಖ್ಯೆಗಳು ಗುಣಲಕ್ಷಣಗಳನ್ನು ಹೊಂದಿರುವ ಸಾಧ್ಯತೆಗಳಿವೆ. ನೈಜ ಸಂಖ್ಯೆಗಳು ದೊಡ್ಡ, ಸಣ್ಣ ಪ್ರಮಾಣವನ್ನು ಹೊಂದಿರಬಹುದು ಅಥವಾ ಅಜ್ಞಾತವಾಗಿರಬಹುದು.

ಶೇಕಡಾವಾರುಗಳು ಕಾಲ್ಪನಿಕ ಜನಸಂಖ್ಯೆಯನ್ನು ನಿರ್ಣಯಿಸಲು ನೆರವಾಗುತ್ತವೆ. ಆದರೆ ಈ ಕಾಲ್ಪನಿಕ ಜನಸಂಖ್ಯೆಯೂ ನಮಗೆ ಅನಗತ್ಯವಾಗಿದ್ದು, ನಾವು ಅಖಂಡ ಜನಸಂಖ್ಯೆಯನ್ನು ಅಭ್ಯಸಿಸಲು ಇಚ್ಛಿಸುತ್ತೇವೆ. ವ್ಯತಿರಿಕ್ತವಾಗಿ, ಆವರ್ತನಗಳು ಶೇಕಡಾವಾರುಗಳಾಗಿ ಬಿಂಬಿಸಿದಾಗ ನಿದರ್ಶನಗಳು ತಪ್ಪು ಸಂವಹನ ಕ್ರಿಯೆಗೆ ಒಳಗಾಗಿ ಪರಿಮಾಣಗಳ ಮಾಪನವನ್ನು ಅರ್ಧಕ್ಕೆ ಹಿಗ್ಗಿಸುತ್ತದೆ (ಕೊಟ್ಟಿರುವ ಆಧಾರ ೬೫ ಆಗಿದೆ) ಮತ್ತು ವಿಭಿನ್ನವಾದ ಮಾಪನವನ್ನು ದಶಮಾಂಶಗಳಿಗೆ ಪರಿವರ್ತಿಸುತ್ತವೆ.


ಮೂಲತತ್ವ ಮಾಪನದಲ್ಲಿ, ನಿರ್ದಿಷ್ಟ ಅಂಶ ಹೊಂದಿರುವ ಸಂಶ್ಲೇಷಿತ ದರ್ಶನ/ಧ್ಯೇಯ ವಾಕ್ಯಗಳೊಂದಿಗೆ ಸಂಸ್ಥೆಗಳನ್ನು ಸಂಖ್ಯೆಗಳಲ್ಲಿನ ಪ್ರಕ್ಷೇಪಣೆಗಳೂ ನಿರ್ದೇಶಿಸುತ್ತವೆ (೬೫ನ್ನು ಹೊರತುಪಡಿಸಿ). ಹಾಗಾಗಿ, ಉದಾಹರಣೆಗೆ ೩೦ ಸಂಸ್ಥೆಗಳು ದೇಶವನ್ನು ತಮ್ಮ ವ್ಯಾಪ್ತಿ ಎಂದು ಕಲ್ಪಿಸಿಕೊಂಡರೆ, ರಾಜ್ಯವೂ ೨೨ ಎಂದು, ಜಗತ್ತು ೧೩ ಎಂದು ಮತ್ತು ಪ್ರಾಂತ/ಜಿಲ್ಲೆ (ಗಳು) ಯಾವುದೂ ಇಲ್ಲವೆಂದು ಬರುತ್ತದೆ. ಹಾಗೆಯೇ ೪೩ ಸಂಸ್ಥೆಗಳು ವಿಜ್ಞಾನಗಳ ಕುರಿತು ಗಮನಹರಿಸಿದರೆ, ೩೮ ವೃತ್ತಿಗಳಲ್ಲಿ, ೨೬ ಮಾನವಿಕಗಳು/ಸಮಾಜ ವಿಜ್ಞಾನ, ೧೮ ಲಲಿತ ಕಲೆಗಳು ಮತ್ತು ಒಂದು ವೃತ್ತಿಪರತೆಗಳ ಕುರಿತು ನಿಗಾವಹಿಸುತ್ತವೆ. ಈಚೆಗೆ, ಬಹುತೇಕ ಸಂಸ್ಥೆಗಳು ಬಹುವಿಧದ ಕಾರ್ಯಗಳು, ಕೇಂದ್ರಿಕೃತ ಮತ್ತು ಫಲಿತಾಂಶಗಳ ಆವರ್ತನಗಳ ಎಣಿಕೆಗಳು ಇರುವ ಅಡ್ಡಸಾಲುಗಳು ೬೫ನ್ನು ಮೀರುತ್ತವೆ. ಆಶೋತ್ತರಗಳ ಮನೋಭಾವಗಳ ದೃಶ್ಯೀಕರಣವನ್ನು ವೃದ್ಧಿಸುವ ಸಲುವಾಗಿ ಅತ್ಯಧಿಕ ಆವರ್ತನಗಳನ್ನು ಪ್ರತಿ ಅಡ್ಡಸಾಲುಗಳಲ್ಲಿ ಕೆಂಪು ಬಣ್ಣದಲ್ಲಿ ಎತ್ತಿ ತೋರಿಸಿದರೆ, ಎರಡನೇ ಅತ್ಯಧಿಕಗಳನ್ನು ಕೇಸರಿ ಬಣ್ಣದಲ್ಲಿಯೂ, ಮೂರನೇ ಅತ್ಯಧಿಕಗಳನ್ನು ಹಳದಿಯಲ್ಲಿ, ಮತ್ತು ನಾಲ್ಕನೇ ಅತ್ಯಧಿಕಗಳನ್ನು ಹಸಿರು ಬಣ್ಣದಲ್ಲಿ ಎತ್ತಿ ಹಿಡಿಯಲಾಗಿದೆ. ಮೂಲತತ್ವ ಮಾಪನವನ್ನು ಅಡ್ಡವಾಗಿ ಓದಿದಾಗ ಪ್ರಬಲ ಆಕಾಂಕ್ಷಿಗಳು 'ಜ್ಞಾನಸಮಾಜದ ಸಾಮಾಜಿಕ ಬೆಳವಣಿಗೆಗಾಗಿ, ಶಿಕ್ಷಣ, ಸಂಶೋಧನೆ ಮತ್ತು ಮಾನವಿಕಗಳು, ವಿಜ್ಞಾನಗಳು ಮತ್ತು ಲಲಿತಕಲೆಗಳಲ್ಲಿ ತೊಡಗಿರುವ ರಾಜ್ಯ/ಪ್ರದೇಶದ ಪ್ರಮುಖ ಸಂಸ್ಥೆ' ಎಂದು ಕಾಣಬಹುದಾಗಿದೆ. ಅಂತೆಯೇ, ವಸ್ತುತಃ ಜಿಲ್ಲೆಯ ವೃತ್ತಿಪರತೆಯಲ್ಲಿ ತೊಡಗಿರುವ ಸಾಮಾನ್ಯ ಸಂಸ್ಥೆಯಾಗುವ ಅಂಶಕ್ಕೆ ಪ್ರಾಧಾನ್ಯತೆಯನ್ನು ನೀಡಿಲ್ಲ.

ವೃಕ್ಷ/ಟ್ರೀ ಮಾಪನವು ದೃಶ್ಯೀಕರಣಕ್ಕೆ ನೆರವಾಗಲು ಬೇರೊಂದು ರೂಪದಲ್ಲಿ ಭಿನ್ನವಲ್ಲದ ವಿಶ್ಲೇಷಣೆಯನ್ನು ನೀಡುತ್ತದೆ. ಮೂಲತತ್ವದ ಮಾಪನದಲ್ಲಿನ ಆವರ್ತನಗಳು ವೃಕ್ಷ/ಟ್ರೀ ಮಾಪನದ ಪ್ರಮಾಣಾನುಗುಣ ವಲಯಗಳನ್ನು ಪ್ರತಿನಿಧಿಸುತ್ತದೆ. ಉದಾಹರಣೆಗೆ, ಸಂಶೋಧನೆ ಮತ್ತು ಶಿಕ್ಷಣ ಕಾರ್ಯಚಟುವಟಿಕೆಗಳು ತದ್ರೂಪ ಆವರ್ತನಗಳೊಂದಿಗೆ ಮೂಲತತ್ವ ಮಾಪನವು, ವೃಕ್ಷ ಮಾಪನದ ಏಕಸ್ವರೂಪವಾದ ವಲಯಗಳನ್ನು ಬಹುತೇಕ ಅನುಗುಣವಾಗಿ ಹೊಂದಿರುತ್ತದೆ ಮತ್ತು ಸಣ್ಣ ಪ್ರದೇಶವನ್ನು ಆಕ್ರಮಿಸಿರುವ ಸೇವೆಗಳು

ಕಡಿಮೆ ಆವರ್ತನಗಳನ್ನು ಹೊಂದಿರುತ್ತದೆ. ಕಡಿಮೆ ಪ್ರಮಾಣದ ಆವರ್ತನಗಳನ್ನು ವೃಕ್ಷ/ಟ್ರೀ ಮಾಪನದಲ್ಲಿ ನೀಡಲಾಗಿಲ್ಲ.

| ಆಶೋತ್ತರಗಳು | | ಪರಿಧಿ | | ಕಾರ್ಯಗಳು | | ಕೇಂದ್ರಿತ ವಲಯ | | ಫಲಿತಾಂಶ | |
|---|---|---|---|---|---|---|---|---|---|
| ಸರ್ವಶ್ರೇಷ್ಠ (೧೯) | [ಸಂ | ಜಾಗತಿಕ (೧೩) | [ನ | ಸಂಶೋಧನೆ (೫೮) | [ನ | ವಿಜ್ಞಾನಗಳು (೪೩) | [ಗೆ] | ವೈಜ್ಞಾನಿಕ (೩೩) | [ಜ್ಞಾನ |
| ಪ್ರಮುಖ (೨೭) | ಸ್ಥೆ | ಪ್ರಾಂತ (೦) | ಲ್ಲಿ] | ಶಿಕ್ಷಣ (೫೬) | ಲ್ಲಿ] | ಉದ್ಯೋಗ (೩೮) | | ತಾಂತ್ರಿಕ (೨೪) | ಸಮಾಜದ |
| ಸುಧಾರಿತ (೧೯) | ಗ | ದೇಶ (೩೦) | | ಸೇವೆ (೩೪) | | ವೃತ್ತಿಪರತೆ (೧) | | ಆರ್ಥಿಕ (೧೩) | ಅಭಿವೃದ್ಧಿ |
| ಸಾಮಾನ್ಯ (೦) | ಳು] | ರಾಜ್ಯ ೨೨) | | | | ಲಲಿತ ಕಲೆಗಳು (೧೮) | | ಸಾಮಾಜಿಕ (೫೨) | ಯಲ್ಲಿ] |
| | | ಜಿಲ್ಲೆ(ಗಳು) (೦) | | | | ಮಾನವಿಕಗಳು/ ಸ.ವಿಗಳು (೨೬) | | ಸಾಂಸ್ಕೃತಿಕ (೧೩) | |

ಚಿತ್ರ ೨–೨: ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮನೋಭಾವಗಳ ಮೂಲತತ್ವ ಮಾಪನ




ಚಿತ್ರ ೨–೩: ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮನೋಭಾವಗಳ ವೃಕ್ಷ/ಟ್ರೀ ಮಾಪನ

೬೫ ಸಂಸ್ಥೆಗಳ ಕಾರ್ಯಗಳು, ಗಮನೀಕೃತ ವಲಯಗಳು ಮತ್ತು ಫಲಿತಾಂಶಗಳ ಆದ್ಯತೆಗನುಗುಣವಾಗಿ ಸಂಪೂರ್ಣ ಚಿತ್ರಣವನ್ನು ಚಿತ್ರ ೨–೩ರಲ್ಲಿ ವೀಕ್ಷಿಸಬಹುದಾಗಿದೆ. ಉದಾಹರಣೆಗೆ ಬಹುತೇಕ ಸಂಸ್ಥೆಗಳು ಸಂಶೋಧನೆ (೫೮) ಮತ್ತು ಶಿಕ್ಷಣ (೫೬) ಕ್ಕೆ ಒತ್ತು ನೀಡಿದರೆ, ಗಮನಾರ್ಹವಾಗಿ ಸಂಶೋಧನೆಗೆ (೨೬) ಹೋಲಿಸದರೆ ಮೊದಲ ಆದ್ಯತೆಯನ್ನು ಶಿಕ್ಷಣ (೩೮) ಕ್ಕೆ ನೀಡಿದ್ದಾರೆ. ಇದೇ ಧಾಟಿಯಲ್ಲಿಯೇ, ಮೂರನೇ ಕಾರ್ಯಯಾದ ಸೇವೆಯ ಕುರಿತು ೩೪ ಸಂಸ್ಥೆಗಳು ಪ್ರಾಮುಖ್ಯತೆ ನೀಡಿದರೆ, ಈ ವಲಯವು ೩೪ ಸಂಸ್ಥೆಗಳನ್ನು ಹೊರತುಪಡಿಸಿ, ಇತರ ಸಂಸ್ಥೆಗಳ ಎರಡನೆಯ ಅಥವಾ ಮೂರನೆಯ ಆದ್ಯತೆಯಾಗಿ ಪರಿಣಮಿಸಿದೆ. ಹಾಗೆಯೇ ೧೮ ಸಂಸ್ಥೆಗಳು ಲಲಿತ ಕಲೆಗಳಿಗೆ (೪) ಮೊದಲ ಪ್ರಾಧಾನ್ಯತೆ ನೀಡಿವೆ. ವಿಜ್ಞಾನಗಳು ಮತ್ತು ವೃತ್ತಿಗಳು ಮೊದಲ ಮತ್ತು ಎರಡನೆಯ ಆದ್ಯತೆಯಾಗಿ ಪ್ರಭಾವ ಬೀರಿದ್ದು, ಮಾನವಿಕಗಳು/ಸಮಾಜ ವಿಜ್ಞಾನ ವಿಭಾಗಗಳು ನಂತರದ ಸ್ಥಾನದಲ್ಲಿವೆ. ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳು ಆಕಾಂಕ್ಷಿತ ಫಲಿತಾಂಶಗಳಲ್ಲಿ ಮೈಲುಗೈ ಸಾಧಿಸಿವೆ, ತದನಂತರ, ತಾಂತ್ರಿಕ ಮತ್ತು ಸಾಮಾಜಿಕ ಫಲಿತಾಂಶಗಳು ಎರಡನೆಯ ಸ್ಥಾನದಲ್ಲಿವೆ. ಸಾಪೇಕ್ಷವಾಗಿ ಕೆಲವು ಸಂಸ್ಥೆಗಳು ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳಿಗೆ ಒಲವು ತೋರಿಸಿದರೆ, ಹೆಚ್ಚಿನವುಗಳಿಗೆ ಕಡಿಮೆ ಆದ್ಯತಾ ವಲಯವಾಗಿದೆ.

ದರ್ಶನ/ಧ್ಯೇಯ ವಾಕ್ಯಗಳು ಮತ್ತು ಇತರ ದಾಖಲೆಗಳ ಆಧಾರಿತವಾಗಿ ಚಿತ್ರ ೨–೪ ರಲ್ಲಿ ಸೂಕ್ಷ್ಮವ್ಯತ್ಯಾಸಗಳನ್ನೊಳಗೊಂಡ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮನೋಭಾವವನ್ನು ವರ್ಣಿಸಲಾಗಿದೆ. ಕರ್ನಾಟಕವನ್ನು ಜ್ಞಾನಸಮಾನವನ್ನಾಗಿ ಪರಿವರ್ತಿಸುವ ನಿಟ್ಟನಲ್ಲಿ ಉನ್ನತ ಶಿಕ್ಷಣದ ಅಭಿವೃದ್ಧಿಗಾಗಿ ಕಾರ್ಯತಂತ್ರಗಳನ್ನು ಹೆಣೆಯಲು, ರೂಢಿಯ ಮನೋಭಾವಗಳು ಮತ್ತು ಅಗತ್ಯಗಳ ಮನೋಭಾವಗಳ ಹಿನ್ನಲೆಯಲ್ಲಿ ವಿಶ್ಲೇಷಣೆಯಾಗಬೇಕು.

| | ಕಾರ್ಯ ಚಟುವಟಿಕೆಗಳು | | | ಕೇಂದ್ರೀಕೃತ | | | | | ಫಲಿತಾಂಶ | | | | |
|---|---|---|---|---|---|---|---|---|---|---|---|---|---|
| ವಿಷಯ | ಸಂಶೋಧನೆ | ಶಿಕ್ಷಣ | ಸೇವೆ | ವಿಜ್ಞಾನಗಳು | ವೃತ್ತಿ | ವೃತ್ತಿಪರತೆ | ಲಲಿತ ಕಲೆಗಳು | ಮಾ.ವಿ/ಸ.ವಿ | ವೈಜ್ಞಾನಿಕ | ತಾಂತ್ರಿಕ | ಆರ್ಥಿಕ | ಸಾಮಾಜಿಕ | ಸಾಂಸ್ಕೃತಿಕ |
| ಒಟ್ಟು ಎಣಿಕೆ | 56 | 56 | 34 | 43 | 38 | 1 | 18 | 26 | 33 | 24 | 13 | 52 | 13 |
| | | | | | | | | | | | | | |
| ಆದ್ಯತೆ 1 | 26 | 38 | 1 | 31 | 18 | 0 | 4 | 12 | 28 | 7 | 1 | 25 | 4 |
| ಆದ್ಯತೆ 2 | 27 | 15 | 12 | 10 | 17 | 1 | 4 | 7 | 3 | 15 | 8 | 15 | 4 |
| ಆದ್ಯತೆ 3 | 5 | 3 | 21 | 2 | 2 | 0 | 4 | 7 | 1 | 2 | 4 | 7 | 3 |
| ಆದ್ಯತೆ 4 | | | | 0 | 1 | 0 | 6 | 0 | 1 | 0 | 0 | 5 | 0 |
| ಆದ್ಯತೆ 5 | | | | | | | | | | | | | 2 |

ಚಿತ್ರ ೨–೪: ಕಾರ್ಯಚಟುವಟಿಕೆಗಳು, ಕೇಂದ್ರೀಕೃತ ವಲಯಗಳು ಮತ್ತು ಫಲಿತಾಂಶಗಳಲ್ಲಿನ ಆದ್ಯತೆ

## ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರ ಮನೋಭಾವಗಳ ಸ್ತರೀಕೃತ ಚಿತ್ರಣ

ಚಿತ್ರ ೨–೫ ರಲ್ಲಿ, ಸಂಸ್ಥೆಯ ವಿಸ್ತಾರ ಮತ್ತು ಮಾದರಿಗಳನ್ನು ಗಣನೆಗೆ ತೆಗೆದುಕೊಂಡು ಆಶೋತ್ತರ ಮನೋಭಾವಗಳ ಸ್ತರೀಕೃತ ಚಿತ್ರಣವನ್ನು ನಾವು ಇಲ್ಲಿ ಪ್ರಸ್ತುತಿಸುತ್ತಿದ್ದೇವೆ. ಇವು ಎರಡು ವಿಭಾಗಗಳಿಂದ ನಿಯೋಜಿತಗೊಂಡಿದ್ದು, ಇವುಗಳ ಅರ್ಥ ನಿರೂಪಣೆಯನ್ನು ಪದಕೋಶದ ಅನುಬಂಧ ಆ ನಲ್ಲಿ ಉಲ್ಲೇಖಿಸಲಾಗಿದೆ. ಸಂಸ್ಥೆಗಳನ್ನು ವಿಸ್ತಾರ ಮತ್ತು ಮಾದರಿಗಳ ವಿಭಾಗಗಳಲ್ಲಿ ಅಸಮವಾಗಿ ವಿತರಿಸಿಲಾಗಿದೆ, ಇದು ವಾಸ್ತವಿಕ ಸಂಖ್ಯೆಗಳ ಬದಲಿಗೆ ಶೇಕಡಾವಾರುಗಳನ್ನು ಸೂಕ್ತವಾಗಿ ಹೋಲಿಸಲು ನೆರವಾಗುತ್ತದೆ. ಇವೆರಡನ್ನೂ ಚಿತ್ರದಲ್ಲಿ ತೋರಿಸಲಾಗಿದೆ. ನಮ್ಮ ಅವಲೋಕನಗಳನ್ನು ಈ ಕೆಳಕಂಡಂತೆ ಪ್ರಸ್ತುತಪಡಿಸಲಾಗಿದೆ.

ಪರಿಣತಿ/ವಿಶೇಷ ಮತ್ತು ವ್ಯಾಪಕ ಸಂಸ್ಥೆಗಳು, ಸಂಶೋಧನೆ ಮತ್ತು ಶಿಕ್ಷಣಕ್ಕೆ ಒತ್ತುಕೊಡುತ್ತಿವೆ, ಆದರೆ ಪರಿಣತಿ ಹೊಂದಿರುವ ಸಂಸ್ಥೆಗಳಿಗೆ ತಾಳೆ ಮಾಡಿದರೆ ವ್ಯಾಪಕ ಸಂಸ್ಥೆಗಳು ಶಿಕ್ಷಣಕ್ಕೆ ಒಲವು ತೋರಿಸಿವೆ (ದಯಮಾಡಿ ಪದಕೋಶದಲ್ಲಿ ಪರಿಣತಿ/ವಿಶೇಷ ಮತ್ತು ವ್ಯಾಪಕ ಸಂಸ್ಥೆಗಳ ವ್ಯಾಖ್ಯಾನವನ್ನು ಓದಿರಿ). ಎರಡೂ ಸಂಸ್ಥೆಗಳ ನಡುವಿನ ಸೇವೆಗಳ ಅದ್ಯತೆಯು ಬಹುಪಾಲು ಒಂದೇ ರೀತಿಯದಿದೆ. ಪರಿಣತ ಸಂಸ್ಥೆಗಳು ವಿಜ್ಞಾನಗಳು, ವೃತ್ತಿ, ಮಾನವಿಕಗಳು/ಸಮಾಜ ವಿಜ್ಞಾನಗಳ ನಿಕಾಯಗಳಿಗೆ ಗಮನಹರಿಸಿದರೆ, ಲಲಿತ ಕಲೆಗಳು ಮತ್ತು ವೃತ್ತಿಪರತೆಗಳು ಕಡಿಮೆ ಮಟ್ಟದ ಕೇಂದ್ರಿತ

ವಲಯಗಳಾಗಿವೆ. ಮತ್ತೊಂದೆಡೆ, ವ್ಯಾಪಕ/ಸಮಗ್ರ ಸಂಸ್ಥೆಗಳು ವಿಜ್ಞಾನಗಳು, ವೃತ್ತಿ, ಮಾನವಿಕಗಳು/ಸಮಾಜ ವಿಜ್ಞಾನಗಳು ಮತ್ತು ಲಲಿತ ಕಲೆಗಳಿಗೆ ಕಡಿಮೆ ಒತ್ತು ನೀಡಿವೆ. ಫಲಿತಾಂಶಗಳಿಗೆ ಸಂಬಂಧಿಸಿದಂತೆ, ಪರಿಣತ ಸಂಸ್ಥೆಗಳ, ಸಾಮಾಜಿಕ ಅಭಿವೃದ್ಧಿಯು ಪ್ರಥಮ ಸ್ಥಾನ ಮತ್ತು ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯು ದ್ವಿತೀಯ ಸ್ಥಾನವನ್ನು ಉಪಕ್ರಮಿಸಿವೆ. ಇನ್ನೊಂದೆಡೆ, ವ್ಯಾಪಕ/ಸಮಗ್ರ ಸಂಸ್ಥೆಗಳ ಪ್ರಾಥಮಿಕ ಆದ್ಯತೆಯು ಸಾಮಾಜಿಕ ಅಭಿವೃದ್ಧಿಯಾಗಿದ್ದು, ವೈಜ್ಞಾನಿಕ ಮತ್ತು ಆರ್ಥಿಕ ಅಭಿವೃದ್ಧಿಗಳು ದ್ವಿತೀಯ ಹಾಗೂ ತಾಂತ್ರಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳು ತೃತೀಯ ಆದ್ಯತೆಗಳಾಗಿವೆ.

| | | ಕಾರ್ಯ ಚಟುವಟಿಕೆಗಳು | | | ಕೇಂದ್ರೀಕೃತ | | | | | ಫಲಿತಾಂಶ | | | | | |
|---|---|---|---|---|---|---|---|---|---|---|---|---|---|---|---|
| | ವಿಷಯ | ಸಂಶೋಧನೆ | ಶಿಕ್ಷಣ | ಸೇವೆ | ವಿಜ್ಞಾನಗಳು | ವೃತ್ತಿ | ವೃತ್ತಿಪರತೆ | ಲಲಿತ ಕಲೆಗಳು | ಮಾ.ವಿ/ಸ.ವಿ | ವೈಜ್ಞಾನಿಕ | ತಾಂತ್ರಿಕ | ಆರ್ಥಿಕ | ಸಾಮಾಜಿಕ | ಸಾಂಸ್ಕೃತಿಕ | |
| | ಒಟ್ಟು ಎಣಿಕೆ | 56 | 56 | 34 | 43 | 38 | 1 | 18 | 26 | 33 | 24 | 13 | 52 | 13 | |
| | | | | | | | | | | | | | | | |
| ವಿಸ್ತಾರದಿಂದ | ಸಂಖ್ಯೆಗಳು | | | | | | | | | | | | | | ಒಟ್ಟು |
| | ಪರಿಣತಿ ಹೊಂದಿರುವ ಸಂಸ್ಥೆಗಳು | 37 | 32 | 22 | 24 | 22 | 0 | 5 | 10 | 22 | 17 | 4 | 32 | 7 | 41 |
| | ಸಮಗ್ರ ಸಂಸ್ಥೆಗಳು | 21 | 24 | 12 | 19 | 16 | 1 | 13 | 16 | 11 | 7 | 9 | 20 | 6 | 24 |
| | ಶೇಕಡಾ | | | | | | | | | | | | | | |
| | ಪರಿಣತಿ ಹೊಂದಿರುವ ಸಂಸ್ಥೆಗಳು | 90% | 78% | 54% | 59% | 54% | 0% | 12% | 24% | 54% | 41% | 10% | 78% | 17% | 100% |
| | ಸಮಗ್ರ ಸಂಸ್ಥೆಗಳು | 88% | 100% | 50% | 79% | 67% | 4% | 54% | 67% | 46% | 29% | 38% | 83% | 25% | 100% |
| | | | | | | | | | | | | | | | |
| ಮಾದರಿಯಿಂದ | ಸಂಖ್ಯೆಗಳು | | | | | | | | | | | | | | |
| | ಸಂಶೋಧನೆ | 10 | 6 | 6 | 5 | 3 | 0 | 2 | 5 | 5 | 3 | 2 | 9 | 1 | 10 |
| | ಖಾಸಗಿ | 7 | 6 | 5 | 4 | 5 | 0 | 2 | 4 | 3 | 3 | 2 | 6 | 3 | 7 |
| | ರಾಜ್ಯ | 8 | 23 | 9 | 16 | 4 | 1 | 11 | 12 | 10 | 4 | 5 | 18 | 5 | 23 |
| | ಸ್ವಾಯತ್ತ | 14 | 16 | 8 | 13 | 13 | 0 | 2 | 3 | 10 | 9 | 2 | 11 | 2 | 16 |
| | ರಾಷ್ಟ್ರೀಯ | 9 | 5 | 6 | 3 | 3 | 0 | 1 | 2 | 5 | 5 | 2 | 8 | 2 | 9 |
| | | | | | | | | | | | | | | | |
| | ಶೇಕಡಾ | | | | | | | | | | | | | | |
| | ಸಂಶೋಧನೆ | 100% | 60% | 60% | 50% | 30% | 0% | 20% | 50% | 50% | 30% | 20% | 90% | 10% | 100% |
| | ಖಾಸಗಿ | 100% | 86% | 71% | 57% | 71% | 0% | 29% | 57% | 43% | 43% | 29% | 86% | 43% | 100% |
| | ರಾಜ್ಯ | 35% | 100% | 39% | 70% | 17% | 4% | 48% | 52% | 43% | 17% | 22% | 78% | 22% | 100% |
| | ಸ್ವಾಯತ್ತ | 88% | 100% | 50% | 81% | 81% | 0% | 13% | 19% | 63% | 56% | 13% | 69% | 13% | 100% |
| | ರಾಷ್ಟ್ರೀಯ | 100% | 56% | 67% | 33% | 33% | 0% | 11% | 22% | 56% | 56% | 22% | 89% | 22% | 100% |

ಚಿತ್ರ ೨.೫: ಸಂಸ್ಥೆಗಳ ವಿಸ್ತಾರ ಮತ್ತು ಮಾದರಿಗಳ ಆಧಾರಿತ ಆಶೋತ್ತರ ಮನೋಭಾವಗಳ ಸ್ತರೀಕೃತ ಪಟ್ಟಿ

ಎಲ್ಲಾ ಸಂಶೋಧನಾ, ಖಾಸಗಿ ಮತ್ತು ರಾಷ್ಟ್ರೀಯ ಸಂಸ್ಥೆಗಳ ಜೊತೆಗೆ ರಾಜ್ಯ ಮತ್ತು ಸ್ವಾಯತ್ತ ವಿಶ್ವವಿದ್ಯಾನಿಲಯಗಳು ಅವರವರ ಆಕಾಂಕ್ಷೆಗಳ ಕುರಿತಾದ ವಲಯಗಳ ಸಂಶೋಧನೆಗೆ ಮಹತ್ವ ನೀಡುತ್ತವೆ (ದಯವಿಟ್ಟು ಸಂಸ್ಥೆಗಳ ಮಾದರಿಗಳ ವ್ಯಾಖ್ಯಾನ ತಿಳಿಯಲು ಪದಕೋಶ ಬಳಸಿ). ರಾಜ್ಯ ಮತ್ತು ಸ್ವಾಯತ್ತ ವಿಶ್ವವಿದ್ಯಾನಿಲಯಗಳು ಶಿಕ್ಷಣ ಕ್ಷೇತ್ರಕ್ಕೆ ಒತ್ತು ನೀಡಿದರೆ, ಖಾಸಗಿ ವಿಶ್ವವಿದ್ಯಾನಿಲಯಗಳು ಮತ್ತು ಹೆಚ್ಚಿನ ಸಂಶೋಧನಾ ಮತ್ತು ರಾಷ್ಟ್ರೀಯ ಸಂಸ್ಥೆಗಳು ಇದಕ್ಕೆ ಸಾಥ್ ನೀಡಿವೆ. ಬೃಹತ್ ಪ್ರಮಾಣದ ರಾಷ್ಟ್ರೀಯ ಮತ್ತು ಖಾಸಗಿ ಸಂಸ್ಥೆಗಳು ನಂತರದ ಸ್ಥಾನದಲ್ಲಿ ಸಂಶೋಧನೆ, ಸ್ವಾಯತ್ತ ಮತ್ತು ರಾಜ್ಯ ಸಂಸ್ಥೆಗಳು ಸೇವೆಗೆ ಮಹತ್ವ ನೀಡಿವೆ. ಹೆಚ್ಚಿನ ಸ್ವಾಯತ್ತ ಸಂಸ್ಥೆಗಳು ನಂತರದಲ್ಲಿ ರಾಜ್ಯ ಸಂಸ್ಥೆಗಳು, ಖಾಸಗಿ, ರಾಷ್ಟ್ರ ಮತ್ತು ಸಂಶೋಧನಾ ಸಂಸ್ಥೆಗಳು ವಿಜ್ಞಾನಗಳಿಗೆ ಒತ್ತು ನೀಡಿವೆ. ಇದೇ ಧಾಟಿಯಲ್ಲಿಯೇ, ಹೆಚ್ಚಿನ ಪ್ರಮಾಣದ ಸ್ವಾಯತ್ತ ಸಂಸ್ಥೆಗಳು ನಂತರದ ಸ್ಥಾನದಲ್ಲಿ ಖಾಸಗಿ ಮತ್ತು ರಾಜ್ಯ ಸಂಸ್ಥೆಗಳು, ಹಾಗೂ ಬಹುತೇಕ ಸಂಖ್ಯೆಯ ಸಂಶೋಧನಾ ಮತ್ತು ರಾಷ್ಟ್ರೀಯ ಸಂಸ್ಥೆಗಳು ವೃತ್ತಿಗೆ ಮಹತ್ವ ನೀಡಿವೆ.


ರಾಜ್ಯ ಸಂಸ್ಥೆಗಳೂ ಲಲಿತ ಕಲೆಗಳಿಗೆ ಅಭಿಮತಿಸಿದರೆ, ಹೆಚ್ಚಿನ ಸಂಖ್ಯೆಯ ಸಂಶೋಧನಾ, ಖಾಸಗಿ, ರಾಜ್ಯ ಸಂಸ್ಥೆಗಳು ಮಾನವಿಕ/ಸಮಾಜವಿಜ್ಞಾನಗಳಿಗೆ ಒಲವು ತೋರಿಸಿದ್ದಾರೆ. ಎಲ್ಲಾ ಐದು ಮಾದರಿಯ ಸಂಸ್ಥೆಗಳು ಸಾಮಾಜಿಕ ಅಭಿವೃದ್ಧಿಯೆಡೆಗೆ ಗಮನಹರಿಸಿದರೆ, ಸಂಶೋಧನಾ, ರಾಷ್ಟ್ರೀಯ ಮತ್ತು ಖಾಸಗೀ ಸಂಸ್ಥೆಗಳು ಉಳಿದ ಅಂಶಗಳೆಡೆಗೆ ಗಮನಹರಿಸಿದ್ದಾರೆ. ಎಲ್ಲಾ ಪ್ರಕಾರದ ಸಂಸ್ಥೆಗಳು ವೈಜ್ಞಾನಿಕ ಅಭಿವೃದ್ಧಿಗೆ ಮಹತ್ವ ನೀಡಿದ್ದಾರೆ ಆದರೆ ಇದು ಸಾಮಾಜಿಕ ಅಭಿವೃದ್ಧಿಗೆ ನೀಡುತ್ತಿರುವ ಆದ್ಯತೆಗಿಂತ ಕಡಿಮೆ ಇದೆ. ಸ್ವಾಯತ್ತ ಮತ್ತು ರಾಷ್ಟ್ರೀಯ ಸಂಸ್ಥೆಗಳು ವೈಜ್ಞಾನಿಕ ಅಭಿವೃದ್ಧಿಯೆಡೆಗೆ ಮುಂದುವರಿಯುವಲ್ಲಿ ಪ್ರಾಧಾನ್ಯತೆ ತೋರಿಸಿದ್ದಾರೆ. ಬಹುತೇಕ ಸಂಖ್ಯೆಯ ಸ್ವಾಯತ್ತ ಮತ್ತು ರಾಷ್ಟ್ರೀಯ ಸಂಸ್ಥೆಗಳು ತಾಂತ್ರಿಕ ಅಭಿವೃದ್ಧಿಗೆ ಪ್ರಾಮುಖ್ಯತೆ ಕೊಟ್ಟಿದ್ದಾರೆ ಮತ್ತು ಕಡಿಮೆ ಸಂಖ್ಯೆಯ ಖಾಸಗಿ ಮತ್ತು ಸಂಶೋಧನಾ ಸಂಸ್ಥೆಗಳು ತಾಂತ್ರಿಕ ಅಭಿವೃದ್ಧಿಗೆ ಮಹತ್ವ ನೀಡಿದ್ದಾರೆ. ಹೆಚ್ಚು ಕಡಿಮೆ ಸಣ್ಣ ಪ್ರಮಾಣದ ಸಂಸ್ಥೆಗಳು ಆರ್ಥಿಕ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿದರೆ, ಖಾಸಗಿ ಸಂಸ್ಥೆಗಳು ಇದೇ ದಾರಿಯಲ್ಲಿ ಸಾಗಿವೆ. ಹಾಗೆಯೇ ಕೆಲವೇ ಕೆಲವು ಸಂಸ್ಥೆಗಳು ಸಾಂಸ್ಕೃತಿಕ ಅಭಿವೃದ್ಧಿಗೆ ಮಹತ್ವ ನೀಡಿವೆ ಆದರೆ, ಅಲ್ಪ ಪ್ರಮಾಣದ ಖಾಸಗಿ ಸಂಸ್ಥೆಗಳು ಪ್ರಗತಿಯ ಹಂತದಲ್ಲಿವೆ.

### ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಕಾಂಕ್ಷಾ ಮನೋಭಾವಗಳ ಸಮೂಹ ವಿಶ್ಲೇಷಣೆ

ಆಕಾಂಕ್ಷೆಗಳ ಮನೋಭಾವಗಳ ದತ್ತಾಂಶಗಳನ್ನು ೬೫ ಅಡ್ಡಸಾಲುಗಳಲ್ಲಿ (ಪ್ರತಿ ಒಂದು ಸಾಲಿಯಲ್ಲಿ ಸಂಸ್ಥೆಯು) ಮತ್ತು ೨೬ ಲಂಬಸಾಲುಗಳಲ್ಲಿ ಸಂಕೇತಿಕರಿಸಿ, ಚಿತ್ರ ೨–೧ ರಲ್ಲಿ ತೋರಿಸಿದ್ದೇವೆ (ಕೇವಲ ಎರಡು ಅಡ್ಡಸಾಲುಗಳನ್ನು ಚಿತ್ರದಲ್ಲಿ ಕೊಡಲಾಗಿದೆ). ದತ್ತಾಂಶಗಳ ಸಹಾಯದಿಂದ ಸಮೂಹ ವಿಶ್ಲೇಷಣೆಯನ್ನು ನಮೂದಿಸಿದ ಎರಡು ಅಂಶಗಳ ಆಧಾರದ ಮೇರೆಗೆ ನಿರ್ವಹಿಸಲಾಗಿದೆ – (ಅ) ಸಂಸ್ಥೆಗಳ ಆಶೋತ್ತರಗಳಲ್ಲಿನ ಸಮಾನರೂಪತೆ ಮತ್ತು (ಆ) ಸಂಸ್ಥೆಗಳ ನಡುವಿನ ಮೂಲತತ್ವ ಗುಣಲಕ್ಷಣಗಳಲ್ಲಿನ ಅನುರೂಪತೆ. ಆದ್ಯತೆಗಳಿಂದ ನಿಯೋಜಿತವಾದ ಗುಣಲಕ್ಷಣಗಳನ್ನು ಸಮೂಹದಲ್ಲಿ ಬಳಸಲಾಗಿಲ್ಲ. ವಿಶ್ಲೇಷಣೆಯನ್ನು ಅಳತೆಗೋಲಾಗಿ ಎನ್‌ವಿವೋ ಒಂದಿಗೆ ಜಕಾರ್ಡ್ಸ್‌ರವರ ಗುಣಾಂಕವನ್ನು ಸಾಧಿಸಲಾಯಿತು.

ಆಶೋತ್ತರಗಳಲ್ಲಿನ ಸಾದೃಶ್ಯತೆಯ ಆಧಾರದ ಮೇಲೆ ಸಂಸ್ಥೆಯ ಸಮೂಹಗಳ ವೃಕ್ಷ ರೇಖಾಚಿತ್ರವನ್ನು ೨–೬ ರಲ್ಲಿ ನೀಡಲಾಗಿದೆ. ವೃಕ್ಷ ರೇಖಾಚಿತ್ರದ ಮೂರನೆ ಹಂತದಲ್ಲಿ ನಾಲ್ಕು ವಿಶಾಲವಾದ ತಂಡಗಳನ್ನು ನಮೂದಿಸಲಾಗಿದೆ. ಪ್ರತಿ ಬಣ್ಣಗಳನ್ನು ಸಮೂಹ ಪ್ರಕ್ರಿಯೆಯು ಸೂಚಿಸಿದ ಗುಂಪುಗಳಲ್ಲಿನ ಉಪ ತಂಡಗಳ ಮೂಲಕ ನೀಡಲಾಗಿದೆ. ಈ ಸಮೂಹಗಳು ಕರ್ನಾಟಕ ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರ ಮನೋಭಾವಗಳ ಭಾವಚಿತ್ರವನ್ನು ವರ್ಣಿಸುತ್ತದೆ.

ಗುಂಪು ೧ರ ಮೇಲ್ಭಾಗದಲ್ಲಿ, ಮಾನವಿಕ/ಸಮಾಜ ವಿಜ್ಞಾನಗಳಿಗೆ ಒತ್ತು ನೀಡಿರುವ ಪರಿಣತಿ/ವಿಶೇಷ ಸಂಸ್ಥೆಗಳಿವೆ. ಗುಂಪು ೧ರ ತಳಭಾಗದಲ್ಲಿ ವಿಜ್ಞಾನ ಮತ್ತು ವೃತ್ತಿಗಳಿಗೆ ಮಹತ್ವ ನೀಡುತ್ತಿರುವ ಪರಿಣತಿ/ವಿಶೇಷ ಸಂಸ್ಥೆಗಳಿವೆ. ಗುಂಪು ೨ ಮೊದಲಿನ ಅಂಶಕ್ಕೆ ಪ್ರಾಧಾನ್ಯತೆ ನೀಡುತ್ತಿರುವ ಪರಿಣತಿ ಮತ್ತು ಸಮಗ್ರ ಸಂಸ್ಥೆಗಳ ಸಮಿಶ್ರವಾಗಿದೆ. ಮತ್ತೊಂದೆಡೆ, ಗುಂಪು ೩ ಎರಡನೆಯ ಅಂಶಕ್ಕೆ ಪ್ರಾಮುಖ್ಯತೆ ನೀಡುತ್ತಿರುವ ಪರಿಣತಿ ಮತ್ತು ಸಮಗ್ರ ಸಂಸ್ಥೆಗಳ ಸಮಿಶ್ರವಾಗಿದೆ. ಕೊನೆಯ ೪ನೇ ಗುಂಪು ವಿಜ್ಞಾನ ವಿಭಾಗಕ್ಕೆ ಆದ್ಯತೆ ನೀಡುತ್ತಿರುವ ಕಡಿಮೆ ಸಂಖ್ಯೆಯ ವಿಶೇಷ ಸಂಸ್ಥೆಗಳನ್ನೊಳಗೊಂಡಿದೆ. ಊಹಿಸಬಹುದಾದ ಮತ್ತು ಸದೃಶ ಹಾಗೂ ವಿಭಿನ್ನವಾದ ಕರ್ನಾಟಕದ ಉನ್ನತ ಶಿಕ್ಷಣ ಸಂಸ್ಥೆಗಳ ಆಶೋತ್ತರಗಳನ್ನು ಈ ಸಮೂಹಗಳು ಬಿಂಬಿಸಿವೆ. ಉದಾಹರಣೆಗೆ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ ಮತ್ತು ಭಾರತ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಕಾನೂನು ಶಾಲೆಗಳು ಸಮಾನ ರೂಪದ ಆಶೋತ್ತರಗಳನ್ನು ಹೊಂದಿದ್ದು, ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯ ಸಂಸ್ಥೆ ಮತ್ತು ಜವಹರಲಾಲ್ ನೆಹರು ಸುಧಾರಿತ ವೈಜ್ಞಾನಿಕ ಸಂಶೋಧನಾ ಕೇಂದ್ರಗಳು ವೃಕ್ಷ ರೇಖಾಚಿತ್ರದ ವಿರುದ್ಧ ತುದಿಗಳಲ್ಲಿವೆ. ಹಾಗೆಯೇ, ಗುಂಪು ೨ರಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಸಂಸ್ಥೆಗಳು ಆಶ್ಚರ್ಯವಾಗಿ ಬೆರೆತಿವೆ. ಸಂಸ್ಥೆಗಳ ವರ್ಗೀಕರಣವು ಪದಕೋಶದಲ್ಲಿರುವ ವಿಸ್ತಾರ ಮತ್ತು ಮಾದರಿಗಳ ಮೂಲಕ ಪ್ರಮಾಣಕ ವರ್ಗೀಕರಣವು ವಿಭಿನ್ನವಾಗಿದೆ ಎಂದು ಸಮೂಹವು ಸೂಚಿಸಿದೆ. ಹೀಗೆ, ಸ್ವಾಯತ್ತ ಸಂಸ್ಥೆಯ ಆಶೋತ್ತರಗಳು ರಾಜ್ಯ ಸಂಸ್ಥೆಗಳಿಗಿಂತ ಕೆಲವು ರಾಷ್ಟ್ರೀಯ ಮತ್ತು ಕೇಂದ್ರಿಯ ಸಂಸ್ಥೆಗಳಿಗೆ ಹತ್ತಿರವಾಗಿವೆ.





ಚಿತ್ರ ೨–೬: ಸಂಸ್ಥೆಗಳ ಸಮೂಹಗಳು

ಸಂಸ್ಥೆಗಳ ಸಮೂಹಗಳು ಪುರಾವೆಗಳ ಸಾರಾಂಶವಾಗಿವೆ, ಸಂಸ್ಥೆಗಳು ಸರಿಯಾದ ಗುಂಪಿನಲ್ಲಿವೆಯೇ ಅಥವಾ ಜೀವಶಕ್ತಿಯುಳ್ಳ ಪರಿಸರಕ್ಕೆ ಕೊಡುಗೆ ನೀಡುತ್ತಿವೆಯೇ ಎಂದು ತೀರ್ಮಾನಿಸುವ ಪ್ರಶ್ನೆಯೇ ಇಲ್ಲ. ಈ ವಿಷಯಗಳು ಸಂಸ್ಥೆಯ ನೀತಿ ತಯಾರಕರು ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಯ ಚರ್ಚೆಗೆ ಮತ್ತು ನಿರ್ಣಯಕ್ಕೆ ಬಿಟ್ಟದ್ದು.

ಮೂಲತತ್ವ ಗುಣಲಕ್ಷಣಗಳ ಸಮೂಹಗಳ ವೃಕ್ಷ ರೇಖಾಚಿತ್ರವನ್ನು ಚಿತ್ರ ೨–೭ರಲ್ಲಿ ತೋರಿಸಲಾಗಿದೆ. ಇದು ಗುಣಲಕ್ಷಣಗಳ ನಡುವಿನ ಅನುರೂಪತೆಯ ಆಧಾರಿತವಾಗಿದೆ. ಉದಾಹರಣೆಗೆ, ವೈಜ್ಞಾನಿಕ ಅಭಿವೃದ್ಧಿ ಮತ್ತು ವಿಜ್ಞಾನಗಳ ಕುರಿತ ಕೇಂದ್ರಿಕರಣ ಎರಡೂ ಅಂತರ್ಬೋಧನೆಯ ಪ್ರಜ್ಞೆಯಾಗಿದೆ. ಆದರೆ, ಸೇವಾ ಕಾರ್ಯಗಳು ಎರಡರ ನಡುವಿನ ಅನುರೂಪತೆಯನ್ನು ಹೊಂದಿದ್ದು, ಆಶ್ಚರ್ಯಕರವಾಗಿದೆ. ವೃಕ್ಷ ರೇಖಾಚಿತ್ರದ ಕೊನೆಯವು ಕೆಲವೇ ಕೆಲವು ಅನಾಥ ಗುಣಲಕ್ಷಣಗಳು, ಇಂತಹ ಗುಣಲಕ್ಷಣಗಳು ಸಂಸ್ಥೆಯೊಂದಿಗಿರಬಹುದು.

ಮೂರು ಸಮೂಹಗಳ ಗುಣಲಕ್ಷಣಗಳು ಮೂರು ಮೂಲಮಾದರಿ ಸಂಸ್ಥೆಗಳನ್ನು ಪ್ರತಿನಿಧಿಸಿವೆ. ಮೊದಲ ಮೂಲಮಾದರಿಗಳು ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ, ಸಂಶೋಧನೆ, ಶಿಕ್ಷಣ ಮತ್ತು ವಿಜ್ಞಾನಗಳು ಹಾಗೂ ವೃತ್ತಿಗಳಲ್ಲಿನ ಸೇವೆಯಲ್ಲಿ ತೊಡಗಿರುವ ದೇಶದ ಸುಧಾರಿತ ಸಂಸ್ಥೆ. ಎರಡನೆಯದು, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಮಾನವಿಕ ಮತ್ತು ಸಮಾಜ ವಿಜ್ಞಾನ ಹಾಗೂ ಲಲಿತಕಲೆಗಳಲ್ಲಿ ತೊಡಗಿಸಿಕೊಂಡಿರುವ ರಾಜ್ಯದ ಪ್ರಮುಖ ಸಂಸ್ಥೆ. ಮತ್ತು ಮೂರನೆಯದು, ತಾಂತ್ರಿಕ ಅಭಿವೃದ್ಧಿಗಾಗಿ ಕೊಡುಗೆಯನ್ನು ನೀಡುತ್ತಿರುವ ವಿಶ್ವದ ಸರ್ವಶ್ರೇಷ್ಠ ಸಂಸ್ಥೆ. ಮೊದಲನೆಯ ಮತ್ತು ಮೂರನೆಯ ಮೂಲಮಾದರಿಗಳು ಒಂದಕ್ಕೊಂದು ಹತ್ತಿರವಿದ್ದು, ಮೊದಲ ಮತ್ತು ಎರಡನೆಯದು ವಿರುದ್ಧವಾಗಿವೆ. ಕರ್ನಾಟಕ ಜ್ಞಾನ ಪರಿಸರಕ್ಕೆ ಸಂಬಂಧಿಸಿದಂತೆ ಈ ಮೂಲಮಾದರಿಗಳು ಜ್ಞಾನ ಸಮಾಜದ ಅಭಿವೃದ್ಧಿಗೆ ಪೂರಕವೇ ಅಥವಾ ಸೂಕ್ತವೇ ಎಂಬ ಪ್ರಶ್ನೆಗಳು ಏಳುತ್ತವೆ.




ಚಿತ್ರ ೨–೭: ಗುಣಲಕ್ಷಣಗಳ ಸಮೂಹಗಳು

### ಚರ್ಚೆ ಮತ್ತು ಉಪಸಂಹಾರ

ಕರ್ನಾಟಕವು ಉನ್ನತ ಶಿಕ್ಷಣದ ೬೫ ಕ್ಕೂ ಹೆಚ್ಚಿನ ಸಂಸ್ಥೆಗಳನ್ನು ಹೊಂದಿದ್ದು, ಕೆಲವು ಸಂಸ್ಥೆಗಳನ್ನು ನಮ್ಮ ಮಾದರಿಯಲ್ಲಿ ಪರಿಗಣಿಸಿಲ್ಲ ಮತ್ತು ಮುಂದಿನ ಪುರಾವರ್ತನೆಯಲ್ಲಿ ಗಣನೆ ತೆಗೆದುಕೊಳ್ಳಬಹುದಾಗಿದೆ. ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರಗಳ ಮನೋಭಾವಗಳನ್ನು ಸೆರೆ ಹಿಡಿಯಲು ನಾವು ಪರಿಗಣಿಸಿದ ಮತ್ತು ಆಳವಾದ ಅಧ್ಯಯನ ನಡೆಸಿದ ೬೫ ಸಂಸ್ಥೆಗಳ ಸವಿವರವಾದ ಮಾಹಿತಿಗಳು ಸಾಕಾಗುತ್ತವೆ ಮತ್ತು ಸೂಕ್ತವಾಗಿವೆ. ಇವುಗಳ ಆಶೋತ್ತರಗಳ ದತ್ತಾಂಶಗಳು ಸಾರ್ವಜನಿಕವಾಗಿ ಲಭ್ಯವಿದ್ದು, ಪ್ರಸ್ತುತ ಮತ್ತು ಸಮಂಜಸವಾಗಿವೆ ಎಂದು ನಾವು ಭಾವಿಸುತ್ತೇವೆ. ಸಂಸ್ಥೆಗಳ ಸವಿವರಗಳನ್ನು ಹೊಸ ಸಂಸ್ಥೆಗಳ ಹೆಚ್ಚುವರಿ, ಸದ್ಯ ಇರುವ ಸಂಸ್ಥೆಗಳ ತೆಗೆದುಹಾಕುವಿಕೆ, ದರ್ಶನ/ಧ್ಯೇಯ ವಾಕ್ಯಗಳ ಪರಿಷ್ಕರಣೆ ಮುಂತಾದ ಕಾರಣಗಳಿಂದ ದತ್ತಾಂಶಗಳಲ್ಲಿ ಬದಲಾವಣೆಗಳು ಕಂಡುಬಂದಲ್ಲಿ ನವೀಕರಿಸಬಹುದಾಗಿದೆ. ಮುಂದಿನ ಹಂತದಲ್ಲಿ ಮೇ–ಜೂನ್ ೨೦೧೨ರಲ್ಲಿ ಸಂಗ್ರಹಿಸಲಾದ ೬೫ ಸಂಸ್ಥೆಗಳ ದತ್ತಾಂಶಗಳ ವಿಶ್ಲೇಷಣೆಯನ್ನು ಅನುಬಂಧ ೧ ರಲ್ಲಿ ನೀಡಲಾಗಿದೆ ಮತ್ತು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರಗಳ ಮನೋಭಾವಗಳನ್ನು ಮೌಲ್ಯೀಕರಿಸಲಾಗಿದೆ.




ಚಿತ್ರ ೨–೮: ಭೌಗೋಳಿಕವಾಗಿ ವಿತರಣೆಯಾದ ಕರ್ನಾಟಕದ ಉನ್ನತ ಶಿಕ್ಷಣ ಸಂಸ್ಥೆಗಳು

## ಭೌಗೋಳಿಕ ವಿಸ್ತರಣೆ ಮತ್ತು ವಿಸ್ತಾರ

ಚಿತ್ರ ೨-೮ರಲ್ಲಿ ತೋರಿಸಿದಂತೆ, ಪ್ರಾಥಮಿಕವಾಗಿ ಬೆಂಗಳೂರು ಮತ್ತು ಮೈಸೂರು ಸಮೀಪವಿರುವ ೬೫ ಸಂಸ್ಥೆಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯ ಸಂಸ್ಥೆಗಳು ಮಾಹಿತಿಗಳನ್ನು ಹೊಂದಿರುವ ಕುರಿತು ಜನಾದೇಶವಿದ್ದರೂ, ೬೫ ಸಂಸ್ಥೆಗಳ ನಡುವೆ ಯಾವುದೇ ಸಂಸ್ಥೆಗಳು ಜಿಲ್ಲೆಗೆ ಸಾಮೀಪ್ಯ ಹೊಂದಿರುವ ಮಾಹಿತಿಗಳನ್ನು ವಿಸ್ತೃತಪಡಿಸಿಲ್ಲ. ಆದರೆ, ಎಲ್ಲಾ ಸಂಸ್ಥೆಗಳು ರಾಜ್ಯ ಮತ್ತು ಉನ್ನತ ಸ್ಥಾನಗಳನ್ನು ಹೊಂದಲು ಬಯಸುತ್ತವೆ. ಬಹುತೇಕ ಈ ಎಲ್ಲಾ ಸಂಸ್ಥೆಗಳ ಸೇವೆಗಳು ಕೆಲವು ಜಿಲ್ಲೆಗಳಿಗೆ ಮತ್ತು ಯಾವುದೇ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಗಮನೀಕರಿಸಿಲ್ಲವಾದಲ್ಲಿ, ಆಶೋತ್ತರಗಳ ಮನೋಭಾವಗಳು ಗಮನಾರ್ಹವಾದ ಅಂತರವೆನಿಸುವುದಿಲ್ಲ. ಮತ್ತೊಂದೆಡೆ, ಸಮೀಪವಿರುವ ಜಿಲ್ಲೆಗಳಿಗೆ ಸೇವೆಗಳನ್ನು ಸಂಸ್ಥೆಗಳು ಪೂರೈಸುವುದರಲ್ಲಿ ವಿಫಲತೆ ಹೊಂದಿದರೆ, ಏಕರೂಪವಾಗಿಲ್ಲದ ವಿತರಣೆಯು ಜಿಲ್ಲೆಗಳ ಕುರಿತು ಗಮನಿಸದಿದ್ದರೆ, ನ್ಯೂನತೆ ಎದುರಿಸಬಹುದಾಗಿದೆ.

## ಸಾಧಾರಣ ಆಶೋತ್ತರಗಳು

ಎಲ್ಲಾ ಸಂಸ್ಥೆಗಳು ಪ್ರಮುಖ (೨೭), ಸರ್ವಶ್ರೇಷ್ಠ (೧೯) ಅಥವಾ ಸಾಮಾನ್ಯ (೧೯) ಸ್ಥಾನಗಳನ್ನು ಹೊಂದಲು ಬಯಸುತ್ತವೆ. ಜಿಲ್ಲೆಗಳ, ರಾಜ್ಯದ, ದೇಶದ, ಪ್ರಾಂತದ ಮತ್ತು ವಿಶ್ವದ, ಸರ್ವಶ್ರೇಷ್ಠ, ಪ್ರಮುಖ, ಸಾಮಾನ್ಯ ಸಂಸ್ಥೆಗಳಾಗಬೇಕೆಂಬ ಆಶೋತ್ತರಗಳ ಕುರಿತು ಯಾವುದೇ ಸಂಸ್ಥೆಗಳು ಪ್ರಸ್ತಾಪಿಸಿಲ್ಲ. ಸಂಸ್ಥೆಗಳ ಆಶೋತ್ತರಗಳು ತದ್ವಿರುದ್ಧವಾಗಿದ್ದು, ಜಾಗತಿಕ ಮತ್ತು ರಾಷ್ಟ್ರೀಯ ಸಂಸ್ಥೆಗಳ ಶ್ರೇಣಿ ಮತ್ತು ವಿಶ್ವ ದರ್ಜೆ ವಿಶ್ವವಿದ್ಯಾನಿಲಯ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಗಳ ಕುರಿತು ಮಹತ್ವ ನೀಡಿವೆ. ಪರಿಣತಿ ಸಂಸ್ಥೆಗಳು ಸಹಾ ಕರ್ನಾಟಕಕ್ಕೆ ಅನನ್ಯವಾಗಿದ್ದರೂ, ರಾಜ್ಯ, ದೇಶ, ಪ್ರಾಂತ ಅಥವಾ ವಿಶ್ವದ ಸರ್ವಶ್ರೇಷ್ಠ, ಪ್ರಮುಖ ಸಂಸ್ಥೆಯಾಗಬೇಕೆಂದು ತೋರುತ್ತಿಲ್ಲ. ನಮ್ರತೆಯು ದೇಶದ ಮತ್ತು ರಾಜ್ಯದ ಸಾಂಸ್ಕೃತಿಕ ಲಕ್ಷಣವಾಗಿ ಪ್ರತಿಫಲಿಸಿರಬಹುದು, ಅದರಲ್ಲಿ ಸುಪ್ತವಾದ ಆಶೋತ್ತರಗಳು ನಮೂದಿಸಿದಕ್ಕಿಂತ ಹೆಚ್ಚಿನದಿರಬಹುದು. ಅಥವಾ ನಮೂದಿಸಿದ ಆಶೋತ್ತರಗಳು ನಿಜವಾದ ಆಶೋತ್ತರಗಳಾಗಿರಬಹುದು. ವಿವರಣೆಯನ್ನು ಪರಿಗಣಿಸದೆ, ಸವಾಲುಗಳು, ಜಾಗತಿಕ ಸ್ಪರ್ಧೆಯ ನಡುವೆ ಜ್ಞಾನಸಮಾಜದ ಅಭಿವೃದ್ಧಿಯ ಅಗತ್ಯತೆಗಳ ಆಶೋತ್ತರಗಳು ಹೊಂದಾಣಿಕೆಯಾಗಬೇಕು.

## ಜಾಗತಿಕ ಮತ್ತು ಸ್ಥಳೀಯ ವಿಸ್ತಾರ


ಈಗಾಗಲೇ ಎತ್ತಿ ತೋರಿಸಿದ ಹಾಗೆ, ಯಾವುದೇ ಸಂಸ್ಥೆಗಳು, ಜಿಲ್ಲೆಗಳು ಇವುಗಳ ವ್ಯಾಪ್ತಿಯೆಂದು ವ್ಯಾಖ್ಯಾನಿಸಿಲ್ಲ, ಅದರೆ, ಮೂರನೆ ಭಾಗದಷ್ಟು ವ್ಯಾಖ್ಯಾನಿಸಿವೆ, ಸ್ವಲ್ಪಮಟ್ಟಿನ ಅರ್ಧಕ್ಕಿಂತ ಕಡಿಮೆ ಇರುವವು ದೇಶ ತಮ್ಮ ವ್ಯಾಪ್ತಿಯೆಂದು, ಯಾವುದೂ ಪ್ರಾಂತ ತಮ್ಮ ವ್ಯಾಪ್ತಿಯೆಂದು ಹಾಗೂ ಐದನೆ ಭಾಗದಷ್ಟು ವಿಶ್ವ ತಮ್ಮ ವ್ಯಾಪ್ತಿಯೆಂದು ವ್ಯಾಖ್ಯಾನಿಸಿವೆ. ತಾತ್ವಿಕವಾಗಿ, ಪಿರಮಿಡ್ ರಚನೆಯುಳ್ಳ ದೊಡ್ಡ ಪ್ರಮಾಣದ ಸ್ಥಳೀಯ ವಿಸ್ತಾರವನ್ನು ಮತ್ತೂ ಕೆಲವು ಜಾಗತಿಕ ವಿಸ್ತಾರವನ್ನು ನಿರೀಕ್ಷಿಸಿವೆ. ಅತ್ಯುತ್ತಮ ಮಾದರಿಯೆಂದು ಉಲ್ಲೇಖಿತವಾದ ಅಮೇರಿಕಾದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು (ಚಿತ್ತ ೨-೯) ನೋಡಬಹುದಾಗಿದೆ. ಸಮುದಾಯ ಕಾಲೇಜುಗಳು ಸ್ಥಳೀಯ ವ್ಯಾಪ್ತಿಯನ್ನೊಳಗೊಂಡಿದ್ದು, ಅತಿದೊಡ್ಡ ಪ್ರಮಾಣದ ಸಂಖ್ಯೆಯನ್ನು (೧೦೮೬) ಹೊಂದಿದೆ. ಮತ್ತೊಂದೆಡೆ, ಜಾಗತಿಕ ಮತ್ತು ರಾಷ್ಟ್ರೀಯ ವ್ಯಾಪ್ತಿಯನ್ನು ಹೊಂದಿರುವ, ಕೆಲವೇ ಕೆಲವು ಜಾಗತಿಕ ವಿಶ್ವವಿದ್ಯಾನಿಲಯಗಳು (೧೦) ಮತ್ತು ಸಂಶೋಧನಾ ವಿಶ್ವವಿದ್ಯಾನಿಲಯಗಳು (೯೪) ಇವೆ. ಡಾಕ್ಟರಲ್ ವಿಶ್ವವಿದ್ಯಾನಿಲಯಗಳು (೧೮೪) ಮತ್ತು ಪ್ರಾದೇಶಿಕ (ಅಮೇರಿಕಾದಲ್ಲಿ) ೪ ವರ್ಷದ ವಿಶ್ವವಿದ್ಯಾನಿಲಯಗಳು ಅನುಕ್ರಮವಾಗಿವೆ.

ಚಿತ್ರ ೨–೯: ಅಮೇರಿಕಾದ ಉನ್ನತ ಶಿಕ್ಷಣ ವ್ಯವಸ್ಥೆಯ ಸ್ವವಿವರ

ಅಸಮತೋಲನೆಯು, ಪಿರಮಿಡ್ ರಚನೆಗೆ ಹೋಲಿಸಿದರೆ, ಭಾಗಶಃ ಇದು ಮಾದರಿ ಆಯ್ಕೆಯ ಪರಿಣಾಮವಾಗಿರಬಹುದು. ವಿಶ್ವವಿದ್ಯಾನಿಲಯಗಳು ಮತ್ತು ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳನ್ನು ಗಮನಿಸಿದರೆ, ಸ್ಥಳೀಯ ಕೇಂದ್ರಿತವಾದ ಸಂಸ್ಥೆಗಳನ್ನು ಹೊರಗಿಡಲಾಗಿತ್ತು. ಈ ಸನ್ನಿವೇಶವು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಸ್ತುತವಾಗಿ ಹೊರಹೊಮ್ಮಿದ ಹಂತದ ಪರಿಣಾಮವಾಗಿದೆ. ಕಾರಣಗಳೇನೇ ಇದ್ದರೂ, ಸಂಸ್ಥೆಗಳ ವಿಸ್ತಾರಗಳನ್ನು ಸಮತೋಲಿಸುವುದು ಕರ್ನಾಟಕದ ಜ್ಞಾನಸಮಾಜದ ಅಭಿವೃದ್ಧಿಯ ಪ್ರಮುಖ ನಿಯತಾಂಕವಾಗಿದೆ.

## ಕಾರ್ಯಗಳ ಸಮತೋಲನ

ಒಟ್ಟಾರೆಯಾಗಿ, ಸಂಶೋಧನೆ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಸಮಾನವಾದ ಮಹತ್ವವನ್ನು ಮತ್ತು ಸೇವೆಗೆ ಅತಿ ಕಡಿಮೆ ಪ್ರಮಾಣದ ಪ್ರಾಮುಖ್ಯತೆಯನ್ನು ನೀಡುತ್ತಿರುವುದರೊಂದಿಗೆ, ಸಂಶೋಧನೆ (೫೮), ಶಿಕ್ಷಣ (೫೬) ಮತ್ತು ಸೇವೆ (೩೪) ಸಮತೋಲನೆಯನ್ನು ಕಾಯ್ದಿಟ್ಟುಕೊಂಡಿರುವ ಹಾಗಿವೆ (ಚಿತ್ರ ೨–೨). ಸಂಶೋಧನೆಗಿಂತಲೂ (೨೬) ಶಿಕ್ಷಣ (೩೮) ಮೊದಲ ಆದ್ಯತೆಯಾಗಿ, ಶಿಕ್ಷಣ (೧೫) ದೊಂದಿಗೆ ಸೇವೆ (೧೨), ಸಂಶೋಧನೆ (೨೭) ಎರಡನೆ ಆದ್ಯತೆಯಾಗಿ ಮತ್ತು ಮೂರನೆಯ ಆದ್ಯತೆ ಸೇವೆ (೨೧) ಪ್ರಧಾನವಾಗಿದೆ. ಪರಿಣತಿ ಮತ್ತು ಸಮಗ್ರವಾದ ಸಂಸ್ಥೆಗಳಲ್ಲಿನ ಸಂಶೋಧನೆ ಮತ್ತು ಸೇವೆಗಳ ಮಹತ್ವದಲ್ಲಿ ಸಣ್ಣ ಪ್ರಮಾಣದ ವಿಭಿನ್ನತೆ ಕಂಡು ಬರುತ್ತದೆ (ಚಿತ್ರ ೨–೫). ಆದರೆ, ಸಮಗ್ರ ಸಂಸ್ಥೆಗಳು ಪರಿಣತಿ ಸಂಸ್ಥೆಗಳಿಗಿಂತ ಶಿಕ್ಷಣಕ್ಕೆ ಒತ್ತು ನೀಡುತ್ತಿವೆ.




ಕೊನೆಯದಾಗಿ, ಐದು ಮಾದರಿಯ ಸಂಸ್ಥೆಗಳ ನಡುವಿನ ಸಂಶೋಧನೆ ಮತ್ತು ಶಿಕ್ಷಣ ಕ್ಷೇತ್ರಗಳ ಪ್ರಾಧಾನ್ಯತೆಗಳು ಪೂರಕವಾಗಿವೆ. ಎಲ್ಲಾ ಸಂಶೋಧನಾ, ಖಾಸಗಿ ಮತ್ತು ರಾಷ್ಟ್ರೀಯ ಸಂಸ್ಥೆಗಳು ಸಂಶೋಧನೆ ಮತ್ತು ನಂತರದಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿವೆ. ಮತ್ತೊಂದೆಡೆ, ರಾಜ್ಯ ಮತ್ತು ಸ್ವಾಯತ್ತ ಸಂಸ್ಥೆಗಳು ಶಿಕ್ಷಣ ಮತ್ತು ನಂತರದಲ್ಲಿ ಸಂಶೋಧನೆಗೆ

ಒಲವು ತೋರಿಸಿದ್ದಾರೆ. ಸೇವೆಯ ಮಾದರಿಯು ಅಸ್ಪಷ್ಟವಾಗಿದ್ದು, ಖಾಸಗಿ, ರಾಷ್ಟ್ರೀಯ ಸಂಸ್ಥೆಗಳು ಇದಕ್ಕೆ ಹೆಚ್ಚಿನ ಒತ್ತು ನೀಡಿದರೆ, ರಾಜ್ಯ ಸಂಸ್ಥೆಗಳು ಕಡಿಮೆ ಪ್ರಮಾಣದ ಆದ್ಯತೆ ನೀಡಿವೆ.

ಕಾರ್ಯಗಳಿಗೆ ಸಂಬಂಧಿಸಿದ ಆಶೋತ್ತರಗಳ ಪುರಾವೆಗಳು ಮುಖ್ಯವಾಗಿ ಸಂಶೋಧನೆ ಮತ್ತು ಶಿಕ್ಷಣ ನಿರೀಕ್ಷೆಗಳಿಗೆ ಹೊಂದಾಣಿಕೆಯಾಗುತ್ತಿವೆ ಎಂದು ತೋರುತ್ತದೆ. ಸೇವಾ ಪುರಾವೆಗಳು ವಿವಿಧ ಸಂಸ್ಥೆಗಳ ಆಶೋತ್ತರಗಳಿಗೆ ಹೊಂದಾಣಿಕೆಯಾಗುತ್ತಿರುವುದು ಸ್ಪಷ್ಟವಾಗಿಲ್ಲ.

## ಅಸಮಾನವಾದ ಕೇಂದ್ರಿತ ವಲಯಗಳು

ಸೈದ್ಧಾಂತಿಕವಾಗಿ, ಜ್ಞಾನಸಮಾಜದ ಅಭಿವೃದ್ಧಿಗಾಗಿ ವಿಜ್ಞಾನ, ವೃತ್ತಿ, ವೃತ್ತಿಪರತೆ, ಲಲಿತ ಕಲೆಗಳು, ಮಾನವಿಕ/ಸಮಾಜವಿಜ್ಞಾನಗಳು ಏಕರೂಪತೆಯನ್ನು ಕಾಪಾಡಿಕೊಂಡಿರಬೇಕು ಎಂಬ ವಾದ ಮಂಡಿಸಬಹುದು. ಈ ಸಿದ್ಧಾಂತಕ್ಕೆ ಸಂಬಂಧಿಸಿದಂತೆ, ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರಗಳ ಕುರಿತ ಗಮನವು ಸಮಾನತೆಯನ್ನು ಕಾಪಾಡಿಕೊಂಡಿಲ್ಲ (ಚಿತ್ರ ೨–೩). ಮೂರನೆ ಎರಡು ಭಾಗದಷ್ಟು ಸಂಸ್ಥೆಗಳು ವಿಜ್ಞಾನಕ್ಕೆ ಪ್ರಾಧಾನ್ಯತೆ ನೀಡಿದರೆ, ಅರ್ಧಕ್ಕಿಂತಲೂ ಹೆಚ್ಚಿನವು ವೃತ್ತಿ ಕುರಿತು, ಸಣ್ಣ ಪ್ರಮಾಣವನ್ನು ಮಾನವಿಕ/ಸಮಾಜ ವಿಜ್ಞಾನಗಳು, ಕಾಲುಭಾಗದ ಸ್ವಲ್ಪ ಲಲಿತ ಕಲೆಗಳಿಗೆ ಮತ್ತು ಕೆಲವೇ ಕೆಲವು ವೃತ್ತಿಪರತೆಗೆ ಮಹತ್ವ ನೀಡಿವೆ. ಈ ತತ್ವಕ್ಕೆ ಹೋಲಿಸಿದರೆ, ಒಟ್ಟಾರೆ, ಸಂಸ್ಥೆಗಳು ವಿಜ್ಞಾನ ಮತ್ತು ವೃತ್ತಿಗೆ ತುಸು ಹೆಚ್ಚಿನ ಪ್ರಾಮುಖ್ಯತೆ ನೀಡಿವೆ.

ತುಸು ಹೆಚ್ಚಿನ ಮೂರನೇ ಎರಡರಷ್ಟು ಸಂಸ್ಥೆಗಳು ವಿಜ್ಞಾನಕ್ಕೆ ಮೊದಲ ಆದ್ಯತೆ ನೀಡಿದರೆ, ಅರ್ಧದಷ್ಟು ಸಂಸ್ಥೆಗಳು ವೃತ್ತಿ ಮತ್ತು ಮಾನವಿಕಗಳು/ಸಮಾಜವಿಜ್ಞಾನಗಳಿಗೆ ಮೊದಲ ಆದ್ಯತೆ ನೀಡಿವೆ (ಚಿತ್ರ ೨–೪). ಕಾಲುಭಾಗಕ್ಕಿಂತ ಕಡಿಮೆ ಸಂಸ್ಥೆಗಳು ವಿಜ್ಞಾನಕ್ಕೆ ಎರಡನೆ ಆದ್ಯತೆ ಸೂಚಿಸಿದರೆ, ಅರ್ಧ ಸಂಖ್ಯೆಯವು ವೃತ್ತಿಗೆ ಎರಡನೇ ಆದ್ಯತೆ ನೀಡಿವೆ. ಲಲಿತ ಕಲೆಗಳು ಮತ್ತು ಮಾನವಿಕ/ಸಮಾಜವಿಜ್ಞಾನಗಳಿಗೆ ಸಾಮಾನ್ಯವಾಗಿ ಕಡಿಮೆ ಆದ್ಯತೆ ನೀಡಿದ್ದಾರೆ.

ಸಮಗ್ರ ಸಂಸ್ಥೆಗಳು ಪರಿಣತಿ ಸಂಸ್ಥೆಗಳಿಗಿಂತ ಹೆಚ್ಚಿನ ಮಹತ್ವವನ್ನು ಎಲ್ಲಾ ಕೇಂದ್ರಿತ ವಲಯಗಳಿಗೆ ಕೊಟ್ಟಿದೆ. ಇದು ವ್ಯಾಖ್ಯಾನದ ಪುನರುಕ್ತಿಯಾಗಿರಬಹುದು ಮತ್ತು ಕೇಂದ್ರಿಕರಣವನ್ನು ಹೊಂದಿರಬಹುದು (ಚಿತ್ರ ೨–೫). ಸ್ವಾಯತ್ತ ಮತ್ತು ರಾಜ್ಯ ಸಂಸ್ಥೆಗಳು ವಿಜ್ಞಾನಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಮತ್ತು ಬಹುಪಾಲು ಎಲ್ಲಾ ಮಾದರಿಯ ಸಂಸ್ಥೆಗಳು ಇದೇ ವಲಯಕ್ಕೆ ಪ್ರಾಧಾನ್ಯತೆ ನೀಡಿದ್ದಾರೆ. ಸ್ವಾಯತ್ತ, ಖಾಸಗಿ ಮತ್ತು ರಾಜ್ಯ ಸಂಸ್ಥೆಗಳು ವೃತ್ತಿಗಳಿಗೆ ಮಹತ್ವ ನೀಡಿದರೆ, ಸಂಶೋಧನೆ ಮತ್ತು ರಾಷ್ಟ್ರೀಯ ಸಂಸ್ಥೆಗಳಿಗೆ ಮೂರನೆಯ ಆದ್ಯತೆಯಾಗಿದೆ. ರಾಜ್ಯ ಸಂಸ್ಥೆಗಳು ಲಲಿತಕಲೆಗಳಿಗೆ ಹೆಚ್ಚಿನ ಒಲವು ತೋರಿಸಿದರೆ, ಅರ್ಧಕ್ಕಿಂತ ಕಡಿಮೆ ಸಂಖ್ಯೆಯ ಸಂಸ್ಥೆಗಳು ಇದಕ್ಕೆ ಒತ್ತು ನೀಡಿದ್ದಾರೆ. ಮೂರಕ್ಕೆ ತುಸು ಕಡಿಮೆಯ ಖಾಸಗಿ ಸಂಸ್ಥೆಗಳು ಮತ್ತು ಐದರಷ್ಟು ಸಂಶೋಧನಾ ಸಂಸ್ಥೆಗಳು ಲಲಿತ ಕಲೆಗಳಿಗೆ ಒತ್ತಾಸೆಯಾಗಿವೆ. ಸ್ವಾಯತ್ತ ಮತ್ತು ರಾಷ್ಟ್ರೀಯ ಸಂಸ್ಥೆಗಳ ಮಹತ್ವ ತುಸು ಕಡಿಮೆ. ಹೆಚ್ಚಿನ ಖಾಸಗಿ, ರಾಜ್ಯ ಮತ್ತು ಸಂಶೋಧನಾ ಸಂಸ್ಥೆಗಳು ಮಾನವಿಕಗಳು/ಸಮಾಜವಿಜ್ಞಾನಗಳಿಗೆ ಮಹತ್ವ ನೀಡಿವೆ ಮತ್ತು ಐದರಷ್ಟು ರಾಷ್ಟ್ರೀಯ ಮತ್ತು ಸ್ವಾಯತ್ತ ಸಂಸ್ಥೆಗಳು ಈ ವಿಭಾಗಗಳಿಗೆ ಒಲವು ತೋರಿದ್ದಾರೆ.

ಹೀಗೆ, ಕೇಂದ್ರ ವಲಯಗಳ ಸುತ್ತ ಮತ್ತು ವಿವಿಧ ಮಾದರಿಯ ಸಂಸ್ಥೆಗಳ ನಡುವಿನ ವಿತರಣೆಯು ಸಮಾನರೂಪತೆಯನ್ನು ಕಾಪಾಡಿಕೊಂಡಿಲ್ಲ. ಜ್ಞಾನಸಮಾಜದ ಅಭಿವೃದ್ಧಿಗೆ ಎಲ್ಲಾ ಕೇಂದ್ರ ವಲಯಗಳಿಗೆ ಸಮಾನ ಮಹತ್ವವನ್ನು ನೀಡಬೇಕೆಂದು ಊಹಿಸಿಕೊಂಡಲ್ಲಿ, ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಹಂಚಿಕೆಯು ಅತ್ಯುಚ್ಛ ಕಲ್ಪನೆಗೆ ದೂರವಾಗಿದೆ.

## ತ್ರಿವಿಮಿತೀಯ ಫಲಿತಾಂಶಗಳು

ಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ, ಆದರ್ಶಪ್ರಾಯವಾಗಿ ಜ್ಞಾನ ಸಮಾಜದ ಪ್ರಗತಿಗೆ ವೈಜ್ಞಾನಿಕ, ತಾಂತ್ರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳು ಸಮಾನವಾದ ಪ್ರಾಮುಖ್ಯತೆ ನೀಡಬೇಕು ಎಂದು ವಾದಿಸಬಹುದು ಮತ್ತು ಉನ್ನತ ಶಿಕ್ಷಣದ ಆಶೋತ್ತರಗಳಿಗೆ ಸರಿಸಮಾನವಾದ ಮಹತ್ವವನ್ನು ನೀಡಲೇಬೇಕು. ಕರ್ನಾಟಕದಲ್ಲಿ ಈ ಪರಿಪೂರ್ಣತೆಗಿಂತಲೂ ಮಹತ್ವವು ಹೆಚ್ಚು ದೂರಕ್ರಮಿಸಬೇಕಾಗಿದೆ. ಸುಮಾರು ೮೦% ಸಂಸ್ಥೆಗಳು ಸಾಮಾಜಿಕ ಅಭಿವೃದ್ಧಿಗೆ, ಅರ್ಧ ಸಂಖ್ಯೆ ಸಂಸ್ಥೆಗಳು ವೈಜ್ಞಾನಿಕ ಅಭಿವೃದ್ಧಿಗೆ, ಮೂರರಿಗಿಂತಲೂ ಕಡಿಮೆಯವು ತಾಂತ್ರಿಕ ಅಭಿವೃದ್ಧಿಗೆ ಮತ್ತು ಐದರಷ್ಟು ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಮಹತ್ವ ನೀಡಿವೆ (ಚಿತ್ರ ೨–೩). ಹೆಚ್ಚು ಕಡಿಮೆ ಒಂದೇ ಪ್ರಮಾಣದ ಪ್ರಾಧಾನ್ಯತೆಯನ್ನು ಸಾಮಾಜಿಕ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿಗೆ ನೀಡಿರುವುದು, ಜಾಗತಿಕ ಅರ್ಥಿಕತೆಗೆ ಆಶ್ಚರ್ಯವನ್ನುಂಟು ಮಾಡಿದೆ. ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಗಳು, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳಿಗೆ ಸಾಧಕವಾಗಿವೆ. ಆದರೆ, ಈ ಎರಡೂ ಸಾಮಾಜಿಕ ಅಭಿವೃದ್ಧಿಗೆ ಅಲ್ಪ ಮಹತ್ವವನ್ನು ನೀಡಿದ್ದು, ಹೆಚ್ಚಿನದ್ದು ಆರ್ಥಿಕ ಅಭಿವೃದ್ಧಿಯೆಡೆಗೆ ಒಲವು ತೋರಿಸಿವೆ. ಇದಲ್ಲದೆ, ಈಗಾಗಲೇ ಚರ್ಚಿಸಿದಂತೆ, ವೈಜ್ಞಾನಿಕ ಮತ್ತು ತಾಂತಿಕ್ರ ಅಭಿವೃದ್ಧಿಗಳು ವಿಜ್ಞಾನ ಮತ್ತು ವೃತ್ತಿಗಳಿಗೆ ಹೊಂದಾಣಿಕೆಯಾಗುತ್ತಿಲ್ಲ. ಕಡಿಮೆ ಪ್ರಮಾಣದ ಸಾಂಸ್ಕೃತಿಕ ಅಭಿವೃದ್ಧಿಯ ಕೇಂದ್ರೀಕರಣವು ದುರದೃಷ್ಟವಶಾತ್ ಕಡಿಮೆ ಆದ್ಯತೆ ಹೊಂದಿರುವ ಲಲಿತಕಲೆಗಳಿಗೆ ಹೊಂದಾಣಿಕೆಯಾಗುತ್ತಿವೆ. ಆದ್ಯತೆಯನುಸಾರವಾಗಿ ವಿಂಗಡಿಸಲ್ಪಟ್ಟವುಗಳಲ್ಲಿ (ಚಿತ್ರ ೨–೪), ಮೂರನೇ ಮತ್ತು ಅರ್ಧ ಸಂಖ್ಯೆಯ ನಡುವಿನವು ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಗಳಿಗೆ ಮೊದಲ ಒತ್ತು ನೀಡಿವೆ, ಕಾಲುಭಾಗದವು ತಾಂತ್ರಿಕ ಅಭಿವೃದ್ಧಿಗೆ ಮತ್ತು ಸಾಮಾಜಿಕ ಅಭಿವೃದ್ಧಿಗೆ ತಮ್ಮ ಆದ್ಯತೆ ನೀಡಿವೆ.

ಪರಿಣತಿ ಹೊಂದಿರುವ ಮತ್ತು ಸಮಗ್ರ ಸಂಸ್ಥೆಗಳು ಸಾಮಾಜಿಕ ಅಭಿವೃದ್ಧಿ, ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಗೆ ಕಡಿಮೆ ಪ್ರಾಧಾನ್ಯತೆ ನೀಡಿವೆ ಮತ್ತು ಆರ್ಥಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿವೆ (ಚಿತ್ರ ೨–೫). ಕುತೂಹಲಕಾರಿಯಾಗಿ, ಸಂಶೋಧನೆ, ಖಾಸಗಿ, ರಾಜ್ಯ ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿ ಸಾಮಾಜಿಕ ಅಭಿವೃದ್ಧಿಗೆ ಪ್ರಬಲವಾದ ಪ್ರಾಮುಖ್ಯತೆ ನೀಡಿವೆ. ಸಂಸ್ಥೆಗಳ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿ ಅಷ್ಟಾಗಿ ಪ್ರಬಲವಾಗಿಲ್ಲ, ಹಾಗೆಯೇ ಆರ್ಥಿಕ ಅಭಿವೃದ್ಧಿ ದುರ್ಬಲವಾಗಿದೆ. ಉಳಿದವುಗಳಿಗಿಂತ, ಖಾಸಗಿ ಸಂಸ್ಥೆಗಳು ಸಾಂಸ್ಕೃತಿಕ ಅಭಿವೃದ್ಧಿಗೆ ಅರ್ಥಪೂರ್ಣವಾದ ಮಹತ್ವವನ್ನು ನೀಡಿವೆ. ಹೀಗಾಗಿ, ಕೆಲವು ವಿನಾಯಿತಿಗಳನ್ನು ಹೊರತುಪಡಿಸಿದರೆ, ಸಂಸ್ಥೆಗಳ ವ್ಯಾಪ್ತಿ ಮತ್ತು ಮಾದರಿಗಳನ್ನು ಪರಿಗಣಿಸಿದರೆ, ಫಲಿತಾಂಶಗಳ ಮೇಲಿನ ಮಹತ್ವಗಳ ಮಾದರಿಗಳು ಚಿತ್ರ ೨–೩ರ ಆಧಾರಿತವಾಗಿದೆ.

**ಉಪಸಂಹಾರ**

ಕರ್ನಾಟಕ ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರಗಳ ಮನೋಭಾವಗಳು ಸಮೃದ್ಧವಾಗಿದ್ದು, ಅರ್ಥಪೂರ್ಣತೆಯಿಂದ ಕೂಡಿಲ್ಲ. ವ್ಯವಸ್ಥೆಯ ಬಲಾಬಲಗಳು ಮತ್ತು ದುರ್ಬಲಗಳನ್ನು ಮೂಲತತ್ವ ಮಾಪಕ, ವೃಕ್ಷ/ಟ್ರೀ ಮಾಪಕ, ನಕ್ಷೆಗಳು, ವೃಕ್ಷ ರೇಖಾಚಿತ್ರಗಳ ಮುಖೇನ ವಿಶ್ಲೇಷಿಸಲಾಗಿದೆ. ಸಂಕ್ಷಿಪ್ತವಾಗಿ:

೧. ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರಗಳು ಸಾಧಾರಣ ಮತ್ತು ವೈವಿಧ್ಯತೆಯಿಂದ ಕೂಡಿದೆ ಅದರೆ ಪರಿಪೂರ್ಣವಾಗಿ ಸಮತೋಲನವನ್ನು ಕಾಯ್ದಿಟ್ಟುಕೊಂಡಿಲ್ಲ;

೨. ಇದರ ಪರಿಧಿಯು ಸಮೃದ್ಧ ಹಾಗೂ ವಿಭಿನ್ನವಾಗಿದೆ, ಅದರೆ ಉತ್ತಮವಾಗಿ ವಿತರಣೆಯಾಗಿಲ್ಲ;

೩. ಇದರ ಒಟ್ಟಾರೆ ಕಾರ್ಯಚಟುವಟಿಕೆಗಳು ಯುಕ್ತವಾಗಿದ್ದು, ಸಮಂಜಸವಾಗಿ ಹಂಚಿಕೆಯಾಗಿಲ್ಲ;

೪. ಕೇಂದ್ರಿಕರಣದಲ್ಲಿ ವೈವಿಧ್ಯತೆಯಿದ್ದು, ಸಮಾನರೂಪ ರಹಿತವಾಗಿದೆ ಹಾಗೂ ಮರುಮೌಲ್ಯಮಾಪನದ ಅಗತ್ಯವಿದೆ; ಮತ್ತು

ಜ. ಇದರ ಫಲಿತಾಂಶಗಳು ಸಮರ್ಪಕವಾಗಿದೆ, ಆದರೆ ಪ್ರಾಧಾನ್ಯತೆಗಳು ವಿಚಲಿತವಾಗಿದ್ದು, ಜ್ಞಾನ ಸಮಾಜದ ಅಭಿವೃದ್ಧಿಯನ್ನು ಪೋಷಿಸಲು ಮರುಜೋಡಣೆಯ ಅವಶ್ಯಕತೆ ಇದೆ.

ಕರ್ನಾಟಕವನ್ನು ಜ್ಞಾನಸಮಾಜವನ್ನಾಗಿ ಪರಿವರ್ತಿಸುವ ದೃಷ್ಟಿಕೋನದಿಂದ ವೀಕ್ಷಿಸಿದಾಗ, ಸಮೃದ್ಧ ವೈವಿಧ್ಯತೆಗಳನ್ನು ಹೊಂದಿರುವ ಸಂಸ್ಥೆಗಳ ಆಶೋತ್ತರಗಳನ್ನು ಊಹಿಸಬಹುದಾಗಿದೆ ಮತ್ತು ಅನಿರೀಕ್ಷಿತವಾಗಿದೆ ಹಾಗೂ ಭಿನ್ನತೆಗಳನ್ನು ಹೊಂದಿರುವ ಉನ್ನತ ಶಿಕ್ಷಣ ಸಂಸ್ಥೆಗಳು ಕರ್ನಾಟಕದ ಜ್ಞಾನಪರಿಸರಕ್ಕೆ ಸಂಯೋಜನೆಯಾಗಲು ಮಾದರಿಯಾಗಿದೆ. ಪರಿಣಿತಿ ಮತ್ತು ಸಮಗ್ರ ಸಂಸ್ಥೆಗಳ ಆಶೋತ್ತರಗಳು ಸಮ್ಮಿಶ್ರಿತವಾಗಿದ್ದು, ಸಂಶೋಧನೆ, ಖಾಸಗಿ, ರಾಜ್ಯ, ಸ್ವಾಯತ್ತ ಮತ್ತು ರಾಷ್ಟ್ರೀಯ ಸಂಸ್ಥೆಗಳು ಇದೇ ಹಾದಿಯಲ್ಲಿವೆ. ಈ ಸಮ್ಮಿಶ್ರತತೆಯು ಮತ್ತೊಂದೆಡೆ ಸಂಸ್ಥೆಗಳ ಧ್ಯೇಯಗಳು ಮತ್ತು ಗುರಿಗಳನ್ನು ಸಾರಗುಂದಿಸುತ್ತದೆ, ಇನ್ನೊಂದೆಡೆ, ಸಂಸ್ಥೆಗಳ ವಿಕಸನ ಮತ್ತು ಜ್ಞಾನಪರಿಸರದ ಸಂಯೋಜನೆಗಳಿಗೆ ಪೂರಕವಾಗಿದೆ.

ಆಶೋತ್ತರಗಳ ಮನೋಭಾವಗಳನ್ನು ಮಾಪನ ಮಾಡಲು, ದರ್ಶನ/ಧ್ಯೇಯವಾಕ್ಯಗಳನ್ನು ಬಳಕೆಯ ಕುರಿತಾದ ಅಂಗೀಕಾರದ ಪ್ರಶ್ನೆಗಳೇಳಬಹುದು, ಈ ಕುರಿತ ಕಾರಣಗಳು ಕೆಳಗಿನಂತಿವೆ:

ಅ. ವಾಕ್ಯಗಳು ನಿಜವಾಗಿ ಸಂಸ್ಥೆಗಳ ಆಶೋತ್ತರಗಳನ್ನು ಸೆರೆಹಿಡಿಯದಿರಬಹುದು. ಭಾಗಿದಾರರ ಸಮಾಲೋಚನೆಗಳಿಂದ ಬಂದಂತಹ ಹುರುಳಿಲ್ಲದ, ವಿಕಸಿತವಲ್ಲದ ಅಥವಾ ಮಾನ್ಯತಾ ಮಾನದಂಡಗಳನ್ನು ತೃಪ್ತಿಪಡಿಸಲು ಮಾಡಿರಬಹುದು.

ಆ. ಮೂಲತತ್ವದ ಚೌಕಟ್ಟು ಶಬ್ದಾರ್ಥಗಳ ಸೂಕ್ಷ್ಮಗಳನ್ನು ಮತ್ತು ಸಂಸ್ಥೆಗಳ ಆಶೋತ್ತರಗಳ ಸಂಕೀರ್ಣತೆಯನ್ನು ಪರಿಗಣಿಸಿಲ್ಲದಿರಬಹುದು.

ಸಂಸ್ಥೆಯ ಸಾರ್ವಜನಿಕ ಹೇಳಿಕೆಗಳು ಈ ಸಂದರ್ಭದಲ್ಲಿ ಆಶೋತ್ತರಗಳನ್ನು ಗುರುತಿಸಲು ಅತ್ಯುತ್ತಮವವಾದ ದತ್ತಾಂಶವಾಗಿರಬಹುದು. ಸಂಪೂರ್ಣತೆಗೆ ದೂರವಾಗಿರಬಹುದು, ಆದರೂ ಬದಲೀ ಮಾದರಿ ಲಭ್ಯವಾಗುವವರೆಗೂ ಇದು ಉತ್ತಮವಾಗಿರಬಹುದು. ಮೇಲಾಗಿ ಪರಿಷ್ಕರಿಸಿದ ಹೇಳಿಕೆಗಳನ್ನು ಸುಲಭವಾಗಿ ಮಾಪನದಲ್ಲಿ ಅಳವಡಿಸಬಹುದಾಗಿದೆ. ಮೂಲತತ್ವ ಚೌಕಟ್ಟಿನ ಶಬ್ದಾರ್ಥಗಳ ಕುರಿತ ಮಿತಿಗಳು, ಸೂಕ್ಷ್ಮತೆಗಳನ್ನು ಮತ್ತು ಸಂಕೀರ್ಣತೆಯನ್ನು ಗುರುತಿಸಲು ಮಿತಿಯನ್ನು ಒಡ್ಡಬಹುದು, ಆದರೂ ನಾವು ಮೊದಲ ಹಂತದ ಮಾಪನದ ಪ್ರಕ್ರಿಯೆಗಳಿಗೆ ಈ ಮಾದರಿ ಸೂಕ್ತವಾಗಿದೆ ಎಂದು ಭಾವಿಸುತ್ತೇವೆ. ಈ ಚೌಕಟ್ಟನ್ನು ಅಗತ್ಯವಿದ್ದಲ್ಲಿ ಸಂಸ್ಕರಿಸಬಹುದು ಮತ್ತು ಭವಿಷ್ಯದಲ್ಲಿ ಪುರಾವರ್ತಿಸಬಹುದು.

ಇದಲ್ಲೆದಕ್ಕೂ ಮೀರಿ, ಶಬ್ದಾರ್ಥಕ್ಕೆ ಸಂಬಂಧಿಸಿದ್ದನ್ನು ಪರಿಗಣಿಸಬಹುದು, ಮೂಲತತ್ವದ ಚೌಕಟ್ಟನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯಸಾಧ್ಯತೆಯನ್ನು ಪರೀಕ್ಷಿಸಿದೆವು. ಫಲಿತಾಂಶಗಳನ್ನು ಚಿತ್ರ ೨–೧೦ನ್ನು ನೋಡಬಹುದು. ಕನ್ನಡದ ವಾಕ್ಯ ರಚನೆಗಳಿಗೆ ಹೊಂದಿಸಲು ಆಂಗ್ಲ ಆವೃತ್ತಿಯಲ್ಲಿನ ಲಂಬಸಾಲುಗಳನ್ನು ಬದಲಾಯಿಸಿದೆವು. ಒಟ್ಟಾರೆ, ಎರಡೂ ಭಾಷೆಯ ಚೌಕಟ್ಟುಗಳು ಸಮಾನವಾದ ಶಬ್ದಾರ್ಥವನ್ನು ಹೊಂದುತ್ತವೆ ಎಂದು ನಾವು ತಿಳಿದಿದ್ದೇವೆ. ಆದರೂ ಸಹ ನಾವು ಕನ್ನಡ ಆವೃತ್ತಿಯನ್ನು ಉಳಿದ ಅಧ್ಯಯನಗಳಿಗೆ ಬಳಸಿಲ್ಲ, ಅಗತ್ಯ ಕಂಡುಬಂದಲ್ಲಿ ಮುಂದಿನ ಅಧ್ಯಯನಗಳನ್ನು ಶಬ್ದಾರ್ಥಗಳ ಭಾವಗಳಿಗೆ ಕುಂದು ಬರದಂತೆ ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಬಹುದು.

# ಉನ್ನತ ಶಿಕ್ಷಣ ವ್ಯವಸ್ಥೆಯ ಮೂಲತತ್ವದ ಒಂದು ಚೌಕಟ್ಟು

| | ಉದ್ದೇಶ | | ಆಸ್ಥೆ | | ಕಾರ್ಯ ಕ್ಷೇತ್ರ | | ವಿಸ್ತಾರ | | ಆಕಾಂಕ್ಷೆ | | | |
|---|---|---|---|---|---|---|---|---|---|---|---|---|
| [ಜ್ಞಾನ ಸಮಾಜದ] | ವೈಜ್ಞಾನಿಕ | [ಅಭಿವೃದ್ಧಿಗಾಗಿ] | ವೈಜ್ಞಾನಿಕ | [+] | ಅನುಸಂಧಾನದಲ್ಲಿ | [+] | ಪ್ರಪಂಚದ | [+] | ಅತ್ಯಂತ | [+] | ಅತ್ಯುತ್ತಮ | [ಉನ್ನತ ಶಿಕ್ಷಣ ಸಂಸ್ಥೆ] |
| | ತಾಂತ್ರಿಕ | | ಔದ್ಯೋಗಿಕ | | ವಿದ್ಯಾಭ್ಯಾಸದಲ್ಲಿ | | ಪ್ರದೇಶದ | | ಒಂದು | | ಪ್ರಮುಖ | |
| | ಆರ್ಥಿಕ | | ವೃತ್ತಿಪರ | | ಸೇವೆಯಲ್ಲಿ | | ದೇಶದ | | | | ಮುಂದುವರೆದ | |
| | ಸಾಮಾಜಿಕ | | ಲಲಿತ ಕಲೆಗಳ | | | | ರಾಜ್ಯದ | | | | ಮೂಲಭೂತ | |
| | ಸಾಂಸ್ಕೃತಿಕ | | ಕಲಾ ನಿಕಾಯದ | | | | ನಗರದ | | | | | |

ಚಿತ್ರ ೨–೧೦: ಮೂಲತತ್ವ ಚೌಕಟ್ಟಿನ ಮುಖೇನ ಕನ್ನಡದಲ್ಲಿ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನ

ಕರ್ನಾಟಕ ರಾಜ್ಯವು ದೇಶದಲ್ಲಿಯೇ ಉನ್ನತ ಶಿಕ್ಷಣದ ಪ್ರಮುಖ ತಾಣವಾಗಿದೆ. ವ್ಯವಸ್ಥಿತವಾಗಿ ರಚಿತವಾದ ಉನ್ನತ ಶಿಕ್ಷಣ ವ್ಯವಸ್ಥೆಯ ಆಶೋತ್ತರಗಳು, ಪದ್ಧತಿಗಳು ಮತ್ತು ಅಗತ್ಯತೆಗಳ ಮನೋಭಾವಗಳ ಆಧಾರಿತವಾಗಿವೆ. ಇವು ಸ್ವತಃ ಭಾರತ ಮತ್ತು ಏಷಿಯಾದ ಜ್ಞಾನಕೇಂದ್ರಗಳಾಗಿ ಪರಿವರ್ತನೆಗೊಳ್ಳಬಹುದು.

## ಅಧ್ಯಾಯ ೩ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ಆಚರಣೆಗಳ ಮನೋಭಾವ

ನಾವು ಅಧ್ಯಯನ ಮಾಡಿದ ೬೫ ವಿಶ್ವವಿದ್ಯಾನಿಲಯಗಳು ಮತ್ತು ವಿಶ್ವವಿದ್ಯಾನಿಲಯ ರೀತಿಯ ಸಂಸ್ಥೆಗಳನ್ನು ಮೂಲವಾಗಿಟ್ಟುಕೊಂಡು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆ ಪಾಲಿಸುತ್ತಿರುವ ಆಚರಣೆಗಳ ಮನೋಭಾವಗಳ ಸಂಪೂರ್ಣ ಚಿತ್ರಣವನ್ನು ಈ ಅಧ್ಯಾಯದಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ. ಈ ಅಧ್ಯಾಯವು ಮೂರು ವಿಭಾಗಗಳನ್ನೊಳಗೊಂಡಿದೆ:

೧. ದತ್ತಾಂಶ ಸಂಚಯ
೨. ದತ್ತಾಂಶ ಸಂಕೇತಿಕರಣ
೩. ದತ್ತಾಂಶ ವಿಶ್ಲೇಷಣ ಮತ್ತು ಫಲಿತಾಂಶಗಳು
೪. ಚರ್ಚೆ ಮತ್ತು ಮುಕ್ತಾಯ

### ದತ್ತಾಂಶ ಸಂಚಯ

ಆಚರಣೆಗಳ ಮನೋಭಾವಗಳನ್ನು ಮಾಪನ ಮಾಡಲು ಸಂಸ್ಥೆಗಳು ಮತ್ತು ಬಾಹ್ಯ ಮೂಲಗಳಿಂದ ದತ್ತಾಂಶಗಳನ್ನು ಕಲೆಹಾಕಲಾಯಿತು. ಆಂತರಿಕ ಮೂಲಗಳ ದತ್ತಾಂಶಗಳನ್ನು ಸಂಸ್ಥೆಗಳ ವಾರ್ಷಿಕ ವರದಿಗಳು, ಐಕ್ಯೂಎಸಿ (ಆಂತರಿಕ ಗುಣಮಟ್ಟ ಖಾತರಿ ಕೋಶ) ವರದಿಗಳು, ಎಕ್ಯೂಎಆರ್ (ವಾರ್ಷಿಕ ಗುಣಮಟ್ಟ ಖಾತರಿ ವರದಿಗಳು), ನಿಯತಕಾಲಿಕೆಗಳು, ಕಿರುಹೊತ್ತಿಗೆಗಳು, ಪುನರ್ನಮನ ತರಬೇತಿ ಕಾರ್ಯಕ್ರಮಗಳ ವಿಷಯ ಸಾಮಗ್ರಿಗಳು, ಘಟಿಕೋತ್ಸವದ ಭಾಷಣಗಳು, ವಾರ್ಷಿಕ ಮುಂಗಡಪತ್ರ ಮತ್ತು ಸುದ್ದಿಪತ್ರಗಳು ಆಂತರಿಕ ಮೂಲದ ದತ್ತಾಂಶಗಳಾಗಿದ್ದವು. ಯುಜಿಸಿ (ವಿಶ್ವವಿದ್ಯಾಲಯಗಳ ಅನುದಾನ ಆಯೋಗ), ಎನ್‌ಎಎಸಿ (ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿ), ಶ್ರೇಣಿಗಳು ಮತ್ತು ಸಮೀಕ್ಷೆಗಳು, ಆಯ್ದ ಆನ್‌ಲೈನ್ ಜಾಲತಾಣಗಳು, ಐಸಿಎಸ್‌ಎಸ್‌ಆರ್ (ಭಾರತೀಯ ಸಮಾಜ ವಿಜ್ಞಾನಗಳ ಸಂಶೋಧನಾ ಪರಿಷತ್ತು), ಎಐಸಿಟಿಇ (ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ), ಎಂಸಿಐ (ಭಾರತದ ವೈದ್ಯಕೀಯ ಮಂಡಳಿ), ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ ಹಾಗೂ ಎಐಸಿಟಿಇ ವತಿಯಿಂದ ಸ್ಥಾಪಿತವಾದ ಎನ್‌ಬಿಎ (ರಾಷ್ಟ್ರೀಯ ಮಾನ್ಯತಾ ಮಂಡಳಿ)ಗಳಿಂದ ಸಂಗ್ರಹಿಸಲಾಗಿದೆ.

ಬಹುಪಾಲು ದತ್ತಾಂಶಗಳನ್ನು ಸಂಸ್ಥೆಗಳು ಮತ್ತು ಸಂಘಟನೆಗಳ ಅಂತರ್ಜಾಲಗಳಲ್ಲಿ ಲಭ್ಯವಿದ್ದ ಮಾಹಿತಿಗಳನ್ನು ಕೂಡಿಹಾಕಲಾಯಿತು. ಎನ್‌ಎಎಸಿಯವರು ಹೊಂದಿದ್ದ ೬೫ ಸಂಸ್ಥೆಗಳ ಮಾಹಿತಿಗಳನ್ನು ಮುದ್ರಿತ ಪ್ರತಿ ಮತ್ತು ನಕಲು ಪ್ರತಿಗಳನ್ನು ಒದಗಿಸಿದರು. ಇದರೊಂದಿಗೆ ಸೂಕ್ತವಾದ ವರದಿಗಳನ್ನು ಮತ್ತು ಇತರ ದತ್ತಾಂಶಗಳನ್ನು ಕರ್ನಾಟಕ ಜ್ಞಾನ ಆಯೋಗದಿಂದ ಪಡೆದುಕೊಳ್ಳಲಾಯಿತು. ಕೆಲವು ಸಂಸ್ಥೆಗಳಿಗೆ ದತ್ತಾಂಶಗಳ ಸಲ್ಲಿಕೆಗೆ ಮನವಿ ಮಾಡಲಾಯಿತು. ಕೊನೆಯದಾಗಿ, ೬೫ ಸಂಸ್ಥೆಗಳ ಕುಲಪತಿಗಳು/ಕುಲಸಚಿವರುಗಳಿಗೆ ಪತ್ರ ಮತ್ತು ಮಿಚಂಚೆಗಳ ಮುಖೇನ ವಿನಂತಿಸಲಾಯಿತು (ಅನುಬಂಧ ಸಿ). ಎಲ್ಲಾ ಮಾಹಿತಿಗಳನ್ನು ಕೇಂದ್ರಿಯ ವಿದ್ಯುಜ್ಜನಿತ ಭಂಡಾರದಲ್ಲಿ ಸರಿಹೊಂದಿಸಲಾಯಿತು. ಆಚರಣಾ ಮನೋಭಾವಗಳ ದತ್ತಾಂಶದ ಮೌಲ್ಯೀಕರಣವನ್ನು ಕೆಳಗಿನಂತೆ ಪ್ರಸ್ತಾಪಿಸಿದ್ದೇವೆ.

### ದತ್ತಾಂಶಗಳ ಮೂಲಗಳು

೬೫ ಸಂಸ್ಥೆಗಳ ಆಚರಣೆಗಳ ಮನೋಭಾವಗಳನ್ನು ವಿಶ್ಲೇಷಿಸಲು ಗಣನೀಯ ಪ್ರಮಾಣದ ದತ್ತಾಂಶಗಳನ್ನು ಕಲೆಹಾಕಲು ಬಹುಮೂಲಗಳು ನಮಗೆ ಸಹಾಯಹಸ್ತ ಚಾಚಿವೆ. ಕೆಲವು ಮೂಲಗಳ ದತ್ತಾಂಶಗಳು ದುಪ್ರತಿ ಇದ್ದು, ಕೆಲವು ಮಾಹಿತಿಗಳು ಅಭಿನಂದನಾಪೂರ್ವಕವಾಗಿವೆ. ದತ್ತಾಂಶಗಳು,

ಆಚರಣೆಗಳ ಮನೋಭಾವಗಳ ತ್ರಿಕೋನವಾಗಿ ಮೌಲ್ಯೀಕರಿಸಲು ನೆರವಾಗಿವೆ. ತದನಂತರದಲ್ಲಿ, ದತ್ತಾಂಶಗಳ ಚಲಾವಣೆಯ ಶ್ರೇಯಾಂಕ, ಪ್ರಮಾಣ ಮತ್ತು ಗುಣಮಟ್ಟವನ್ನು ಈ ಅಧ್ಯಾಯದಲ್ಲಿ ಸುವಿಸ್ತಾರವಾಗಿ ಚರ್ಚಿಸೋಣ. ಸುಸಜ್ಜಿತವಲ್ಲದ ತಾಣಗಳನ್ನು ಹೊಂದಿರುವ ಸಂಸ್ಥೆಗಳಿಗೆ ಹೋಲಿಸಿದರೆ, ಸುಸಂಘಟಿತವಾದ ಅಂರ್ತಜಾಲಗಳನ್ನು ಹೊಂದಿರುವ ಸಂಸ್ಥೆಗಳ ಕೆಲವು ಮೂಲಗಳನ್ನು ಪಡೆಯುವ ಅಗತ್ಯವಿದೆ.

## ದತ್ತಾಂಶದ ಅನುಶೋಧನೆ

ಸಂಸ್ಥೆಗಳ ದತ್ತಾಂಶಗಳ ಶೋಧನೆಯ ಕಾರ್ಯ ಕಷ್ಟಕರವಾದುದು. ಅಂರ್ತಜಾಲದಲ್ಲಿ ಮಾಹಿತಿಗಳು ಲಭ್ಯವಿದ್ದರೂ, ಸಂಸ್ಥೆಗಳ ತಾಣಗಳಲ್ಲಿ ದೊರೆಯುತ್ತಿರುವ ದತ್ತಾಂಶಗಳ ಶೋಧನಾಕಾರ್ಯಗಳು ನಿರ್ಬಂಧವಾಗಿ ನಿರ್ವಹಿಸಲು ದಾರಿಮಾಡಿಕೊಟ್ಟಿದೆ. ಕೆಲವು ಸಂದರ್ಭಗಳಲ್ಲಿ, ಆಯ್ಕೆಗಳು ಮತ್ತು ಜಾಲತಾಣಗಳನ್ನು ಶೋಧಿಸುವ ಮುಖೇನ ನೇರ ಪ್ರವೇಶ ಕಲ್ಪಿಸಿಕೊಟ್ಟರೆ, ಇನ್ನೂ ಕೆಲವು ಪ್ರಕರಣಗಳಲ್ಲಿ ಸಂಶೋಧನಾಕಾರರು ದತ್ತಾಂಶ ಪಡೆಯಲು ಅನೇಕ ಪದರಗಳು ಮತ್ತು ಸ್ಥಾನಗಳನ್ನು ಕ್ರಮಿಸಬೇಕಾಗುತ್ತದೆ. ಜಾಲತಾಣಗಳ ಸಂಚಾರ ಸಾಮಾನ್ಯವಾಗಿ ಕಷ್ಟದಾಯಕವಾಗಿತ್ತು.

ಮಿಚಂಚೆ/ಪತ್ರಗಳ ಮನವಿಗಳ ಮುಖಾಂತರ ಸ್ವೀಕೃತವಾದ ದತ್ತಾಂಶಗಳು ಗಣನೀಯವಾಗಿ ಬದಲಾಗುತ್ತಿದ್ದವು. ಅಂರ್ತಜಾಲಗಳಲ್ಲಿ ನಮಗೆ ತೋರುತ್ತಿರುವಂತೆ ಮಾಹಿತಿಗಳ ಲಭ್ಯತೆಗಳಿಗೆ ಕೆಲವರು ತಕ್ಷಣವೇ ಪ್ರತಿಕ್ರಿಯಿಸುತ್ತಿದ್ದರು. (ಕೆಲವು ನಿದರ್ಶನಗಳಲ್ಲಿ ನಮಗೆ ದತ್ತಾಂಶಗಳು ಲಭ್ಯವಿದ್ದವು.) ಈ ರೀತಿಯ ಸಂದರ್ಭಗಳು ಸಾಮಾನ್ಯವಾಗಿ ಸುಸಜ್ಜಿತವಾದ ಅಂರ್ತಜಾಲಗಳನ್ನು ಹೊಂದಿರುವ ಸಂಸ್ಥೆಗಳಲ್ಲಿ ಕಂಡುಬರುತ್ತದೆ. ಕೆಲವು ಸಂಸ್ಥೆಗಳು ವಿದ್ಯುಜ್ಜನಿತ ಅಥವಾ ಕಾರ್ಯಂಪ್ರತಿಗಳನ್ನು ಕೂಡಲೇ ತಲುಪಿಸಿದರೆ, ಮತ್ತೂ ಕೆಲವರು ಸಂಸ್ಥೆಗಳಲ್ಲಿ ಚಾಲ್ತಿಯಲ್ಲಿರುವ ಆಡಳಿತ ಕಾನೂನುಗಳಿಂದ ದತ್ತಾಂಶಗಳನ್ನು ಹಂಚಿಕೊಳ್ಳಲು ಇರುವ ತಮ್ಮ ಅಸಾಮರ್ಥ್ಯವನ್ನು ವ್ಯಕ್ತಪಡಿಸಿದರು.

ಆಚರಣೆಗಳ ಮನೋಭಾವಗಳ ನಿರ್ಧಾರಣೆಗಾಗಿ ವ್ಯವಸ್ಥಿತ ಜ್ಞಾನ ಮೂಲದ ಸಂಗ್ರಹ ಮತ್ತು ಸಂಭವನೀಯ ದತ್ತಾಂಶಗಳ ಒದಗಣೆಗಳು, ಎರಡೂ ಬಹುಮೂಲಗಳಿಂದ ದತ್ತಾಂಶಗಳನ್ನು ಸಂಗ್ರಹಿಸುವಾಗಿನ ಧನಾತ್ಮಕ ಮತ್ತು ಋಣಾತ್ಮಕ ಅನುಭವಗಳನ್ನು ಸೂಚಿಸುತ್ತದೆ. ೬೫ ಸಂಸ್ಥೆಗಳಿಂದ ಸಂಗ್ರಹಿಸಲಾದ ದತ್ತಾಂಶಗಳು ಭಿನ್ನವಾಗಿವೆಯಾದರೂ, ಸಮಂಜಸವಾದ ಮೌಲ್ಯಮಾಪನ ಪ್ರಕ್ರಿಯೆಗೆ ಸಾಕಾಗೂವಷ್ಟು ದತ್ತಾಂಶಗಳನ್ನು ಒಟ್ಟುಗೂಡಿಸುವುದು ಸಾಧ್ಯವಾಯಿತು. ವರದಿಯ ಪ್ರಕ್ರಿಯೆಗಳು ತದನಂತರದ ಸುಧಾರಿತ ಪುನರಾವೃತ್ತಿಗಳ ಅನುಶೋಧನೆ ಸುಲಭವಾಗಿರಬೇಕು ಮತ್ತು ಹೆಚ್ಚಿನ ಪ್ರಮಾಣೀಕೃತ ಮೂಲಗಳನ್ನು ಹೊಂದಿರಬೇಕು.

## ದತ್ತಾಂಶಗಳ ಆಯ್ಕೆ

ಮೂಲತತ್ವದ ಚೌಕಟ್ಟು, ದತ್ತಾಂಶಗಳ ಆಯ್ಕೆಯು ಜ್ಞಾನಮೂಲಗಳಲ್ಲಿ ಒಳಗೊಳ್ಳಬೇಕೆಂದು ನಿರ್ದೇಶಿಸಿದೆ. ಸಂಸ್ಥೆಯ ದತ್ತಾಂಶಗಳು, ಚೌಕಟ್ಟಿನ ಯಾವುದೇ ಒಂದು ಅಂಶದೊಂದಿಗೆ ಮಾಪಿಸಿದರೆ, ಇದು ಚೌಕಟ್ಟಿನಲ್ಲಿ ಅಂರ್ತಗತವಾಗುತ್ತದೆ ಹಾಗೂ ಇತರ ದತ್ತಾಂಶಗಳನ್ನು ಪ್ರತಿಬಂಧಿಸುತ್ತದೆ. ಒಂದು ನಿರ್ದಿಷ್ಟ ದತ್ತಾಂಶಗಳ ಕುರಿತು ದತ್ತಾಂಶ ಸಹಿತ ಅಥವಾ ರಹಿತ ಎಂದು ನಿರ್ಧರಿಸುವ ಸಂದರ್ಭದಲ್ಲಿ, ದತ್ತಾಂಶಗಳನ್ನು ಸೇರಿಸಿಕೊಳ್ಳುವ ಬದಲಿಗೆ ಹೊರಗಿಡುವ ಅನುಮಾನಗಳು ಹೆಚ್ಚಿದ್ದವು. ದೊಡ್ಡ ಪ್ರಮಾಣದ ದತ್ತಾಂಶಗಳನ್ನು ಕಡಿಮೆ ವೆಚ್ಚದಲ್ಲಿ ವಿದ್ಯುಜ್ಜನಿತವಾಗಿ ಶೇಖರಿಸುವುದು ಮತ್ತು ಅನುಕ್ರಮಣಿಕೆ ಹಾಗೂ ಲಗತ್ತಿಸುವ ವಿಧಾನಗಳನ್ನು ಬಳಸಿ ಶೋಧನೆಯನ್ನು ಸರಾಗಗೊಳಿಸುವುದು, ಈ ಕಾರ್ಯಗಳು ಆಯ್ಕಾ ತಂತ್ರಗಳ ವಿಧಾನಗಳಿಗೆ ಅನುಕೂಲಕರವಾಗಿತ್ತು. ಕಾಗದಧಾರಿತ ಜ್ಞಾನಮೂಲಗಳ ಮುಖೇನ ಸಂಪೂರ್ಣವಾಗಿ

ಈ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಕಷ್ಟಸಾಧ್ಯವಾಗುತ್ತಿತ್ತು. ದತ್ತಾಂಶಗಳ ಸಂಗ್ರಹಣೆ ಮತ್ತು ನವೀಕರಣಗಳ ಕುರಿತು ಮುಂದಿನ ಭಾಗದಲ್ಲಿ ಚರ್ಚಿಸೋಣ.

## ದತ್ತಾಂಶಗಳ ಸಂಗ್ರಹಣೆ ಮತ್ತು ನವೀಕರಣ

ಎಲ್ಲಾ ದತ್ತಾಂಶಗಳನ್ನು ಕೇಂದ್ರೀಯ ಜೋಟೇರೋ ಜ್ಞಾನನೆಲೆಯಲ್ಲಿ ಸಂಗ್ರಹಿಸಿಡಲಾಯಿತು. ದತ್ತಾಂಶಗಳನ್ನು ಅಂರ್ತಜಾಲಗಳ ಸಂಪರ್ಕ ಕೊಂಡಿಗಳು (ಯುಆರ್‌ಎಲ್), ಚಿತ್ರಗಳು (ಸ್ಕ್ಯಾನ್ ಮಾಡಿದ ಪಿಡಿಎಫ್‌ಗಳು ಮತ್ತು ಇತರೆ ಸ್ವರೂಪಗಳು) ಮತ್ತು ಟಿಪ್ಪಣಿಗಳ ರೂಪದಲ್ಲಿ ಸಂಶೋಧನಾ ತಂಡದ ಸದಸ್ಯರು ನಿರೂಪಿಸಿದರು. ಎಲ್ಲಾ ತಂಡದ ಸದಸ್ಯರು ಜ್ಞಾನನೆಲೆಯನ್ನು ಆಧುನೀಕರಿಸುವ, ಪರಿಷ್ಕರಿಸುವ ಮತ್ತು ಪ್ರಸ್ತುತತೆಯನ್ನು ಉಳಿಸಿಕೊಳ್ಳುವ ಎಲ್ಲಾ ವಿಧಧ ಹಕ್ಕುಗಳನ್ನು ಹೊಂದಿದ್ದರು. ಜ್ಞಾನದ ಮೂಲಪ್ರತಿಯನ್ನು ಕೇಂದ್ರೀಯ ಪ್ರತಿಯೊಂದಿಗೆ ಸಂಯೋಜಿಸುವಾಗ, ಸದಸ್ಯರಿಂದ ಬದಲಾವಣೆಯಾಗುತ್ತಿದ್ದ ಮಾಹಿತಿಗಳು ತಂಡದ ಇತರೆ ಸದಸ್ಯರ ಗಮನಕ್ಕೆ ತರುವ ಪ್ರಸರಣಾ ಕಾರ್ಯವನ್ನು ಜೋಟೇರೋ ಮೂಲಕ ಖಚಿತಪಡಿಸಿಕೊಳ್ಳಲಾಗುತ್ತಿತ್ತು.

ಸಂಕ್ಷೇಪವಾಗಿ, ೬೫ ಸಂಸ್ಥೆಗಳ ಆಚರಣಾ ಮನೋಭಾವಗಳ ಕುರಿತಾದ ದತ್ತಾಂಶಗಳನ್ನು ಸಂಗ್ರಹಿಸುವ ಕಾರ್ಯ ಸವಾಲಾಗಿ ಪರಿಣಮಿಸಿತ್ತು. ಗಣನೀಯವಾದ ದತ್ತಾಂಶಗಳ ಲಭ್ಯತೆ ಇದ್ದರೂ, ಪ್ರವೇಶಾಧಿಕಾರವಿರಲಿಲ್ಲ. ಇವು ಬಹು ಸ್ವರೂಪತತೆಯನ್ನು ಹೊಂದಿದ್ದು ಇತರ ಮೂಲಗಳಿಗೆ ಹಂಚಿಕೆಯಾಗಿವೆ ಮತ್ತು ಕಳಪೆಯಾಗಿ ಸಂಘಟಿತವಾಗಿದೆ. ಕೆಲವೊಮ್ಮೆ ಸಾಂಸ್ಥಿಕ ನೀತಿಗಳು ದತ್ತಾಂಶಗಳ ಲಭ್ಯತೆ ಮತ್ತು ಪ್ರವೇಶಾಧಿಕಾರವನ್ನು ಮಿತಿಗೊಳಿಸಿದ್ದವು. ಕೆಲವು ಪ್ರಯತ್ನಗಳ ಮುಖಾಂತರ ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯ ಅರ್ಥಪೂರ್ಣವಾದ ದತ್ತಾಂಶಗಳನ್ನು ವ್ಯವಸ್ಥಿತವಾಗಿ ತಾಳೆ ಮಾಡಲು ಸಾಧ್ಯವಿದೆ. ಸರಿಸುಮಾರು ೬೫,೦೦೦ ಪುಟಗಳುಳ್ಳ ದತ್ತಾಂಶವನ್ನು ಅಂದರೆ, ಪ್ರತಿ ಸಂಸ್ಥೆಗೆ ಸಂಬಂಧಿಸಿದ ೧೦೦೦ ಪುಟಗಳ ದತ್ತಾಂಶಗಳನ್ನು ಅಂದಾಜಿಸಲಾಗಿದೆ. ಹೆಚ್ಚಿನ ದತ್ತಾಂಶಗಳು ಪಠ್ಯ ರೂಪದಲ್ಲಿದ್ದು, ಸಾಂಖ್ಯಿಕ ಮತ್ತು ಸಾಂಖ್ಯಿಕವಲ್ಲದ ಕೋಷ್ಟಕಗಳನ್ನು ಒಳಗೊಂಡಿದ್ದವು. ರಚನಾತ್ಮಕವಾದ ದತ್ತಸಂಚಯನದಲ್ಲಿ ಇವುಗಳನ್ನು ಅನುಕ್ರಮಿಸುವಾಗ, ಲಗತ್ತಿಸುವಾಗ ಮತ್ತು ಶೋಧಿಸುವಾಗ, ಸಂಯೋಜಿಸುವುದು ಕಠಿಣ.

ದತ್ತಾಂಶಗಳ ಚಲಾವಣೆ, ಪ್ರಮಾಣ, ಗುಣಮಟ್ಟ ಮತ್ತು ಸಂಘಟನೆಗಳ ಮೌಲ್ಯಮಾಪನವನ್ನು ನಂತರದಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ. ಅಸಮಾನವಾದ ಇವುಗಳ ಗುಣಲಕ್ಷಣಗಳು ದತ್ತಾಂಶಗಳನ್ನು ಸಂಗ್ರಹಿಸಲು ಕಷ್ಟಕರವಾಗಿತ್ತು. ದತ್ತಾಂಶ ಸಂಗ್ರಹಣೆಯ ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಬಲಪಡಿಸಲು, ದತ್ತಾಂಶ ಸಂಗ್ರಹಣೆ ಮತ್ತು ಫಲಿತಾಂಶಗಳ ಪ್ರಸ್ತುತಿಗಳ ನಂತರದ ಆವೃತ್ತಿಗಳನ್ನು ಹಿಮ್ಮಾಹಿತಿಗಳ ಆಧಾರದ ಮೇರೆಗೆ ಬಲಪಡಿಸಬಹುದು ಎಂದು ನಂಬಿದ್ದೇವೆ.

## ದತ್ತಾಂಶಗಳ ಸಂಕೇತಿಕರಣ

ಆಶೋತ್ತರ ಮನೋಭಾವಗಳ ಸಂಕೇತಿಕರಣಕ್ಕೆ ಬಳಸಿದ ಸಂಕೇತಿಕರಣದ ಪ್ರಕ್ರಿಯೆಯನ್ನು ಆಚರಣೆಗಳ ಮನೋಭಾವಗಳ ಸಂಕೇತಿಕರಣವನ್ನು ಅನುಸರಿಸಲಾಯಿತು. ಮೂರು ಸಂಶ್ಲೇಷಿತ ಹೇಳಿಕೆಗಳ ರಚನೆ ಸಂಕೇತಿರಣದ ಪ್ರಮುಖ ಉದ್ದೇಶವಾಗಿದೆ. ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳಿಗಾಗಿ, ಪ್ರತಿ ಸಂಸ್ಥೆಗಳಿಗಾಗಿ ರಚನಾತ್ಮಕವಾದ ಮೂಲತತ್ವದ ಚೌಕಟ್ಟನ್ನು ಬಳಸಲಾಗಿದೆ. ಎರಡು ಉದಾಹರಣೆಗಳು ಈ ಕೆಳಕಂಡಂತಿವೆ:

ವಿಶ್ವವಿದ್ಯಾನಿಲಯ ಅ

- ವೈಜ್ಞಾನಿಕ, ಸಾಮಾಜಿಕ ಮತ್ತು ತಾಂತ್ರಿಕ ಅಭಿವೃದ್ಧಿಗಾಗಿ ಶಿಕ್ಷಣ, ವೃತ್ತಿ, ವಿಜ್ಞಾನಗಳು ಮತ್ತು ವೃತ್ತಿಪರತೆಯಲ್ಲಿ ತೊಡಗಿರುವ ದೇಶದ ಸುಧಾರಿತ ವಿಶ್ವವಿದ್ಯಾನಿಲಯ

- ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಸಂಶೋಧನೆ, ವೃತ್ತಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ದೇಶದ ಸಾಮಾನ್ಯ ವಿಶ್ವವಿದ್ಯಾನಿಲಯ
- ಸೇವಾ ದತ್ತಾಂಶಗಳ ಮಾಹಿತಿ ಇಲ್ಲ

ವಿಶ್ವವಿದ್ಯಾನಿಲಯ ಆ

- ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಶಿಕ್ಷಣ ಕ್ಷೇತ್ರಕ್ಕಾಗಿ ಮಾನವಿಕಗಳು/ಸಮಾಜ ವಿಜ್ಞಾನಗಳು, ವಿಜ್ಞಾನ ಮತ್ತು ವೃತ್ತಿಗಳನ್ನು ಉದ್ದೇಶವನ್ನಾಗಿರಿಸಿಕೊಂಡಿರುವ ಜಿಲ್ಲೆಯ ಸಾಮಾನ್ಯ ವಿಶ್ವವಿದ್ಯಾನಿಲಯ
- ವೈಜ್ಞಾನಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಸಲುವಾಗಿ ಸಂಶೋಧನೆಗಾಗಿ ಮಾನವಿಕಗಳು/ಸಮಾಜ ವಿಜ್ಞಾನಗಳಲ್ಲಿ ತೊಡಗಿಸಿಕೊಂಡಿರುವ ರಾಜ್ಯದ ಪ್ರಮುಖ ವಿಶ್ವವಿದ್ಯಾನಿಲಯ
- ಸಾಮಾಜಿಕ, ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಅಭಿವೃದ್ಧಿಯ ಸಲುವಾಗಿ ಮಾನವಿಕಗಳು/ಸಮಾಜ ವಿಜ್ಞಾನಗಳು ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸುಧಾರಿತ ವಿಶ್ವವಿದ್ಯಾನಿಲಯ

ಒಟ್ಟು ನಾಲ್ಕು ಸದಸ್ಯರನ್ನೊಳಗೊಂಡ ಸದಸ್ಯರ ಒಮ್ಮತದಿಂದ ಬಂದಂತಹ ಸಂಕೇತಿಕರಣವಾಗಿದೆ. ಪ್ರಾಥಮಿಕ ಸಂಕೇತಿಕರಣವು ಒಬ್ಬ ಸದಸ್ಯನಿಂದ ಪ್ರಾರಂಭವಾದರೆ, ಮತ್ತೊಬ್ಬ ಸದಸ್ಯನಿಂದ ಪರಿಶೀಲನೆಗೆ ಒಳಪಟ್ಟಿದೆ. ಕೊನೆಯ ಸಂಕೇತಿಕರಣವು ನಾಲ್ಕು ಸದಸ್ಯರು ಚರ್ಚಿಸಿ, ನಿರ್ಣಯಿಸಲಾಗಿದೆ.

ಗುಣಾತ್ಮಕ ಕಲ್ಪನೆಗಳ ಪರೀಕ್ಷೆಯು ಸಂಗ್ರಹಿತ ಸಾಕ್ಷ್ಯಗಳ ಆಧಾರಿತವಾಗಿದ್ದು, ಸಂಕೇತಿಕರಣದ ಪ್ರಕ್ರಿಯೆಯನ್ನು ಗುಣಲಕ್ಷಣಗಳ ಮೇರೆಗೆ ವಿವರಿಸಲಾಗಿದೆ. ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಕುರಿತ ಪ್ರತಿ ಸಂಸ್ಥೆಯ ಆಚರಣೆ ಮನೋಭಾವಗಳ ಸಂಕೇತಿಕರಣದ ಕುರಿತಂತೆ, ಪ್ರತಿಯೊಂದು ಕ್ರಿಯೆಯ ಕುರಿತಾದ ಯಾವ ಉತ್ತಮ ಸಂಶ್ಲೇಷಿತ ಹೇಳಿಕೆಗಳನ್ನು ಸಂಗ್ರಹಿತವಾದ ಪುರಾವೆಗಳ ಆಧಾರದ ಮೇರೆಗೆ ತಿರಸ್ಕರಿಸಬಹುದಾಗಿದೆ? ಈ ಹೇಳಿಕೆಗಳನ್ನು ರಚಿಸುವಾಗ, ನಾವು ಸಂಸ್ಥೆಯ ಕುರಿತಾದ ದತ್ತಾಂಶಗಳನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ, (ಅ) ಹೇಳಿಕೆಯನ್ನು ಸಮರ್ಥಿಸಿಕೊಳ್ಳುವ ಪುರಾವೆಗಳು (ಆ) ಪುರಾವೆಗಳನ್ನು ಸಮರ್ಥಿಸಿಕೊಳ್ಳುವ ಹೇಳಿಕೆಗಳನ್ನು ನಿರಂತರವಾಗಿ ಪುನರುಚ್ಚರಿಸಲಾಗಿದೆ. ಸಾಕ್ಷ್ಯಗಳಾಧಾರಿತವಾಗಿ, ನಾವು ಸಂಶ್ಲೇಷಿತ ಹೇಳಿಕೆಗಳಲ್ಲಿನ ಕೇಂದ್ರಿತ ಅಂಶ ಮತ್ತು ಫಲಿತಾಂಶಗಳನ್ನು ಶ್ರೇಣಿಗಳ ಮೇರೆಗೆ ಸಂಕೇತಿಕರಿಸಲಾಗಿದೆ.

ಪ್ರತಿ ಹೇಳಿಕೆಗಳನ್ನು ಸಂಕೇತಿಕರಿಸುವಾಗ, ದತ್ತಾಂಶಗಳ ಚಲಾವಣೆ, ಪ್ರಮಾಣ ಮತ್ತು ಗುಣಮಟ್ಟವನ್ನು ನಿರ್ಣಯಿಸಲಾಗಿದೆ. ಚಲಾವಣೆಯನ್ನು ಚಲಾವಣೆ ಎಂದು (ಒಂದು ವರ್ಷಕ್ಕಿಂತ ಕಡಿಮೆ), ಇತ್ತೀಚಿನ (೧–೩ ವರ್ಷಗಳಿಗಿಂತ ಕಡಿಮೆ) ಮತ್ತು ದಿನಾಂಕ (೩ ವರ್ಷಗಳಿಗಿಂತ ಹೆಚ್ಚಿನ) ಎಂದು ಸಂಕೇತಿಕರಿಸಿದೆ. ಪ್ರಮಾಣವನ್ನು ಸಮೃದ್ಧ (ನಿರ್ಧಾರ ತೆಗೆದುಕೊಳ್ಳಲು ಅನುವು ಮಾಡಿಕೊಡುವವರೆಗೂ), ಸೂಕ್ತ (ತೀರ್ಮ ತೆಗೆದುಕೊಳ್ಳಲು) ಮತ್ತು ವಿರಳ (ಇತ್ಯರ್ಥ ಮಾಡಲು ಅಸಾಧ್ಯವಾದ) ಎಂದು ದತ್ತಾಂಶಗಳನ್ನು ಸಂಕೇತಿಕರಿಸಲಾಗಿದೆ. ಹಾಗೆಯೇ, ದತ್ತಾಂಶಗಳ ಗುಣಮಟ್ಟವನ್ನು ಈ ರೀತಿಯಾಗಿ ಸಂಕೇತಿಸಿದೆ – ಅಧಿಕೃತ (ಅಧಿಕೃತ ವರದಿಗಳು ಮತ್ತು ಅಂರ್ತಜಾಲಗಳು ಇತ್ಯಾದಿ), ನಂಬಲರ್ಹ (ವಿಶ್ವಾಸನೀಯವಾದ ಹಾಗೂ ಅಧಿಕೃತವಲ್ಲದ ವರದಿಗಳು) ಮತ್ತು ಪ್ರೋತ್ಸಾಹಕ (ಉದಾಹರಣೆಗೆ, ಪ್ರಚಾರಕ ಸಾಮಗ್ರಿಗಳು, ಭಿತ್ತಿಪತ್ರಗಳು).

ಸಂಕ್ಷೇಪವಾಗಿ, ಸಂಶೋಧನೆ, ಶಿಕ್ಷಣ ಮತ್ತು ಸೇವಾನಿರತವಾದ ಒಟ್ಟು ೬೫ ಸಂಸ್ಥೆಗಳ ಆಚರಣೆಗಳ ಮನೋಭಾವಗಳನ್ನು ೧೮೦ ಸಂಶ್ಲೇಷಿತ ಹೇಳಿಕೆಗಳನ್ನಾಗಿ ಸಂಕೇತಿಸಿದೆ; ೧೫ ಹೇಳಿಕೆಗಳನ್ನು ದತ್ತಾಂಶಗಳ ಅಭಾವದ ಮೇರೆಗೆ ಕಪ್ಪು ಬಣ್ಣದಲ್ಲಿ ಭಿತ್ತಿಸಿದೆ. ಪ್ರತಿ ಹೇಳಿಕೆಗಳಿಗೆ, ಚಲಾವಣೆ, ಪ್ರಮಾಣ ಮತ್ತು ಗುಣಮಟ್ಟದ ದತ್ತಾಂಶಗಳೆಂದು ಸಂಕೇತಿಸಿದೆ. ಮುಂದಿನ ವಿಭಾಗದಲ್ಲಿ ದತ್ತಾಂಶಗಳ ವಿಶ್ಲೇಷಣೆ ಮತ್ತು ಫಲಿತಾಂಶಗಳನ್ನು ಚರ್ಚಿಸೋಣ.

## ದತ್ತಾಂಶ ವಿಶ್ಲೇಷಣೆ ಮತ್ತು ಫಲಿತಾಂಶಗಳು

ಮೂಲತತ್ವದ ಚೌಕಟ್ಟಿನ ವ್ಯಾಪ್ತಿಯೊಳಗೆ ಕರ್ನಾಟಕ ಉನ್ನತ ಶಿಕ್ಷಣ ವ್ಯವಸ್ಥೆಯ ಆಚರಣೆಗಳ ಮನೋಭಾವಗಳನ್ನು ಬಿಂಬಿಸುವುದು ದತ್ತಾಂಶ ವಿಶ್ಲೇಷಣೆಯ ಮುಖ್ಯ ಉದ್ದೇಶವಾಗಿದೆ. ಮುಂದಿನ ಹಂತದಲ್ಲಿ ನಮ್ಮ ವಿಶ್ಲೇಷಣೆಯ ಫಲಿತಾಂಶಗಳನ್ನು ಆವರ್ತನ ಕೋಷ್ಟಕಗಳು ಹಾಗೂ ಸಮೂಹ ವಿಶ್ಲೇಷಿತ ವೃಕ್ಷನಕ್ಷೆಗಳ ಮುಖೇನ ಚಿತ್ರಿಸಿಲಾಗುವುದು. ಮೊದಲನೆಯದಾಗಿ, ದತ್ತಾಂಶಗಳ ಕುರಿತಾದ ದತ್ತಾಂಶಗಳ ರಚನೆ, ಚಲಾವಣೆ, ಪ್ರಮಾಣ ಮತ್ತು ಗುಣಮಟ್ಟವನ್ನು ಪ್ರಸ್ತುತಪಡಿಸುತ್ತೇವೆ. ಹಾಗೆಯೇ ಈ ಗುಣಲಕ್ಷಣಗಳನ್ನು ನೇರವಾಗಿ ನಂತರದ ವಿಶ್ಲೇಷಣೆಗೆ ಅಪವರ್ತಿಸಿಲ್ಲ. ಉದಾಹರಣೆಗೆ, ಈ ಲಕ್ಷಣಗಳ ಮೂಲಕ ಸಂಶ್ಲೇಷಿತ ಹೇಳಿಕೆಗಳ ಅಧಿಕಾನುಕೂಲ, ನಂತರದ ವಿಶ್ಲೇಷಣೆಗಳಿಗೆ ಹಿನ್ನಲೆ ಒದಗಿಸುವ ಉದ್ದೇಶದಿಂದ ದತ್ತಾಂಶಗಳ ಕುರಿತಾದ ದತ್ತಾಂಶಗಳನ್ನು ನೀಡಲಾಗಿದೆ. ತಂಡವು ಒದಗಿಸಿರುವ ಇಲ್ಲಿಯವರೆಗಿನ ಉತ್ತಮ ದತ್ತಾಂಶ ಲಭ್ಯತೆಯನ್ನು ಬಿಂಬಿಸಲಾಗಿದೆ, ಈ ದತ್ತಾಂಶಗಳು ಉತ್ತಮವಾಗಿದ್ದು, ಮುಂದಿನ ಹಂತದಲ್ಲಿ ಸುಧಾರಿಸಬಹುದಾಗಿದೆ.

### ದತ್ತಾಂಶಗಳ ರಚನೆ

ತಾತ್ವಿಕವಾಗಿ, ಸಂಸ್ಥೆಯ ದತ್ತಾಂಶಗಳು ಪ್ರತ್ಯೇಕ ಬೋಧನಾ ವರ್ಗ, ಇವರುಗಳ ವಿಭಾಗಗಳು, ಕ್ಷೇತ್ರಗಳು ಮತ್ತು ಸಂಸ್ಥೆಗಳಿಗೆ ಲಭ್ಯವಿರಬೇಕು. ಸಂಭಾವ್ಯವಾಗಿ, ಇಲಾಖೆಗಳ ದತ್ತಾಂಶಗಳು ಸಂಗ್ರಹಿತ ಮತ್ತು ಪ್ರತ್ಯೇಕ ಹಂತದ ದತ್ತಾಂಶಗಳ ವ್ಯಾಖ್ಯಾನ, ವಿಭಾಗ ಹಂತದ ಕ್ಷೇತ್ರಗಳ ಕುರಿತಾದ ದತ್ತಾಂಶ ಮತ್ತು ಕ್ಷೇತ್ರಾ ಹಂತದ ಸಂಸ್ಥೆಯ ದತ್ತಾಂಶಗಳಿಂದ ಕೂಡಿದೆ. ಇಂತಹ ಪರಿಪೂರ್ಣ ಸನ್ನಿವೇಶದಲ್ಲಿ, ಹಂತಗಳ ನಡುವಿನ ಸ್ಥಿರತೆ, ಪ್ರತಿ ಹಂತದ ಸುತ್ತಲಿರುವ ಬಲವಾದ ಸಂಯೋಜನೆ ಮತ್ತು ಹಂತಗಳ ನಡುವಿನ ಸುಸಂಬದ್ಧವಾದ ಅರ್ಥವಿವರಣೆಗಳಿರುತ್ತವೆ.

ಈ ಸ್ವರೂಪ ಇಲ್ಲದೇ ಇದ್ದ ಪಕ್ಷದಲ್ಲಿ, ಸಂಯೋಜನೆ ಮತ್ತು ವ್ಯಾಖ್ಯಾನಗಳು ಸಂಶೋಧನಾಕಾರನ ನಿಲುವಿಗೆ ಬಿಟ್ಟದ್ದು. ಉದಾಹರಣೆಗೆ, ಒಂದು ಸಂಸ್ಥೆಯ ದತ್ತಾಂಶವು ಅತ್ಯಂತ ಸಮೃದ್ಧವಾಗಿದ್ದು, ಪ್ರತ್ಯೇಕವಾಗಿ ಮತ್ತು ವಿಭಾಗ ಹಂತಗಳಲ್ಲಿ ಅಗಾಧ ಪ್ರಮಾಣವನ್ನು ಹೊಂದಿದೆ ಆದರೆ, ಕ್ಷೇತ್ರಗಳಲ್ಲಿ ಮತ್ತು ಸಂಸ್ಥೆಗಳ ಹಂತದಲ್ಲಿ ತೀರಾ ಬಡವಾಗಿದೆ. ಆಚರಣೆಗಳ ಮನೋಭಾವಗಳ ಸಂಕೇತಿಕರಣವನ್ನು ಸಮುಚ್ಛಯ ಬಳಿಕೆ ಹಾಗೂ ಸಂಸ್ಥೆಗೆ ವ್ಯಾಖ್ಯಾನದ ಬದಲಿಗೆ ವಿಸ್ತೃತವಾದ ದತ್ತಾಂಶಗಳ ಆಧಾರದ ಮೇಲೆ ಸಂಸ್ಥೆಯ ಆಚರಣೆಗಳ ಮನೋಭಾವದ ಸಂಕೇತಿಕರಣ ಮತ್ತು ಒಟ್ಟುಗೂಡಿಸುವಿಕೆಯನ್ನು ಸಂಶೋಧಕರು ಮಾಡಬೇಕಾಯಿತು.

ಆಚರಣೆಗಳ ಮನೋಭಾವಗಳ ದತ್ತಾಂಶದ ರಚನೆಯನ್ನು ಚಿತ್ರ ೩–೧ರಲ್ಲಿ ವರ್ಣಿಸಲಾಗಿದೆ. ಸ್ವಲ್ಪಮಟ್ಟಿನ ಅರ್ಧಕ್ಕಿಂತ ಕಡಿಮೆ ಪ್ರಮಾಣದ ಸಂಸ್ಥೆಗಳಲ್ಲಿ, ಕಡಿಮೆ ಪ್ರಮಾಣದ ಸಾಂಸ್ಥಿಕ ಹಂತದ ದತ್ತಾಂಶಗಳು ಇರುವುದಿಲ್ಲ ಮತ್ತು ಉಳಿದವು ಸಾಧಾರಣದಿಂದ ಉನ್ನತ ಪ್ರಮಾಣವನ್ನು ಹೊಂದಿವೆ. ಕ್ಷೇತ್ರಗಳ ಹಂತದಲ್ಲಿ, ಸ್ವಲ್ಪಮಟ್ಟಿನ ಅರ್ಧಕ್ಕಿಂತ ಕಡಿಮೆ ಪ್ರಮಾಣದ ಸಂಸ್ಥೆಗಳಲ್ಲಿ ಅರ್ಧಕ್ಕಿಂತ ತುಸು ಮಟ್ಟವು ಸಾಧಾರಣದಿಂದ ಉನ್ನತ ಪ್ರಮಾಣವನ್ನು ಹೊಂದಿವೆ. ಮೂರರ ಎರಡಕ್ಕಿಂತ ಹೆಚ್ಚಿನ ಸಂಸ್ಥೆಗಳು ಮಧ್ಯಮ–ಉನ್ನತ ಪ್ರಮಾಣದ ವಿಭಾಗಾ ಹಂತದ ದತ್ತಾಂಶಗಳನ್ನು ಮತ್ತು ಕಾಲು

ಭಾಗದ ಕಡಿಮೆ ಪ್ರಮಾಣದ ದತ್ತಾಂಶಗಳಿಂದ ಕೂಡಿದೆ. ವೈಯಕ್ತಿಕ ಹಂತದ ದತ್ತಾಂಶಗಳ ಮಾದರಿಯು ಸಮಾನರೂಪತೆಯಿಂದ ರಚಿತವಾಗಿದೆ.

| | **ದತ್ತಾಂಶ ರಚನೆ** | | | |
|---|---|---|---|---|
| **ಪ್ರಮಾಣ** | **ವೈಯಕ್ತಿಕ** | **ವಿಭಾಗ** | **ಕ್ಷೇತ್ರ** | **ಸಾಂಸ್ಥಿಕ** |
| ಶೂನ್ಯ | 4 | 3 | 28 | 1 |
| ಕಡಿಮೆ | 22 | 17 | 8 | 29 |
| ಮಧ್ಯಮ | 34 | 36 | 26 | 15 |
| ಉನ್ನತ | 5 | 9 | 3 | 20 |

**ಚಿತ್ರ ೩–೧: ಆಚರಣೆಗಳ ಮನೋಭಾವದ ದತ್ತಾಂಶಗಳ ರಚನೆ**

೬೫ ಸಂಸ್ಥೆಗಳ ನಡುವಿನ ದತ್ತಾಂಶ ರಚನೆಯ ವಿವಿಧ ಹಂತಗಳ ಪ್ರಮಾಣಗಳು ಅಸಮಾನವಾಗಿದೆ. ಇದು ಸಂಸ್ಥೆಯು ಸಂಘಟಿಸಿದ ಮತ್ತು ದತ್ತಾಂಶಗಳ ವ್ಯಾಖ್ಯಾನೀಕರಣಗಳ ಪ್ರತಿಬಿಂಬವಾಗಿದೆ ಹಾಗೂ ತನ್ನ ಗುರುತಿನ ಪ್ರಕ್ಷೇಪಣೆಯಾಗಿದೆ. ಆಚರಣಾ ಮನೋಭಾವಗಳ ಕುರಿತಾದ ಸಂಶ್ಲೇಷಿತ ಹೇಳಿಕೆಗಳ ಸಿಂಧುತ್ವವು ರಚನೆಯ ಎಲ್ಲಾ ಹಂತಗಳಲ್ಲಿನ ಪುರಾವೆಗಳ ಆಧಾರಿತವಾಗಿವೆ. ಯಾವುದೇ ಹಂತದ ದುರ್ಬಲ ದತ್ತಾಂಶವು ಹೇಳಿಕೆಗಳ ಅಂಗೀಕಾರಗಳ ಅನುಗುಣವಾಗಿ ಪ್ರಭಾವ ಬೀರಿವೆ. ದತ್ತಾಂಶಗಳ ರಚನೆಯು ನಮ್ಮ ತೀರ್ಮಾನಗಳ ಮೇರೆಗೆ ಸಂಸ್ಥೆಯ ಆಚರಣೆಗಳ ಮನೋಭಾವಗಳ ಅಂಶವನ್ನು ಹಿಡಿದಿಡಲು ನಾವು ಪ್ರಯತ್ನಿಸಿದ್ದೇವೆ.

## ದತ್ತಾಂಶ ಚಲಾವಣೆ, ಪ್ರಮಾಣ ಮತ್ತು ಗುಣಮಟ್ಟ

೧೯೫ (೬೫*೩) ರ ಚಲಾವಣೆ, ಪ್ರಮಾಣ ಮತ್ತು ಗುಣಮಟ್ಟದ ಕುರಿತಾದ ಆಚರಣೆಗಳ ಸಂಭವನೀಯ ಸಂಶ್ಲೇಷಿತ ಹೇಳಿಕೆಗಳನ್ನು ಚಿತ್ರ ೩–೨ರಲ್ಲಿ ತೋರಿಸಲಾಗಿದೆ. ೧೫ ಹೇಳಿಕೆಗಳಿಗೆ ಯಾವುದೇ ದತ್ತಾಂಶಗಳು ಲಭ್ಯವಾಗಿಲ್ಲ. ಮೂರರ ಎರಡು ಭಾಗದ ಹೇಳಿಕೆಗಳ ದತ್ತಾಂಶಗಳು ಪ್ರಸ್ತುತವಾಗಿದ್ದು, ಆರರಷ್ಟು ಇತ್ತೀಚಿನ ಮತ್ತು ಹತ್ತರಷ್ಟು ಹಳೆಯ ದಿನಾಂಕಗಳನ್ನು ಹೊಂದಿದೆ. ದತ್ತಾಂಶಗಳ ಪ್ರಮಾಣವು, ತುಸು ಹೆಚ್ಚಿನ ಕಾಲುಭಾಗದ ಹೇಳಿಕೆಗಳು ಸಮೃದ್ಧವಾಗಿದ್ದು, ಸ್ವಲ್ಪ ಪ್ರಮಾಣದ ಮೂರರಷ್ಟು ಸೂಕ್ತವಾಗಿವೆ ಹಾಗೂ ಐದಕ್ಕಿಂತ ಹೆಚ್ಚಿನ ಹೇಳಿಕೆಗಳು ವಿರಳವಾಗಿವೆ. ಅನುಗುಣವಾಗಿ, ದತ್ತಾಂಶಗಳ ಪ್ರಮಾಣವು ಅರ್ಧಕ್ಕಿಂತ ಕಡಿಮೆಯ ಹೇಳಿಕೆಗಳ ಅಧಿಕೃತವಾಗಿವೆ, ಮೂರಕ್ಕಿಂತ ಕಡಿಮೆ ಪ್ರಮಾಣದವು ನಂಬಲರ್ಹವಾಗಿವೆ ಮತ್ತು ಐದರಷ್ಟು ಪ್ರೋತ್ಸಾಹಕವಾಗಿವೆ.

| **ಗುಣಲಕ್ಷಣಗಳು** | **ದತ್ತಾಂಶ** | | |
|---|---|---|---|
| | **ಚಲಾವಣೆ** | **ಪ್ರಮಾಣ** | **ಗುಣಮಟ್ಟ** |
| ಪ್ರಸ್ತುತ/ಸಮೃದ್ಧ/ಅಧಿಕೃತ | 135 | 57 | 83 |
| ಇತ್ತೀಚಿನ/ಸೂಕ್ತ/ನಂಬಲರ್ಹ | 29 | 76 | 60 |
| ಹಳೆ/ವಿರಳ/ಪ್ರೋತ್ಸಾಹಕ | 16 | 47 | 37 |
| ಖಾಲಿ ಇರುವ | 15 | 15 | 15 |

**ಚಿತ್ರ ೩–೨: ದತ್ತಾಂಶಗಳ ಚಲಾವಣೆ, ಪ್ರಮಾಣ ಮತ್ತು ಗುಣಮಟ್ಟ**

ಸೈದ್ಧಾಂತಿಕವಾಗಿ, ಎಲ್ಲಾ ದತ್ತಾಂಶಗಳು ಪ್ರಸ್ತುತ, ಸಮೃದ್ಧ ಮತ್ತು ಅಧಿಕೃತವಾಗಿರತಕ್ಕದ್ದು. ತಕ್ಷಣದ ಭವಿಷ್ಯದಲ್ಲಿ ಸಂಭವನೀಯವಾದುದು ಇಲ್ಲವಾಗಿರಬಹುದು. ಆಚರಣೆಗಳ ಮನೋಭಾವದ ಸಂಶ್ಲೇಷಿತ ಹೇಳಿಕೆಗಳ ದತ್ತಾಂಶ ಸಂಕೇತೀಕರಣಗಳಿಗೆ, ಈ ಗುಣಲಕ್ಷಣಗಳನ್ನು ನಮ್ಮ ನಿರ್ಣಯಗಳಿಗೆ ಅಂಶೀಕರಿಸಲು ಪ್ರಯತ್ನಿಸಿದೆವು.

### ಸಂಶೋಧನೆ, ಶಿಕ್ಷಣ ಮತ್ತು ಸೇವೆಯಲ್ಲಿನ ಆಚರಣೆಗಳ ಮನೋಭಾವಗಳು

ಸಂಶೋಧನೆ, ಶಿಕ್ಷಣ ಮತ್ತು ಸೇವೆಯಲ್ಲಿನ ಆಚರಣೆಗಳ ಮನೋಭಾವಗಳನ್ನು ಸಂಕ್ಷಿಪ್ತವಾಗಿ ಚಿತ್ರ ೩–೩ ರಲ್ಲಿ ವಿವರಿಸಲಾಗಿದೆ ಹಾಗೂ ವಿಸ್ತೃತವಾಗಿ ಕೆಳಕಂಡಂತೆ ಚರ್ಚಿಸಲಾಗಿದೆ. ಆಚರಣೆಗಳು ಮತ್ತು ಆಕಾಂಕ್ಷೆಗಳ ಮನೋಭಾವಗಳನ್ನು ಹೋಲಿಸ ನೋಡಲಾಗಿದೆ ಹಾಗೂ ತದ್ವಿರುದ್ಧವಾಗಿ ಅಧ್ಯಾಯ ೪ರಲ್ಲಿ ವಿಶ್ಲೇಷಿಸಲಾಗಿದೆ.

ಸಂಶೋಧನೆಯಲ್ಲಿನ ಆಚರಣೆಯ ಮನೋಭಾವಗಳು ಪ್ರಬಲವಾಗಿ ದೇಶ (೪೧) ಮತ್ತು ರಾಜ್ಯ (೧೫) ರನ್ನು ತನ್ನ ವಿಸ್ತಾರವನ್ನಾಗಿ ಹೊಂದಿದೆ. ಒಂದು ಸಂಸ್ಥೆಯು ವಿಶ್ವ ಹಾಗೂ ಐದು ಜಿಲ್ಲೆಗಳನ್ನು ತನ್ನ ವ್ಯಾಪ್ತಿಯಲ್ಲಡಗಿಸಿಕೊಂಡಿದೆ. ವಿಸ್ತರಣೆಯ ಹಂಚಿಕೆಯು, ಮೂರರಷ್ಟು ಸಂಸ್ಥೆಗಳು ಸುಧಾರಿತ (೨೨) ಮತ್ತು ಐದರಷ್ಟು ಪ್ರಮುಖ (೧೪) ಸಂಸ್ಥೆಗಳನ್ನು ಒಳಗೊಂಡಿದೆ. ಪ್ರಮುಖವಾಗಿ ವಿಜ್ಞಾನ (೪೩), ನಂತರದಲ್ಲಿ ಮಾನವಿಕಗಳು/ಸಮಾಜ ವಿಜ್ಞಾನಗಳು (೨೯) ಮತ್ತು ವೃತ್ತಿಗಳನ್ನು (೨೪) ತಮ್ಮ ಕೇಂದ್ರಿತ ವಲಯಗಳನ್ನಾಗಿಸಿಕೊಂಡಿದೆ. ಇವುಗಳ ಸಂಶೋಧನೆಗಳಲ್ಲಿನ ಫಲಿತಾಂಶಗಳು ವೈಜ್ಞಾನಿಕ (೪೩) ಮತ್ತು ಸಾಮಾಜಿಕ (೩೯) ಅಭಿವೃದ್ಧಿ ನಂತರದಲ್ಲಿ ತಾಂತ್ರಿಕ (೨೨), ಆರ್ಥಿಕ (೧೬) ಮತ್ತು ಸಾಂಸ್ಕೃತಿಕ (೧೫) ಅಭಿವೃದ್ಧಿಗಳನ್ನೊಳಗೊಂಡಿದೆ. ಪ್ರಮುಖ ಸಂಶೋಧನಾ ಸಂಸ್ಥೆಗಳನ್ನು ಹೊಂದಿಲ್ಲ ಹಾಗೂ ಕೆಲವೇ ಸಾಮಾನ್ಯ (೧೩) ಸಂಶೋಧನಾ ಸಂಸ್ಥೆಗಳನ್ನು ಒಳಗೊಂಡಿದೆ.

| ಕಾರ್ಯ | ಸಫಲತೆ | | | | | | | | ವ್ಯಾಪ್ತಿ | | | | ಕೇಂದ್ರಿತ ವಲಯ | | | | | ಫಲಿತಾಂಶ | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಆ ಸರ್ವಶ್ರೇಷ್ಠ | ಒಂದು ಸರ್ವಶ್ರೇಷ್ಠ | ಆ ಪ್ರಮುಖ | ಒಂದು ಪ್ರಮುಖ | ಆ ಸುಧಾರಿತ | ಒಂದು ಸುಧಾರಿತ | ಆ ಸಾಮಾನ್ಯ | ಒಂದು ಸಾಮಾನ್ಯ | ವಿಶ್ವ | ದೇಶ | ರಾಜ್ಯ | ಜಿಲ್ಲೆ(ಗಳು) | ವಿಜ್ಞಾನ | ವೃತ್ತಿ | ವೃತ್ತಿಪರ | ಲಲಿತಕಲೆಗಳು | ಮಾನವಿಕಗಳು/ಸ.ವಿ | ವೈಜ್ಞಾನಿಕ | ತಾಂತ್ರಿಕ | ಆರ್ಥಿಕ | ಸಾಮಾಜಿಕ | ಸಾಂಸ್ಕೃತಿಕ |
| ಸಂಶೋಧನೆ | 0 | 0 | 5 | 14 | 8 | 22 | 4 | 9 | 1 | 41 | 15 | 5 | 43 | 24 | 7 | 7 | 29 | 43 | 22 | 16 | 39 | 15 |
| ಶಿಕ್ಷಣ | 1 | 2 | 2 | 13 | 4 | 20 | 8 | 12 | 1 | 32 | 23 | 6 | 41 | 40 | 16 | 13 | 29 | 41 | 22 | 28 | 44 | 15 |
| ಸೇವೆ | 0 | 0 | 3 | 6 | 3 | 19 | 7 | 18 | 0 | 15 | 30 | 11 | 29 | 24 | 13 | 4 | 27 | 22 | 17 | 11 | 47 | 17 |

ಚಿತ್ರ ೩–೩: ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಆಚರಣೆಯ ಮನೋಭಾವಗಳು

ಶಿಕ್ಷಣದ ಆಚರಣೆಯ ಮನೋಭಾವಗಳ ವ್ಯಾಪ್ತಿಯು ಸಂಶೋಧನೆಯು ಸಮಾನ ರೂಪವನ್ನು ಹೊಂದಿದ್ದು, ದೇಶ (೩೨) ಕ್ಕೆ ಕಡಿಮೆ ಮಹತ್ವವನ್ನು ನೀಡಿದ್ದು, ರಾಜ್ಯ (೨೩) ಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಒದಗಿಸಿದೆ. ಒಂದು ಸಂಸ್ಥೆಯು ವಿಶ್ವವನ್ನು ಹಾಗೂ ಆರು ಜಿಲ್ಲೆಗಳನ್ನು ತನ್ನ ಪರಿಧಿಯನ್ನಾಗಿಸಿಕೊಂಡಿದೆ. ವಿಸ್ತಾರದ ಹಂಚಿಕೆಯಲ್ಲಿ, ಮೂರರಷ್ಟು ಸಂಸ್ಥೆಗಳು ಸುಧಾರಿತ (೨೦) ಮತ್ತು ಐದರಷ್ಟು ಪ್ರಮುಖ (೧೩) ಸಂಸ್ಥೆಗಳನ್ನು ಒಳಗೊಂಡಿದೆ. ಎರಡು ಪ್ರಮುಖ ಮತ್ತು ಮೂರು ಶ್ರೇಷ್ಠ ಸಂಸ್ಥೆಗಳನ್ನು ಹೊಂದಿದೆ. ಸ್ವಲ್ಪಮಟ್ಟಿನ ಮೂರರಿಗಿಂತ ಕಡಿಮೆ (೨೦) ಸಾಮಾನ್ಯ ಸಂಸ್ಥೆಗಳನ್ನು ಹೊಂದಿದೆ. ಹೆಚ್ಚಿನ ಸಾಮಾನ್ಯ ಮತ್ತು ಶ್ರೇಷ್ಠ ಸಂಸ್ಥೆಗಳು ಸಂಶೋಧನೆಯನ್ನು ತನ್ನ ಕ್ಷೇತ್ರವನ್ನಾಗಿ ಪರಿಗಣಿಸಿದೆ. ಶಿಕ್ಷಣದ

ಕುರಿತಂತೆ, ವಿಜ್ಞಾನ (೪೧), ವೃತ್ತಿ (೨೦) ನಂತರದಲ್ಲಿ ಮಾನವಿಕಗಳು/ಸಮಾಜ ವಿಜ್ಞಾನಗಳು (೨೯), ವೃತ್ತಿನಿರತ (೧೬) ಮತ್ತು ಲಲಿತ ಕಲೆಗಳಿಗೆ (೧೩) ಪ್ರಾಧಾನ್ಯತೆ ನೀಡಿವೆ. ಶಿಕ್ಷಣದಲ್ಲಿನ ಫಲಿತಾಂಶಗಳು ಸಾಮಾಜಿಕ (೪೪) ಮತ್ತು ವೈಜ್ಞಾನಿಕ (೪೧) ಅಭಿವೃದ್ಧಿ ನಂತರದಲ್ಲಿ ಆರ್ಥಿಕ (೨೮), ತಾಂತ್ರಿಕ (೨೨), ಮತ್ತು ಸಾಂಸ್ಕೃತಿಕ (೧೫) ಅಭಿವೃದ್ಧಿಗಳನ್ನೊಳಗೊಂಡಿದೆ, ಆದರೆ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ತುಸು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿವೆ.

ಸೇವಾ ಆಚರಣೆಯ ಮನೋಭಾವಗಳ ವಿಸ್ತರಣೆಯು ರಾಜ್ಯ (೩೦) ನಂತರದಲ್ಲಿ ಜಿಲ್ಲೆಗಳನ್ನು (೧೧) ನ್ನು ಒಳಗೊಂಡಿದೆ. ಪ್ರಮುಖವಾಗಿ ಸುಧಾರಿತ (೧೯) ಅಥವಾ ಸಾಮಾನ್ಯ (೧೮) ಸೇವಾದಾರರುಗಳನ್ನು ಪಡೆದಿವೆ. ಶ್ರೇಷ್ಠ ಸೇವಾದಾರರು ಇಲ್ಲದೇ ಇದ್ದರೂ, ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳಿಗೆ ಹೋಲಿಸಿದರೆ ಸಮಾನವಾದ ಸಾಮಾನ್ಯ ಸೇವಾದಾರರುಗಳನ್ನು ಹೊಂದಿದೆ. ಸೇವಾ ವಲಯದ ಕೇಂದ್ರೀಕರಣವು ವಿಜ್ಞಾನ (೧೯), ಮಾನವಿಕಗಳು/ಸಮಾಜ ವಿಜ್ಞಾನಗಳು (೨೬) ಮತ್ತು ವೃತ್ತಿ (೨೪) ನಂತರದಲ್ಲಿ ವೃತ್ತಿನಿರತ (೧೩) ಮತ್ತು ಲಲಿತಕಲೆಗಳನ್ನು (೪) ತನ್ನ ಕ್ಷೇತ್ರವನ್ನಾಗಿ ಆಯ್ಕೆಮಾಡಿಕೊಂಡಿವೆ. ಸೇವೆಯಲ್ಲಿನ ಫಲಿತಾಂಶಗಳು ಸಾಮಾಜಿಕ (೪೬) ಅಭಿವೃದ್ಧಿ ಮತ್ತು ವೈಜ್ಞಾನಿಕ (೨೨), ತಾಂತ್ರಿಕ (೨೬), ಸಾಂಸ್ಕೃತಿಕ (೧೬) ಮತ್ತು ಆರ್ಥಿಕ (೧೧) ಅಭಿವೃದ್ಧಿಯ ಕುರಿತಾಗಿವೆ.

ಹೀಗೆ, ಕರ್ನಾಟಕದ ಉನ್ನತ ಶಿಕ್ಷಣದ ಸಂಸ್ಥೆಗಳ ನಡುವಿನ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳಲ್ಲಿನ ಆಚರಣೆಯ ಮನೋಭಾವಗಳು ವಿಭಿನ್ನ ಮತ್ತು ಸಂಕೀರ್ಣ. ಸಂಸ್ಥೆಗಳು, ಅವುಗಳ ಮೂರು ಕ್ರಿಯೆಗಳಿಗೆ ನೀಡಿರುವ ಮಹತ್ವ ಹಾಗೆಯೇ ಸಫಲತೆ, ವ್ಯಾಪ್ತಿ, ಕೇಂದ್ರಿತ ಮತ್ತು ಫಲಿತಾಂಶಗಳ ವ್ಯತ್ಯಾಸವಾಗಿದೆ. ಸಂಸ್ಥೆಗಳಲ್ಲಿನ ವ್ಯತ್ಯಾಸಗಳನ್ನು ಆಳವಾಗಿ ಮುಂದಿನ ವಿಭಾಗದಲ್ಲಿ, ಸಮೂಹ ವಿಶ್ಲೇಷಣೆಯ ಮುಖೇನ ನಾವು ಪರೀಕ್ಷಿಸೋಣ.

## ಸಂಸ್ಥೆಗಳ ಮತ್ತು ಗುಣಲಕ್ಷಣಗಳ ಸಮೂಹ ವಿಶ್ಲೇಷಣೆ

ಆಚರಣೆಗಳ ಮನೋಭಾವದ ದತ್ತಾಂಶಗಳನ್ನು ಸಮೂಹೀಕರಣದ ಮುಖೇನ ಎರಡು ವಿಧದಲ್ಲಿ, ಆಕಾಂಕ್ಷೆ ಮನೋಭಾವಗಳ ಮಾದರಿಯಲ್ಲಿ (ಅ) ಸಂಸ್ಥೆಗಳ ಮೂಲಕ (ಆ) ಗುಣಲಕ್ಷಣಗಳ ಮೂಲಕ ವಿಶ್ಲೇಷಿಸಿದೆವು. ನಂತರದಲ್ಲಿ, ಆಚರಣೆಗಳ ಮನೋಭಾವಗಳನ್ನು ಸಂಶೋಧನೆ, ಶಿಕ್ಷಣ ಮತ್ತು ಸೇವೆ ಎಂದು ಸಂಕೇತಿಕರಿಸಿ, ಈ ಮೂರು ಕಂತುಗಳನ್ನು ಪ್ರತ್ಯೇಕವಾಗಿ ಸಮೂಹ ವಿಶ್ಲೇಷಣೆಗೆ ಒಳಪಡಿಸಲಾಯಿತು. ಕೆಲವು ಪ್ರಯೋಗಗಳ ನಂತರ, ವ್ಯಾಖ್ಯಾನೀಕರಣವನ್ನು ಸುಗುಮಗೊಳಿಸುವ ಸಲುವಾಗಿ ನಾಲ್ಕು ಸಮೂಹಗಳ ಪರಿಹಾರವನ್ನು ಸಂಸ್ಥೆಗಳ ಸಮೂಹೀಕರಣದ ಮೇಲೆ ಹೊರಿಸಲಾಯಿತು, ಗುಣಲಕ್ಷಣದ ಸಮೂಹೀಕರಣಕ್ಕೆ ಯಾವುದೇ ಮೊದಲನೆಯ ಪ್ರಾಶಸ್ತ್ಯವನ್ನು ಹೇರಲಾಗಿರಲಿಲ್ಲ. ಶ್ರೇಣಿಕೃತ ಸಮೂಹೀಕರಣ, ವಾರ್ಡ್ಸ್ ವಿಧಾನ ಮತ್ತು ಯೂಕ್ಲಿಡಾನನ ವರ್ಗ ಅಂತರರದ ಮಾಪನಗಳನ್ನು ಬಳಸಿ, ಸಮಾಜವಿಜ್ಞಾನಗಳ ಅಂಕಿಅಂಶದ ಕಟ್ಟು (ಎಸ್‌ಪಿಎಸ್‌ಎಸ್) ನ್ನು ನಿರ್ವಹಿಸುವ ಮುಖಾಂತರ ವಿಶ್ಲೇಷಿಸಲಾಯಿತು. ವೃಕ್ಷ ಮಾಪನವನ್ನು ಉಪಯೋಗಿಸಿ ಸಮೂಹ ವಿಶ್ಲೇಷಣೆಯ ಫಲಿತಾಂಶಗಳನ್ನು ಮಂಡಿಸಲಾಗಿದೆ (ಚಿತ್ರ ೩-೪ ರಿಂದ ೩-೯). ನಾಲ್ಕು ಸಂಸ್ಥೆಗಳ ಸಮೂಹಗಳನ್ನು ಗುರುತಿಸಿ ಮತ್ತು ಸದಸ್ಯರ ಸಂಖ್ಯೆಯೊಂದಿಗೆ ಗುರುತಿನ ಪಟ್ಟಿ ಹಚ್ಚಲಾಯಿತು. ಅನುಗುಣವಾಗಿ, ಪ್ರತಿ ಸಂಸ್ಥೆಯ ಸಮೂಹಗಳಿಗೆ ಗುಣಲಕ್ಷಣಗಳ ಆವರ್ತನಗಳನ್ನು ಸಂಕ್ಷೇಪಿಸಿ ಕೋಷ್ಠಕದಲ್ಲಿ ಈ ಕೆಳಗಿನಂತೆ ನೀಡಲಾಗಿದೆ. ಸಂಸ್ಥೆಗಳ ಮೂಲಮಾದರಿಗಳು, ಸಮೂಹಗಳ ಗುಣಲಕ್ಷಣಗಳ ಮೇಲೆ ಆಧಾರಿತವಾಗಿದೆ ಹಾಗೂ ಇವುಗಳನ್ನು ಅನುರೂಪವಾಗಿ ವೃಕ್ಷಮಾಪನದಲ್ಲಿ ಗುರುತಿಸಲಾಗಿದೆ.

ನಾಲ್ಕು ಸಂಸ್ಥೆಗಳ ಸಮೂಹಗಳು ಆಚರಣಾ ಮನೋಭಾವದ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಅನುಕ್ರಮವಾಗಿ ಆಧಾರಿತವಾಗಿರುವುದನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಪ್ರತಿ ಸಮೂಹದಿಂದ ನಿಯೋಜಿತವಾಗಿರುವ ಸಂಸ್ಥೆಗಳನ್ನು ಅನುರೂಪವಾದ ಚಿತ್ರಗಳನ್ನು ತೋರಿಸಲಾಗಿದೆ ಹಾಗೂ ಈ ಸಮೂಹಗಳ ಗುಣಲಕ್ಷಣಗಳಲ್ಲಿನ ವ್ಯತ್ಯಾಸಗಳನ್ನು, ಹೆಚ್ಚಿನ ಆವರ್ತನ ಕೋಶಗಳ ಮುಖಾಂತರ ಕೆಂಪು ಬಣ್ಣದಲ್ಲಿ ನೀಡಲಾಗಿದೆ.

- ಸಂಶೋಧನಾಧಾರಿತ ಸಮೂಹಗಳು (ಚಿತ್ರ ೩–೪)
    - ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಗಾಗಿ ವಿಜ್ಞಾನಗಳು ಹಾಗೂ ವೃತ್ತಿಗಳ ಸಂಶೋಧನೆಯಲ್ಲಿ ತೊಡಗಿರುವ ದೇಶದ ಪ್ರಮುಖ, ಸುಧಾರಿತ ಮತ್ತು ಸಾಮಾನ್ಯ ಸಂಸ್ಥೆ
    - ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ವೃತ್ತಿಗಳು ಮತ್ತು ಮಾನವಿಕ/ಸಮಾಜ ವಿಜ್ಞಾನಗಳ ಸಂಶೋಧನೆಯಲ್ಲಿ ತೊಡಗಿರುವ ದೇಶದ ಪ್ರಮುಖ, ಸುಧಾರಿತ ಮತ್ತು ಸಾಮಾನ್ಯ ಸಂಸ್ಥೆ
    - ವೈಜ್ಞಾನಿಕ, ತಾಂತ್ರಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವಿಜ್ಞಾನಗಳ ಸಂಶೋಧನೆಯಲ್ಲಿ ತೊಡಗಿರುವ ದೇಶದ ಸುಧಾರಿತ ಸಂಸ್ಥೆ
    - ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವಿಜ್ಞಾನಗಳು ಮತ್ತು ಮಾನವಿಕ/ಸಮಾಜ ವಿಜ್ಞಾನಗಳ ಸಂಶೋಧನೆಯಲ್ಲಿ ತೊಡಗಿರುವ ರಾಜ್ಯದ ಸಾಮಾನ್ಯ ಸಂಸ್ಥೆ

ಸಂಶೋಧನೆಯ ಮೂಲಕ ಜ್ಞಾನಸಮಾಜದ ಅಭಿವೃದ್ಧಿಗಾಗಿ ಸಮೂಹಗಳು ವಿಭಿನ್ನವಾಗಿ ಕೊಡುಗೆಯನ್ನು ನೀಡುತ್ತವೆ. ಮೊದಲ ಸಮೂಹವು ವಿಜ್ಞಾನ ಮತ್ತು ವೃತ್ತಿಗಳ ಮೂಲಕ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಗೆ ಪ್ರಾಧಾನ್ಯತೆ ನೀಡಿದೆ. ಮತ್ತೊಂದೆಡೆ, ಮೂರನೇ ಸಮೂಹವು ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಯೊಂದಿಗೆ ಸಾಮಾಜಿಕ ಅಭಿವೃದ್ಧಿಗೆ ಒಲವು ತೋರಿಸಿದೆ ಆದರೆ, ಅದು ವಿಜ್ಞಾನ ಕ್ಷೇತ್ರಕ್ಕೆ ಮಾತ್ರ ಮೀಸಲಾಗಿದೆ. ಎರಡನೆ ಸಮೂಹವು ವೃತ್ತಿ ಮತ್ತು ಮಾನವಿಕ/ಸಮಾಜವಿಜ್ಞಾನಗಳ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಪೂರಕವಾಗಿದೆ. ಮೊದಲ ಮೂರು ಸಮೂಹಗಳ ವ್ಯಾಪ್ತಿಯು ವಿಶ್ವವಾಗಿದೆ. ಇದಕ್ಕೆ ತದ್ವಿರುದ್ದವಾಗಿ, ನಾಲ್ಕನೆ ಸಮೂಹವು ರಾಜ್ಯವನ್ನು ಒಳಗೊಂಡರೆ; ವಿಜ್ಞಾನಗಳು ಮತ್ತು ಮಾನವಿಕಗಳು/ಸಮಾಜವಿಜ್ಞಾನಗಳ ಮುಖೇನ ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಬಯಸುತ್ತಿದೆ.

- ಶಿಕ್ಷಣಾಧಾರಿತ ಸಮೂಹಗಳು (ಚಿತ್ರ ೩–೬)
    - ವೈಜ್ಞಾನಿಕ, ತಾಂತ್ರಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲು ವಿಜ್ಞಾನಗಳು, ವೃತ್ತಿಗಳು ಮತ್ತು ವೃತ್ತಿಪರತೆಯ ಶಿಕ್ಷಣದಲ್ಲಿ ತೊಡಗಿರುವ ದೇಶ/ರಾಜ್ಯದ ಪ್ರಮುಖ ಸಂಸ್ಥೆ
    - ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ವೃತ್ತಿಗಳು ಮತ್ತು ಮಾನವಿಕ/ಸಮಾಜ ವಿಜ್ಞಾನಗಳ ಶಿಕ್ಷಣದಲ್ಲಿ ತೊಡಗಿರುವ ದೇಶದ ಸುಧಾರಿತ ಸಂಸ್ಥೆ
    - ಸಾಮಾಜಿಕ, ವೈಜ್ಞಾನಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ವಿಜ್ಞಾನಗಳು, ವೃತ್ತಿಗಳು ಮತ್ತು ಮಾನವಿಕ/ಸಮಾಜ ವಿಜ್ಞಾನಗಳ ಶಿಕ್ಷಣದಲ್ಲಿ ತೊಡಗಿರುವ ರಾಜ್ಯದ ಒಂದು ಸಂಸ್ಥೆ
    - ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವಿಜ್ಞಾನಗಳ ಶಿಕ್ಷಣದಲ್ಲಿ ತೊಡಗಿರುವ ದೇಶದ ಒಂದು ಸಂಸ್ಥೆ

ಶಿಕ್ಷಣದ ಮೂಲಕ ಜ್ಞಾನಸಮಾಜದ ಅಭಿವೃದ್ಧಿಗಾಗಿ ಸಮೂಹಗಳು ವಿಭಿನ್ನವಾಗಿ ಕೊಡುಗೆಯನ್ನು ನೀಡುತ್ತವೆ. ಮೊದಲ ಸಮೂಹವು ವಿಜ್ಞಾನ, ವೃತ್ತಿ ಮತ್ತು ವೃತ್ತಿಪರತೆಗಳನ್ನು ಕೇಂದ್ರಿತವಾಗಿಟ್ಟುಕೊಂಡು ಸಾಂಸ್ಕೃತಿಕ ಅಭಿವೃದ್ಧಿಯನ್ನು ಹೊರತುಪಡಿಸಿ ಎಲ್ಲಾ ವಿಧದ ಅಭಿವೃದ್ಧಿಗೆ ಒತ್ತು ನೀಡಿದೆ. ಇದರ ಸದಸ್ಯರು ದೇಶ/ರಾಜ್ಯವನ್ನು ತಮ್ಮ ವ್ಯಾಪ್ತಿಯನ್ನಾಗಿಸಿಕೊಂಡಿವೆ. ಇದಕ್ಕೆ ವ್ಯತಿರಿಕ್ತವಾಗಿ, ನಾಲ್ಕನೆ ಸಮೂಹವು ವಿಜ್ಞಾನವನ್ನು ತಮ್ಮ ಕೇಂದ್ರಿತ ವಲಯವನ್ನಾಗಿಸಿಕೊಂಡು, ದೇಶದ ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ಒದಗಿಸಿದೆ. ಎರಡನೆಯ ಸಮೂಹವು ದೇಶದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ವೃತ್ತಿ ಮತ್ತು ಮಾನವಿಕಗಳು/ಸಮಾಜವಿಜ್ಞಾನಗಳಿಗೆ ಒತ್ತು ನೀಡುವ ಮುಖಾಂತರ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಮೂರನೆ ಸಮೂಹವು ರಾಜ್ಯ ಮತ್ತು ಜಿಲ್ಲೆಗಳ ಪರಿಧಿಯಲ್ಲಿದೆ ಹಾಗೂ ಸಾಮಾಜಿಕ, ವೈಜ್ಞಾನಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ವಿಜ್ಞಾನ, ವೃತ್ತಿ ಮತ್ತು ಮಾನವಿಕಗಳು/ಸಮಾಜವಿಜ್ಞಾನಗಳಿಗೆ ಮಹತ್ವ ನೀಡಿವೆ.

- ಸೇವಾಧಾರಿತ ಸಮೂಹಗಳು (ಚಿತ್ರ (೩–೮)
  - ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಸೇವಾ ವಲಯದ ವಿಜ್ಞಾನ ಮತ್ತು ವೃತ್ತಿಯಲ್ಲಿ ತೊಡಗಿರುವ ದೇಶದ ಆ/ಒಂದು/ಸಾಮಾನ್ಯ/ಪ್ರಮುಖ/ಸುಧಾರಿತ ಸಂಸ್ಥೆ
  - ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಸಲುವಾಗಿ ಮಾನವಿಕಗಳಿಗೆ ಪ್ರಾಮುಖ್ಯತೆ ನೀಡಿರುವ ಒಂದು ಸಾಮಾನ್ಯ ಸಂಸ್ಥೆ
  - ಸೇವೆಗಳನ್ನು ಒದಗಿಸದೇ ಇರುವ ಸಂಸ್ಥೆ
  - ಸಾಮಾಜಿಕ ಮತ್ತು ತಾಂತ್ರಿಕ ಅಭಿವೃದ್ಧಿಗಾಗಿ ವೃತ್ತಿ ಮತ್ತು ವೃತ್ತಿಪರತೆಯ ಕ್ಷೇತ್ರದಲ್ಲಿರುವ ರಾಜ್ಯದ ಸುಧಾರಿತ ಸಂಸ್ಥೆ

ಮೂರನೆ ಸಮೂಹವನ್ನು ಹೊರತುಪಡಿಸಿ, ಇತರ ಸಮೂಹಗಳು ಸೇವೆಗಳನ್ನು ಒದಗಿಸುವ ಮೂಲಕ ಜ್ಞಾನಸಮಾಜದ ಅಭಿವೃದ್ಧಿಗಾಗಿ ಸಮೂಹಗಳು ವಿಭಿನ್ನವಾಗಿ ಕೊಡುಗೆಯನ್ನು ನೀಡುತ್ತವೆ. ಮೊದಲ ಸಮೂಹವು ಸಾಂಸ್ಕೃತಿಕ ಅಭಿವೃದ್ಧಿಯನ್ನು ಬಿಟ್ಟು ಎಲ್ಲಾ ವಿಧದ ಅಭಿವೃದ್ಧಿ ಪ್ರಾಶಸ್ತ್ಯವನ್ನು ನೀಡಿವೆ. ಆದರೂ, ಇವುಗಳ ಪ್ರಥಮ ಆದ್ಯತೆಯು ವಿಜ್ಞಾನ ಮತ್ತು ವೃತ್ತಿಗಳ ಮೂಲಕ ದೇಶದ ಮತ್ತು ರಾಜ್ಯದ ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಯಾಗಿದೆ. ಎರಡನೆ ಸಮೂಹವು ಮಾನವಿಕಗಳು/ಸಮಾಜವಿಜ್ಞಾನಗಳ ಮುಖೇನ ಪ್ರಾಥಮಿಕವಾಗಿ ರಾಜ್ಯದ ಮತ್ತು ಜಿಲ್ಲೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಯನ್ನು ಸಾಧಿಸುವ ಕುರಿತು ಮಹತ್ವ ನೀಡಿವೆ.

ಸಮೂಹದ ಗುಣಲಕ್ಷಣಗಳು ಮತ್ತು ಸದಸ್ಯತ್ವವು, ವಿಭಿನ್ನವಾದ ಮತ್ತು ಸಂಕೀರ್ಣವಾದ ಆಚರಣೆಗಳ ಮನೋಭಾವದ ಮೇಲೆ ಆಧಾರಿತವಾಗಿದೆ. ಶಬ್ದಸಂಗ್ರಹದಲ್ಲಿ (ಅನುಬಂಧ ಬಿ) ವ್ಯಾಖ್ಯಾನಿಸಿರುವ ರೀತಿಯಲ್ಲಿ, ಸಮೂಹಗಳು ಪರಿಣತಿ, ವ್ಯಾಪಕ, ಸಂಶೋಧನೆ, ಖಾಸಗಿ, ರಾಜ್ಯ, ಸ್ವಾಯತ್ತ ಮತ್ತು ರಾಷ್ಟ್ರೀಯ/ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಮಿಶ್ರಣದಿಂದ ಕೂಡಿದೆ. ಜ್ಞಾನ ಪರಿಸರದ ಸಂಕೀರ್ಣತೆಯನ್ನು ಬಹಿರಂಗಪಡಿಸುವುದರೊಂದಿಗೆ, ಭಾಗಶಃವಾಗಿ ಈ ಸಂಸ್ಥೆಗಳು ಅಗತ್ಯತೆಗಳಿಗನುಸಾರವಾಗಿ ರೂಪಾಂತರಗೊಳ್ಳುತ್ತದೆ.

ಗುಣಲಕ್ಷಣಗಳ ಸಮೂಹೀಕರಣಗಳು ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳಲ್ಲಿನ ಆಚರಣೆಯ ಮನೋಭಾವಗಳ ಆಧಾರಿತವಾಗಿವೆ ಮತ್ತು ಭಿನ್ನ ದೃಷ್ಟಿಕೋನಗಳನ್ನು ಒದಗಿಸುತ್ತದೆ. ಸಂಸ್ಥೆಗಳ ನಡುವಿನ ಗುಣಲಕ್ಷಣಗಳ ಪ್ರಬಲ ಸಂಯೋಜನೆಗಳನ್ನು ತೋರ್ಪಡಿಸುತ್ತದೆ. ಈ ಸಂಯೋಜನೆಗಳನ್ನು, ಕರ್ನಾಟಕದ ಉನ್ನತ ಶಿಕ್ಷಣ ಸಂಸ್ಥೆಗಳ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಮೂಲಮಾದರಿಗಳನ್ನಾಗಿ (ಪ್ರಬಲ ಮಾದರಿಗಳು) ಕಾಣಬಹುದಾಗಿದೆ. ಮೂರು ಸಮೂಹ ವಿಶ್ಲೇಷಣೆಗಳ ಸಂಪೂರ್ಣ ವೃಕ್ಷನಕ್ಷೆಗಳನ್ನು ಚಿತ್ರ ೧೪, ೧೬ ಮತ್ತು ೧೮ರಲ್ಲಿ ಬಿಂಬಿಸಲಾಗಿದೆ. ನಿರ್ಣಯಿಸಿದ ಮೂಲಮಾದರಿಗಳನ್ನು ನಾವು ಈ ಕೆಳಕಂಡಂತೆ ಸಂಕ್ಷಿಪ್ತಗೊಳಿಸಲಾಗಿದೆ:

- ಸಂಶೋಧನಾಧಾರಿತ ಮೂಲಮಾದರಿ (ಚಿತ್ರ ೩–೫)
  - ವೈಜ್ಞಾನಿಕ, ತಾಂತ್ರಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವಿಜ್ಞಾನ, ವೃತ್ತಿ ಮತ್ತು ಮಾನವಿಕಗಳು/ಸಮಾಜ ವಿಜ್ಞಾನಗಳ ಸಂಶೋಧನೆಯಲ್ಲಿ ತೊಡಗಿರುವ ದೇಶದ ಸುಧಾರಿತ ಸಂಸ್ಥೆ

  ಏಕೈಕ ಪ್ರಬಲ ಮೂಲಮಾದರಿಯು ಈ ಪ್ರಶ್ನೆಯನ್ನು ಒಡ್ಡುತ್ತದೆ: ರಾಜ್ಯದ ಸಂಸ್ಥೆಗಳಲ್ಲಿನ ಸಂಶೋಧನೆಗಳು ಸೂಕ್ತ ಅನೇಕತೆಯನ್ನು ಹೊಂದಿವೆಯೇ?

- ಶಿಕ್ಷಣಾಧಾರಿತ ಮೂಲಮಾದರಿ (ಚಿತ್ರ ೩–೭)
  - ಸಾಮಾಜಿಕ, ವೈಜ್ಞಾನಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ವಿಜ್ಞಾನಗಳು, ವೃತ್ತಿಗಳು ಮತ್ತು ಮಾನವಿಕ/ಸಮಾಜ ವಿಜ್ಞಾನಗಳ ಶಿಕ್ಷಣದಲ್ಲಿ ತೊಡಗಿರುವ ರಾಜ್ಯದ ಒಂದು ಸಂಸ್ಥೆ
  - ಸಾಂಸ್ಕೃತಿಕ ಅಭಿವೃದ್ಧಿಗಾಗಿ ಲಲಿತಕಲೆಗಳಲ್ಲಿ ತೊಡಗಿಸಿಕೊಂಡಿರುವ ದೇಶದ ಸುಧಾರಿತ ಸಂಸ್ಥೆ
  - ತಾಂತ್ರಿಕ ಅಭಿವೃದ್ಧಿಗಾಗಿ ವೃತ್ತಿನಿರತತೆಯಲ್ಲಿ ಮಗ್ನನಾಗಿರುವ ಪ್ರಮುಖ ಸಂಸ್ಥೆ

  ಸಂಶೋಧನೆಗೆ ತದ್ವಿರುದ್ದವಾಗಿ, ಸಂಸ್ತೆಗಳ ಶಿಕ್ಷಣದ ಮೂಲಮಾದರಿಗಳಲ್ಲಿ ಹೆಚ್ಚಿನ ವ್ಯತ್ಯಯ ಕಂಡುಬರುತ್ತದೆ.

- ಸೇವಾಧಾರಿತ ಮೂಲಮಾದರಿಗಳು (ಚಿತ್ರ ೩–೯)
  - ವೈಜ್ಞಾನಿಕ, ತಾಂತ್ರಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಸೇವಾ ವಲಯದ ವಿಜ್ಞಾನ ಮತ್ತು ವೃತ್ತಿಯಲ್ಲಿ ತೊಡಗಿರುವ ಸುಧಾರಿತ ಸಂಸ್ಥೆ
  - ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಸಲುವಾಗಿ ಮಾನವಿಕಗಳಿಗೆ ಪ್ರಾಮುಖ್ಯತೆ ನೀಡಿರುವ ಒಂದು ಸಾಮಾನ್ಯ ಸಂಸ್ಥೆ

  ಸೇವೆಗಳ ಮೂಲಮಾದರಿಗಳಲ್ಲಿ ದ್ವಂದ್ವವಿರುವುದು ಗೋಚರಿಸುತ್ತದೆ.

ವೈಜ್ಞಾನಿಕ, ತಾಂತ್ರಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ, ವಿಜ್ಞಾನ (ದೃಢ ಮತ್ತು ಲಘು) ಹಾಗೂ ವೃತ್ತಿ ಕ್ಷೇತ್ರಗಳ ಸಂಶೋಧನೆಯಲ್ಲಿ ತೊಡಗಿರುವ ಸುಧಾರಿತ ಸಂಸ್ಥೆಯು ಸೇವಾಧಾರಿತ ಮೂಲಮಾದರಿಯಾಗಿದೆ. ಇವು ಲಲಿತಕಲೆಗಳು ಮತ್ತು ಸಾಂಸ್ಕೃತಿಕ ಅಭಿವೃದ್ಧಿಯನ್ನು ಒಳಗೊಂಡಿರುವುದಿಲ್ಲ. ಮತ್ತೊಂದೆಡೆ, ಶಿಕ್ಷಣಾಧಾರಿತ ಮೂಲಮಾದರಿಗಳು: (ಅ) ವೈಜ್ಞಾನಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲು ವಿಜ್ಞಾನಗಳು ಮತ್ತು ವೃತ್ತಿ ಶಿಕ್ಷಣದಲ್ಲಿ ತೊಡಗಿರುವ ರಾಜ್ಯದ ಪ್ರಮುಖ ಸಂಸ್ಥೆ (ಆ) ಸಾಂಸ್ಕೃತಿಕ ಅಭಿವೃದ್ಧಿಗಾಗಿ ಲಲಿತಕಲೆಯ ಶಿಕ್ಷಣದಲ್ಲಿ

ತೊಡಗಿರುವ ದೇಶದ ಪರಿಣತಿ ಸಂಸ್ಥೆ ಮತ್ತು (ಇ) ವೃತ್ತಿಪರ ಶಿಕ್ಷಣ ಸಂಸ್ಥೆ. ಸೇವಾಧಾರಿತ ಮೂಲಮಾದರಿಗಳು: (ಅ) ವೈಜ್ಞಾನಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವೈಜ್ಞಾನಿಕ ಮತ್ತು ವೃತ್ತಿಯಲ್ಲಿ ಸೇವೆ ಒದಗಿಸುತ್ತಿರುವ ಸುಧಾರಿತ ಸಂಸ್ಥೆ ಮತ್ತು (ಆ) ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಸಲುವಾಗಿ ಮಾನವಿಕಗಳಿಗೆ ಮತ್ತು ಸಮಾಜ ವಿಜ್ಞಾನಗಳಿಗೆ ಪ್ರಾಮುಖ್ಯತೆ ನೀಡಿರುವ ಒಂದು ಸ್ಥಳೀಯ ಸಂಸ್ಥೆ. ಉಪಸಂಹಾರಗಳನ್ನು ಮುಂದಿನ ವಿಭಾಗದಲ್ಲಿ ಪ್ರಸ್ತುತಪಡಿಸುತ್ತೇವೆ.

Dendrograms From 3-10 to 3-15 to be inserted

## ಚರ್ಚೆ ಮತ್ತು ಉಪಸಂಹಾರ

ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಆಚರಣೆಗಳ ಮನೋಭಾವಗಳು ಸಾರ್ವಜನಿಕ ಮತ್ತು ಮಾಧ್ಯಮಗಳ ದೃಷ್ಟಿಕೋನಗಳಿಗಿಂತಲೂ ಉತ್ತಮ ಸ್ಥಿತಿಯಲ್ಲಿದೆ. ಆಚರಣಾ ಮನೋಭಾವಗಳನ್ನು ಮಾಪಿಸುವ ಸಂದರ್ಭದಲ್ಲಿ ೬೫ ಸಂಸ್ಥೆಗಳ ದತ್ತಾಂಶಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸುವಾಗ ಮತ್ತು ಅಭ್ಯಸಿಸುವಾಗ ಹಲವು ಸಂಸ್ಥೆಗಳಲ್ಲಿನ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಸುಪ್ತ ಹಿರಿಮೆಯನ್ನು ಗಮನಿಸಲಾಯಿತು. ಸಂಸ್ಥೆಯ ವ್ಯಾಪಕ ಸಂಶೋಧನೆಯನ್ನು ದಾಖಲಿಸುವಾಗ, ಮತ್ತೊಂದು ಸಂಸ್ಥೆಯು ೨೫ ವರ್ಷಗಳಿಂದ ನಿಯತಕಾಲಿಕೆಯನ್ನು ಪ್ರಕಾಶಿಸುತ್ತಿರುವಾಗ ಮತ್ತು ಸದೃಶ ನಿದರ್ಶನಗಳ ಕೆಲವು ಸನ್ನಿವೇಶಗಳಲ್ಲಿ ನಮ್ಮ ಹರಟೆಯನ್ನು ಕೈಬಿಡಲಾಯಿತು.

ಅಂತರ್ಜಾಲಗಳಲ್ಲಿ ಸಂಸ್ಥೆಗಳ ಕುರಿತಾದ ದುರ್ಬಲ ಪ್ರಕ್ಷೇಪಣೆಗಳು, ಅವುಗಳ ವರದಿಗಳು ಮತ್ತು ದತ್ತಾಂಶಗಳ ಇತರೆ ಮೂಲಗಳು ಆಚರಣಾ ಮನೋಭಾವಗಳ ಕುರಿತಾದ ಕೆಲವು ತಪ್ಪುಗ್ರಹಿಕೆಗಳ ಪ್ರಮುಖ ಮೂಲವಾಗಿದೆ ಎಂದು ಭಾಸವಾಗುತ್ತಿದೆ. ಅಸಮಾನವಾದ ದತ್ತಾಂಶಗಳ ರಚನೆ (ಚಿತ್ರ ೩–೧) ಯೂ ಸಹಾ ಈ ಸಮಸ್ಯೆಯ ಭಾಗವಾಗಿದೆ ಎಂದು ತೋರುತ್ತಿದೆ. ವಿವಿಧ ಮಾಧ್ಯಮಗಳಲ್ಲಿನ ಸಂಸ್ಥೆಗಳ ಕುರಿತಾದ ಮಾಹಿತಿಗಳ ಕೊರತೆ, ನಿಲುಕಣೆ ಮತ್ತು ಲಭ್ಯತೆಯೂ ಕೂಡಾ ಈ ಸಮಸ್ಯೆಯ ಸಂಯುಕ್ತವಾಗಿದೆ. ಯಾವಾಗ ಒಂದು ಸಂಸ್ಥೆಯು ತನ್ನ ಗುರುತನ್ನು ಪ್ರಕ್ಷೇಪಿಸುವುದಿಲ್ಲವೋ ಮತ್ತು ಬೆಂಬಲಕ್ಕಾಗಿ ದತ್ತಾಂಶಗಳನ್ನು ಒದಗಿಸುವುದಿಲ್ಲವೋ, ಬಾಹ್ಯ ಪ್ರತಿನಿಧಿಗಳು ಅವರುಗಳ ಪೂರ್ವ ಭಾವನೆ, ಅನುಭವ ಹಾಗೂ ತಜ್ಞತೆಗೆ ತಕ್ಕಂತೆ ದತ್ತಾಂಶಗಳನ್ನು ಆಯ್ಕೆಮಾಡಿಕೊಳ್ಳುತ್ತಾರೆ.

ನಮ್ಮ ಆಚರಣಾ ಮನೋಭಾವಗಳ ಕುರಿತಾದ ವಿಶ್ಲೇಷಣೆಯು, ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿನ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಮಹತ್ವಪೂರ್ಣವಾದ ಬಲಾಬಲಗಳನ್ನು ಮತ್ತು ದುರ್ಬಲಗಳನ್ನು ಸೂಚಿಸುತ್ತದೆ. ಅನುಗುಣವಾಗಿ, ಈ ಮೂರು ಕ್ರಿಯೆಗಳ ಸುಧಾರಣೆಗಾಗಿ ಪ್ರಮುಖವಾದ ಅವಕಾಶಗಳು ಮತ್ತು ಅಪಾಯಗಳನ್ನು ಒಡ್ಡುತ್ತವೆ. ಬಲ ಮತ್ತು ದುರ್ಬಲಗಳ ಕುಳಿಗಳನ್ನು ಮತ್ತು ಕುಳಿಗಳ ನಡುವಿನ ಸಂಭವನೀಯ ಸಂಯೋಜನೆಗಳನ್ನು ಮುಂದಿನ ಅಧ್ಯಾಯದಲ್ಲಿ ನಾವು ಎತ್ತಿ ಹಿಡಿದಿದ್ದೇವೆ. ಕೊನೆಯದಾಗಿ, ಜೋಟೋರೋನ ಜ್ಞಾನಮೂಲದ ಗುಣಲಕ್ಷಣಗಳನ್ನು ಚರ್ಚಿಸಿ, ಅಭಿವೃದ್ಧಿಯ ನಿರಂತರತೆ ಮತ್ತು ಪುರಾವೆಗಳ ನಿರ್ವಹಣೆಗಳಿಗೆ ನೆಲೆಯನ್ನು ಅಭಿವೃದ್ಧಿಪಡಿಸಿದ್ದೇವೆ.

## ವಿನೀತ ಸಫಲತೆ

ಆಚರಣಾ ಮನೋಭಾವಗಳ ಸಫಲತೆಯು ನಮ್ರವಾಗಿದ್ದು, ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆ ಮತ್ತು ವಿಶ್ವ ದರ್ಜೆಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಚೌಕಟ್ಟನ್ನು ರಚಿಸಲಾಗಿದೆ (ಚಿತ್ರ ೩–೩). ಸಂಶೋಧನೆ, ಶಿಕ್ಷಣ ಮತ್ತು ಸೇವೆಯಲ್ಲಿನ ಸಫಲತೆಯ ಭಾವಸೂಚಕವು ಸುಧಾರಿತ ಸಂಸ್ಥೆಯೆಂದು ನಿರೂಪಿಸಲಾಗಿದೆ. ಸಂಶೋಧನೆಯಲ್ಲಿ, ಎರಡನೆಯ ಸಫಲತೆಯ

ಭಾವಸೂಚಕವು ಪ್ರಮುಖ ಸಂಸ್ಥೆಯಾಗಿದ್ದು, ನಂತರದಲ್ಲಿ ಸಾಮಾನ್ಯ ಸಂಸ್ಥೆ ಇದೆ. ಸೇವೆಗಳಲ್ಲಿ, ಎರಡನೆಯ ಸಫಲತೆಯ ಭಾವಸೂಚಕವು ಸಾಮಾನ್ಯ ಸಂಸ್ಥೆಯಾಗಿದೆ. ೬೫ ಸಂಸ್ಥೆಗಳಲ್ಲಿನ ಈ ಮೂರು ಕ್ರಿಯೆಗಳು, ಶಿಕ್ಷಣ ಕ್ಷೇತ್ರದಲ್ಲಿ ಸರ್ವಶ್ರೇಷ್ಠ ಸಂಸ್ಥೆಯನ್ನು, ಸಂಶೋಧನೆ ಅಥವಾ ಸೇವೆಯಲ್ಲಿ ಯಾವುದೇ ಸಂಸ್ಥೆಯನ್ನು ಪ್ರತಿನಿಧಿಸುತ್ತಿಲ್ಲ.

ಸಂಸ್ಥೆಗಳ ದತ್ತಾಂಶದ ರಚನೆ, ಚಲಾವಣೆ, ಗುಣಮಟ್ಟ ಮತ್ತು ಪ್ರಮಾಣಗಳು, ಸಫಲತೆಯನ್ನು ಸ್ವಲ್ಪವೇ ಕಡಿಮೆ ಪ್ರಮಾಣದಲ್ಲಿ, ಒಟ್ಟಾರೆಯಾಗಿ ತ್ರಿವಿಮಿತೀಯಿಸಿದೆ. ಭವಿಷ್ಯದ ಉತ್ತಮ ದತ್ತಾಂಶವು ಸಣ್ಣ ಪ್ರಮಾಣದ ವಿತರಣೆಗೆ ವರ್ಗಾಯಿಸಬಹುದು, ಆದರೆ ಉನ್ನತ ಮಟ್ಟಕ್ಕೆ ವರ್ಗವಾಗುವುದು ಅಸಂಭವನೀಯ. ಸ್ಥೂಲವಾಗಿ, ಸಾಮಾನ್ಯಮಟ್ಟಕ್ಕಿಂತಲೂ ಉತ್ತಮವಾಗಿ ಸಂಸ್ಥೆಗಳ ದತ್ತಾಂಶಗಳು ಸರ್ವಶ್ರೇಷ್ಠತೆಯನ್ನು ಹೊಂದಿವೆ.

## ಜಾಗತಿಕ ಮತ್ತು ಸ್ಥಳಿಯ ವಿಸ್ತಾರ

ಸಂಶೋಧನೆ ಮತ್ತು ಶಿಕ್ಷಣದಲ್ಲಿ ದೇಶವನ್ನು ನಂತರದ ಸ್ಥಾನದಲ್ಲಿ ರಾಜ್ಯವನ್ನು ತನ್ನ ವ್ಯಾಪ್ತಿಯನ್ನಾಗಿಸಿಕೊಂಡಿದೆ ಮತ್ತು ಸೇವೆಗಳಲ್ಲಿ, ರಾಜ್ಯ ನಂತರದಲ್ಲಿ ದೇಶವಿದೆ. ಒಂದೇ ಒಂದು ಸಂಸ್ಥೆಯು ಸಂಶೋಧನೆ ಮತ್ತು ಶಿಕ್ಷಣ ಕ್ಷೇತ್ರವನ್ನು ತನ್ನ ಜಾಗತಿಕ ಪರಿಧಿಯನ್ನಾಗಿ ಆಯ್ಕೆಮಾಡಿಕೊಂಡಿದ್ದು, ಸೇವೆಗೆ ಯಾವುದೇ ಸಂಸ್ಥೆಗಳು ಇಲ್ಲ. ಹೀಗಾಗಿ ಒಟ್ಟಾರೆ ಆಚರಣಾ ಮನೋಭಾವಗಳ ತ್ರಿವಿಮಿತೀಯವಾಗಿ ವಿಸ್ತಾರವು ಅತ್ಯಧಿಕವಾಗಿ ದೇಶ ಮತ್ತು ಕನಿಷ್ಠವಾಗಿ ರಾಜ್ಯ ಮತ್ತು ಜಿಲ್ಲೆಗಳನ್ನು ಹೊಂದಿದೆ ಹಾಗೂ ವಿಶ್ವವನ್ನು ತನ್ನ ಕೇಂದ್ರಿತವಲಯವನ್ನಾಗಿ ಗುರುತಿಸಿಕೊಂಡಿಲ್ಲ. ಈ ಮೂರರ ವ್ಯಾಪ್ತಿಯ ನಾಲ್ಕು ಸಂಶೋಧನಾ ಸಮೂಹಗಳು ದೇಶವಾಗಿದೆ ಮತ್ತು ನಾಲ್ಕನೇ ಸಮೂಹವು ರಾಜ್ಯವಾಗಿದೆ (ಚಿತ್ರ ೩–೪). ದೇಶವನ್ನು ಕೇಂದ್ರಿತವಲಯವನ್ನಾಗಿ ಆಯ್ಕೆಮಾಡಿಕೊಂಡಿರುವುದು ಪ್ರಬಲವಾದ ಮೂಲಮಾದರಿಯಾಗಿದೆ (ಚಿತ್ರ ೩–೫).

ಸಂಸ್ಥೆಗಳ, ಸಮೂಹಗಳ ಮತ್ತು ಮೂಲಮಾದರಿಗಳ ಕಡಿಮೆ ಆವರ್ತನಗಳು ತೀವ್ರ ಪರಿಧಿಯ ಮೇಲಿವೆ. ಜ್ಞಾನ ಪರಿಸರವನ್ನು ವಿನ್ಯಾಸಿಸುವಾಗ ವಿಶ್ವ ಮತ್ತು ಜಿಲ್ಲೆಗಳನ್ನು ಗುರುತಿಸುವ ಅಗತ್ಯವಿದೆ. ಅಧ್ಯಾಯ ೨ರಲ್ಲಿ ಚಿತ್ರಿಸಿದ ಹಾಗೆ (ಚಿತ್ರ ೨–೯) ಯಾವುದೇ ವಿಭಾಗವು ಯುಎಸ್ ನ ಮಾದರಿಯನ್ನು ಸ್ಪರ್ಧಿಸಿದರೆ, ಸಂಸ್ಥೆಗಳ ಎರಡೂ ವಿಭಾಗಗಳು ಅಗತ್ಯವಾಗಬಹುದು. ಪ್ರಸ್ತುತದಲ್ಲಿರುವಂತೆಯೇ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ವಿತರಣೆಯಲ್ಲಿ ವ್ಯತ್ಯಾಸ ಕಂಡುಬರಬಹುದು. ಸಂಶೋಧನಾ ಸಂಸ್ಥೆಗಳು ವಿಶ್ವದೆಡೆಗೆ, ಶಿಕ್ಷಣ ಸಂಸ್ಥೆಗಳನ್ನು ಸಮದೂಗಿಸಿಕೊಂಡು ಮತ್ತು ಸೇವಾ ಸಂಸ್ಥೆಗಳು ಜಿಲ್ಲೆಗಳೆಡೆಗೆ ಗಮನವರಿಸಬಹುದು. ಪ್ರಸ್ತುತದಿಂದ ಇಂತಹ ವ್ಯವಸ್ಥೆಯನ್ನು ವಿನ್ಯಾಸಗೊಳಿಸುವುದು ನೀತಿಯೋಜಕರಿಗೆ ಒಂದು ಸವಾಲಾಗಿ ಪರಿಣಮಿಸಬಹುದು.

## ಕ್ರಿಯೆಗಳ ಸಮತೋಲನ

ಸಂಸ್ಥೆಗಳ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಆಚರಣೆಗಳಲ್ಲಿ ಮಹತ್ವದ ಬದಲಾವಣೆಗಳಿರಬಹುದು. ಒಟ್ಟಾರೆಯಾಗಿ ಈ ವ್ಯತ್ಯಾಸಗಳನ್ನು ಚಿತ್ರ ೩–೩, ೩–೪, ೩–೬ ಮತ್ತು ೩–೮ರಲ್ಲಿ ವ್ಯವಸ್ಥೆಯ ಹಂತ ಮತ್ತು ಸಮೂಹಗಳ ಹಂತಗಳಲ್ಲಿ ಬಿಂಬಿಸಲಾಗಿದೆ. ಆಚರಣೆಯ ಮನೋಭಾವಗಳನ್ನು ಸಂಕೇತಿಕರಿಸುವಾಗ, ಸಫಲತೆ, ವಿಸ್ತಾರ, ಕೇಂದ್ರಿಕೃತ ಮತ್ತು ಫಲಿತಾಂಶಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ವಿವರಗಳನ್ನು ಪಟ್ಟಿ ಮಾಡಿದೆವು. ಪರಿಣತಿ ಸಂಸ್ಥೆಗಳು ಸಂಕುಚಿತವಾಗಿಯೂ, ಹಾಗೆಯೇ ವ್ಯಾಪಕ ಸಂಸ್ಥೆಗಳು ವಿಸ್ತಾರವಾಗಿಯೂ ಗಮನಹರಿಸುತ್ತಿರಬಹುದು. ಹೀಗೆ, ವ್ಯವಸ್ಥಿತ ಹಂತದಲ್ಲಿ ಕ್ರಿಯೆಗಳ ಸಮತೋಲನವು, ಸಂಸ್ಥೆಗಳಲ್ಲಿ ಮತ್ತು ನಡುವಿರುವ ವ್ಯತ್ಯಯಗಳು ಮತ್ತು ಕ್ರಿಯೆಗಳ ಸಂಯೋಜನೆಗಳನ್ನು ಸಮದೂಗಿಸುವ ಅತ್ಯಗತ್ಯತೆ ಇದೆ. ಹೀಗಾಗಿ ವ್ಯಾಪಕ ಸಂಸ್ಥೆಯ ಮೂರು ಕ್ರಿಯೆಗಳು ಸಂಘಟಿತಗೊಂಡು, ಅಸಮನ್ವಿತಗಳಿಗಿಂತಲೂ ಅಪೇಕ್ಷಿತ ಫಲಿತಾಂಶಗಳನ್ನು ಅರಿತುಕೊಳ್ಳುವಲ್ಲಿ ಪರಿಣಾಮಕಾರಿಯಾಗಿರಬಹುದು. ಸಂಶೋಧನೆಯಲ್ಲಿ ಪರಿಣತಿ ಹೊಂದಿರುವ ಸಂಸ್ಥೆಯು ಶಿಕ್ಷಣ ಮತ್ತು ಸೇವೆಯಲ್ಲಿ

ಪೂರಕ ಸಂಸ್ಥೆಯೊಂದಿಗೆ ಸಹಯೋಗವನ್ನು ಹೊಂದುತ್ತದೆ ಮತ್ತು ಜ್ಞಾನ ಸಮಾಜದ ಅಪೇಕ್ಷಿತ ಫಲಿತಾಂಶಗಳನ್ನು ಸಾಧಿಸುವಲ್ಲಿ ಪರಿಣಾಮಕಾರಿಯಾಗಿರುತ್ತದೆ.

### ಏಕರೂಪವಾಗಿಲ್ಲದ ಕೇಂದ್ರಿತವಲಯಗಳು

ವಿಜ್ಞಾನ, ವೃತ್ತಿ, ವೃತ್ತಿಪರ, ಲಲಿತ ಕಲೆಗಳು ಮತ್ತು ಮಾನವಿಕಗಳು/ಸಮಾಜ ವಿಜ್ಞಾನಗಳ ಕುರಿತಾದ ಗಮನವು ಅಸಮಾನರೂಪದಲ್ಲಿದೆ ಮತ್ತು ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳಲ್ಲಿ ಮಹತ್ತರ ವ್ಯತ್ಯಾಸಗಳನ್ನು ಕಾಣಬಹುದಾಗಿದೆ (ಚಿತ್ರ ೩–೩). ಲಲಿತಕಲೆಗಳು ಮತ್ತು ವೃತ್ತಿಪರಗಳು ಕೊನೆಯ ಸ್ಥಾನದಲ್ಲಿವೆ. ವಿಜ್ಞಾನಗಳು ಮತ್ತು ವೃತ್ತಿಗಳು, ಮಾನವಿಕಗಳು/ಸಮಾಜವಿಜ್ಞಾನಗಳಿಗಿಂತಲೂ ಪ್ರಬಲವಾಗಿವೆ. ಇನ್ನೂ ಮುಂದೆ, ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಸಮೂಹಗಳಲ್ಲಿನ ಕೇಂದ್ರಿಕರಣವು ವಿಭಿನ್ನವಾಗಿದೆ. ಕೇಂದ್ರಿಕರಣದ ವೈವಿಧ್ಯವು ಶಕ್ತವಾಗಿಯೂ ಮತ್ತು ದುರ್ಬಲವಾಗಿಯೂ ಇರಬಹುದು. ಸಂಸ್ಥೆಗಳ ನಡುವಿನ ವ್ಯತ್ಯಯಗಳ ಸೂಚಕವು ಸತ್ವವುಳ್ಳದ್ದಾಗಿರಬಹುದು; ಕಳಪೆಯಾದ ಸಂಯೋಜಕ ವ್ಯವಸ್ಥೆಯ ಸೂಚಕವು ದುರ್ಬಲವಾಗಿರಬಹುದು. ಸಂಸ್ಥೆಗಳ ನಡುವಿನ ಸಂಯೋಜನೆಗಳ ಹಂತಗಳಿಗೆ ಸಂಬಂಧಿಸಿದ ಪುರಾವೆಗಳನ್ನು ಸಂಗ್ರಹಿಸಲಾಗಿಲ್ಲ, ಅಲ್ಪವಾಗಿರಬಹುದೆಂಬ ನಮ್ಮ ಅಂತಃಪ್ರಜ್ಞೆಯು ಇದಕ್ಕೆ ಎಡೆಮಾಡಿಕೊಡಲಿಲ್ಲ.

ಕೇಂದ್ರಿತವಲಯಗಳನ್ನು ಸಮತೋಲಿಸುವ ಪ್ರಮಾಣಕ ಮಾನದಂಡಗಳಿಲ್ಲ. ವ್ಯವಸ್ಥೆಯ ಅಗತ್ಯತೆಗಳು ಮತ್ತು ಆಶೋತ್ತರಗಳಿಗೆ ಅನುಗುಣವಾಗಿ ವಿಕಸಿಸಬೇಕು. ಹೀಗಾಗಿ, ಆಚರಣಾ ಮನೋಭಾವಗಳಲ್ಲಿನ ಏಕರೂಪವಾಗಿಲ್ಲದ ಗಮನವು ಅಪಾಯವಾಗಿರಬಹುದು ಅಥವಾ ಸುಯೋಗವಾಗಿರಬಹುದು. ಕರ್ನಾಟಕದ ಉನ್ನತ ಶಿಕ್ಷಣದ ವೈವಿಧ್ಯ ಸಂಯೋಜಕವಲ್ಲದ ವ್ಯವಸ್ಥೆಯ ನಿಟ್ಟಿನಲ್ಲಿ ಸಂಘಟಿತವಾಗದಿದ್ದಲ್ಲಿ ಮತ್ತು ನಿಯಂತ್ರಿಸಲು ಅಸಾಧ್ಯವಾದಲ್ಲಿ ಅಪಾಯವಾಗಬಹುದು, ಹಾಗೆಯೇ ಇದು ಸಂಯೋಜನೆಗೊಂಡು ನಿರ್ವಹಿಸಿದಲ್ಲಿ ಅವಕಾಶವನ್ನೀಯುವುದು.

### ಪ್ರತ್ಯೇಕಿತ ಫಲಿತಾಂಶಗಳು

ಸಾಮಾಜಿಕ ಮತ್ತು ವೈಜ್ಞಾನಿಕ ಅಭಿವೃದ್ಧಿಗಳು ಪ್ರಬಲವಾಗಿದ್ದು, ನಂತರದಲ್ಲಿ, ತಾಂತ್ರಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳಿವೆ (ಚಿತ್ರ ೩–೩). ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳ ಮಹತ್ವಗಳಲ್ಲಿ ವ್ಯತ್ಯಾಸ ಕಾಣಬಹುದಾಗಿದೆ, ಪ್ರಮುಖವಾಗಿ ಸೇವೆಯಲ್ಲಿ, ಸಾಮಾಜಿಕ ಅಭಿವೃದ್ಧಿಯು ಪ್ರಬಲವಾಗಿದೆ. ಸಮೂಹಗಳಾಧಾರಿತವಾಗಿ ಸಂಶೋಧನೆ, ಶಿಕ್ಷಣ ಮತ್ತು ಸೇವೆಗಳಲ್ಲಿ ಮಹತ್ತರ ವ್ಯತ್ಯಾಸಗಳನ್ನು ಕಾಣಬಹುದಾಗಿದೆ, ಇದರ ಮುಖಾಮುಖಿಯಾಗಿ ಫಲಿತಾಂಶಗಳು, ಸಂಸ್ಥೆಗಳ ನಡುವಿನ ಸೂಕ್ಷ್ಮವಾದ ವ್ಯತ್ಯಾಸಗಳನ್ನು, ಕ್ರಿಯೆಗಳ ಮುಖಾಂತರದ ಫಲಿತಾಂಶಗಳನ್ನು ನಿರ್ದೇಶಿಸುತ್ತದೆ (ಚಿತ್ರ ೩–೪, ೩–೬, ೩–೮). ಉದಾಹರಣೆಗೆ, ಸಮೂಹ ೧ ಮತ್ತು ೨ರ ಸಂಶೋಧನೆ (ಚಿತ್ರ ೩–೪) ಇವುಗಳ ಫಲಿತಾಂಶಗಳಿಗೆ ಪೂರಕವಾಗಿವೆ – ಸಮೂಹ ೧ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಗೆ ಮಹತ್ವ ನೀಡಿದೆ, ಸಮೂಹ ೨ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಿದೆ.

ಆಚರಣೆಗಳಲ್ಲಿನ ಫಲಿತಾಂಶಗಳ ವಿವರಗಳು, ಆಶೋತ್ತರಗಳೊಂದಿಗೆ ಪರಿಸರದ ಅಗತ್ಯತೆಗಳ ಸಮತೋಲನವನ್ನು ಕಾಯ್ದಿಟ್ಟುಕೊಳ್ಳುವೆಡೆಗೆ ಸಂಸ್ಥೆಗಳು ವಿಕಸನದ ಉತ್ಪನ್ನಗಳಾಗಿವೆ. ಅಖಂಡ ಉನ್ನತ ಶಿಕ್ಷಣ ವ್ಯವಸ್ಥೆಗಾಗಿ, ಫಲಿತಾಂಶಗಳ ವ್ಯತ್ಯಾಸಗಳು ಶಕ್ತವಾಗಿರಬಹುದು ಅಥವಾ ದುರ್ಬಲವಾಗಿರಬಹುದು, ಇವುಗಳನ್ನು ನಿರ್ವಹಿಸುವ ಆಧಾರದ ಮೇರೆಗೆ ಅವಲಂಬಿತವಾಗಿದೆ. ವಿಭಿನ್ನತೆಯೂ ಶಕ್ತಿ ಅಥವಾ ಚೆದರುವಿಕೆಯು ದುರ್ಬಲತೆಯನ್ನು ನಿರ್ಣಯಿಸುವ ಮಾಪನವಾಗಿರಬಹುದು. ಫಲಿತಾಂಶಗಳ ಸಮತೋಲನಕ್ಕಾಗಿ ಯಾವುದೇ ರೂಢಿಗಳಿಲ್ಲ. ಇನ್ನೂ, ಪ್ರಸ್ತುತದ ಆಚರಣೆಗಳು ಸೂಕ್ತವಾಗಿವೆಯೇ ಇಲ್ಲವೇ ಎಂದು ಪರೀಕ್ಷಿಸಬೇಕಾಗಿದೆ. ಉದಾಹರಣೆಗೆ: ವೈಜ್ಞಾನಿಕ ಮತ್ತು ಸಾಮಾಜಿಕ

ಅಭಿವೃದ್ಧಿಯು ತಾಂತ್ರಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳಿಗಿಂತಲೂ ಪ್ರಬಲವಾಗಿವೆಯೇ? ಎಲ್ಲಾ ಅಭಿವೃದ್ಧಿಯ ಪ್ರಕಾರಗಳಲ್ಲಿಯೂ ಜಾಗತಿಕ ಆರ್ಥಿಕತೆಯು ಚಾಲನಾ ಶಕ್ತಿಯನ್ನು ಹೊಂದಿರುವಾಗ ವ್ಯವಸ್ಥೆಯು ಹೆಚ್ಚಿನ ಆರ್ಥಿಕ ಅಭಿವೃದ್ಧಿಯೆಡೆಗೆ ಗಮನಹರಿಸಬೇಕಲ್ಲವೇ?

## ಉಪಸಂಹಾರ

ಕರ್ನಾಟಕ ಉನ್ನತ ಶಿಕ್ಷಣ ಸಂಸ್ಥೆಗಳ ಆಚರಣಾ ಮನೋಭಾವಗಳು ಉತ್ತಮ ಮತ್ತು ಸ್ಥಿತಿವಂತವಾಗಿದೆ. ಸ್ವಾಧೀನಪಡಿಸಿಕೊಳ್ಳುವ ತೊಂದರೆ ಮತ್ತು ನಿರ್ವಹಿಸುವೆಡೆಗೆ ಸಿರಿವಂತ ಪುರಾವೆಗಳಿದ್ದರೂ ಸಹಾ ಮಹತ್ವದ ಬಲ ಮತ್ತು ದುರ್ಬಲಗಳನ್ನು ಪ್ರಮಾಣೀಕರಿಸುತ್ತದೆ. ಈ ಅಧ್ಯಾಯವನ್ನು ಮುಕ್ತಾಯಗೊಳಿಸುವ ಹಂತದಲ್ಲಿ, ಸಫಲತೆ, ವಿಸ್ತಾರ, ಕ್ರಿಯೆಗಳು, ಕೇಂದ್ರೀಕರಣ ಮತ್ತು ಫಲಿತಾಂಶಗಳಿಗೆ ಸಂಬಂಧಿಸಿದಂತೆ ಸತ್ವ ಮತ್ತು ದುರ್ಬಲಗಳನ್ನು ನಾವು ಸಂಕ್ಷಿಪ್ತಗೊಳಿಸಿದ್ದೇವೆ.

೧. ಉನ್ನತ ಶಿಕ್ಷಣದ ಜಾಗತಿಕ ಮಾರುಕಟ್ಟೆ ಸನ್ನಿವೇಶದಲ್ಲಿ, ಉನ್ನತ ಶಿಕ್ಷಣದ ಸಫಲತೆಯು ನಮ್ರ ಹಾಗೂ ಭಿನ್ನವಾಗಿದೆ. ಮಧ್ಯಮದಲ್ಲಿ ಹೆಚ್ಚು ತೂಕವನ್ನು ಮತ್ತು ಕೊನೆಯಲ್ಲಿ ತೆಳುವಾಗಿಯೂ ಇದ್ದು, ಕೆಲವೇ ಸರ್ವಶ್ರೇಷ್ಠ ಮತ್ತು ಸಾಮಾನ್ಯ ಸಂಸ್ಥೆಗಳನ್ನು ಹೊಂದಿದೆ.

೨. ಇದರ ವಿಸ್ತರವು ವಿಫುಲ ಹಾಗೂ ಸಂಕೀರ್ಣ ಅದರೆ, ಉತ್ತಮವಾಗಿ ಹಂಚಿಕೆಯಾಗಿಲ್ಲ. ದೇಶ ಮತ್ತು ರಾಜ್ಯಗಳ ಕುರಿತಂತೆ ಪ್ರಬಲವಾಗಿ ಗಮನವನ್ನು ನೀಡಿದೆ, ವಿಶ್ವ ಹಾಗೂ ಜಿಲ್ಲೆಗಳು ಅತಿ ಕಡಿಮೆ ಪ್ರಮಾಣದ ಆದ್ಯತೆಯನ್ನು ಹೊಂದಿದೆ.

೩. ಒಟ್ಟಾರೆ, ಸಂಸ್ಥೆಗಳ ಸಮೂಹಗಳ ಕ್ರಿಯೆಗಳ ಕುರಿತ ಪ್ರಾಮುಖ್ಯತೆಯು ವೈವಿಧ್ಯ ಮತ್ತು ವಿಭಿನ್ನ. ಶಬ್ದಕೋಶದಲ್ಲಿ (ಅನುಬಂಧ ಬಿ) ವ್ಯಾಖ್ಯಾನಿಸಿದ ರೀತಿಯಲ್ಲಿ ಸಂಶೋಧನೆ, ಖಾಸಗಿ, ರಾಜ್ಯ, ಸ್ವಾಯತ್ತ ಮತ್ತು ರಾಷ್ಟ್ರೀಯ/ಕೇಂದ್ರಿಯ ಸಂಸ್ಥೆಗಳ ನಿರೂಪಣೆಗಳು ಹಾದುಹೋಗುತ್ತವೆ. ಸಂಸ್ಥೆಗಳ ಈ ಭಿನ್ನತೆಯು ವ್ಯವಸ್ಥೆಯ ಸಾಮರ್ಥ್ಯವಾಗಿದೆ. ಅವುಗಳ ಸಮಷ್ಟಿ ಕೊರತೆಯು ಒಂದು ದೌರ್ಬಲ್ಯ ಆಗಿರಬಹುದು.

೪. ಏಕಾಗ್ರತೆಯು ವೈವಿಧ್ಯತೆಯಿಂದ ಕೂಡಿದ್ದು, ಏಕರೂಪವಾಗಿಲ್ಲದಾಗಿದೆ ಹಾಗೂ ಮರುಮೌಲ್ಯಾಂಕನದ ಅವಶ್ಯವಿದೆ. ವಿಜ್ಞಾನಗಳು ಮತ್ತು ವೃತ್ತಿಗಳೆಡೆಗೆ ಅತಿ ಹೆಚ್ಚಿನ ಮಹತ್ವವನ್ನು ನೀಡಿದರೆ, ವೃತ್ತಿಪರ ಮತ್ತು ಲಲಿತಕಲೆಗಳಿಗೆ ಅತಿ ಕಡಿಮೆ ಪ್ರಾಧಾನ್ಯತೆಯನ್ನು ನೀಡಿದೆ. ಒಂದು ವೇಳೆ, ಜ್ಞಾನಸಮಾಜದ ಅಭಿವೃದ್ಧಿಗಾಗಿ ಎಲ್ಲಾ ಕೇಂದ್ರೀಕೃತ ಕ್ಷೇತ್ರಗಳು ಬಹುಮುಖ್ಯವಾದುವು ಎಂದು ಭಾವಿಸಿದರೆ, ಸ್ಪಷ್ಟವಾಗಿ ಆಚರಣೆಯ ಮಾರ್ಗವು ತನ್ನ ಸಂತುಲತೆಯನ್ನು ಕಳೆದುಕೊಳ್ಳುತ್ತದೆ. ಅದಾಗ್ಯೂ, ಸರಿಯಾದ ಸಮತೋಲನವನ್ನು ಕಾಪಾಡಿಕೊಳ್ಳಲು ಯಾವುದೇ ಪ್ರಾಯೋಗಿಕ ಸಾಕ್ಷ್ಯಗಳಿಲ್ಲ; ಆಚರಣಾ ಮನೋಭಾವಗಳು ಚರ್ಚೆಗಳಿಗೆ ಉತ್ತೇಜಕವಾಗಬಹುದು ಮತ್ತು ಸರಿಯಾದ ಸಮತೋಲನದ ಕುರಿತು ವಾದಿಸಬಹುದಾಗಿದೆ.

೫. ಒಟ್ಟಾರೆಯಾಗಿ ಮೂರು ಕಾರ್ಯಗಳ ಫಲಿತಾಂಶಗಳು ಅತೀವವಾದ ವ್ಯತ್ಯಾಸಗಳನ್ನು ಕಂಡಿವೆ. ವ್ಯತ್ಯಾಸಗಳು ಸ್ವತಃ ಉತ್ತಮವಾಗಿದ್ದು, ಜ್ಞಾನಸಮಾಜದ ಅಭಿವೃದ್ಧಿಯೆಡೆಗೆ ಇದರ ಪರಿಣಾಮಕಾರಿತ್ವ ಅವುಗಳ ಅನುಕಲನಗಳ ಮೇಲೆ ಅವಲಂಬಿತವಾಗಿರುತ್ತದೆ. ಇದಕ್ಕೂ ಮಿಗಿಲಾಗಿ ವಿವಿಧ ಪ್ರಕಾರದ ಬೆಳವಣಿಗೆಗಳು, ಅವುಗಳ ಆದ್ಯತೆ, ಹಾಗೂ ಅನುಕ್ರಮಗಳ ನಡುವಿನ,

ಸಮತೋಲನ (ಅಥವಾ ಅಸಮತೋಲನ) ಗಳನ್ನು ಚರ್ಚಿಸಬೇಕಾಗಿದೆ ಮತ್ತು ನಿರ್ಣಯಿಸಬೇಕಾಗಿದೆ.

ಮುಂದಿನ ಉಪಸಂಹಾರದ ಅಧ್ಯಾಯದಲ್ಲಿ, ರೂಢಿಗಳ ಮತ್ತು ಆಚರಣೆಗಳ ಮನೋಭಾವಗಳ ವ್ಯತಿರಿಕ್ತತೆಯನ್ನು ಬಿಂಬಿಸುವುದರೊಂದಿಗೆ, ಇವುಗಳ ನಡುವಿನ ಅಂತರಗಳನ್ನು ಎತ್ತಿಹಿಡಿಯಲಾಗಿದೆ. ಕರ್ನಾಟಕದ ಜ್ಞಾನಸಮಾಜದ ಅಭಿವೃದ್ಧಿಯನ್ನು ಸಾಧಿಸುವೆಡೆಗೆ ಇರುವ ಅಂತರಗಳ ಸಂಭವನೀಯ ಪರಿಣಾಮಗಳು ಮತ್ತು ಇವುಗಳನ್ನು ಸಂಯೋಜಿಸಲು ಅಗತ್ಯವಾದ ಕಾರ್ಯತಂತ್ರಗಳನ್ನು ಚರ್ಚಿಸೋಣ. ಕೊನೆಯದಾಗಿ, ಕರ್ನಾಟಕದ ಉನ್ನತ ಶಿಕ್ಷಣ ವ್ಯಾಪಕ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಲು ಅಗತ್ಯತೆಯ ಮನೋಭಾವಗಳನ್ನು ಅಭ್ಯಸಿಸೋಣ.

## ಅಧ್ಯಾಯ ೪ ಉಪಸಂಹಾರ

ಕರ್ನಾಟಕದ ಉನ್ನತ ಶಿಕ್ಷಣವನ್ನು ಮಾಪಿಸುವುದು ನಮ್ಮ ಉದ್ದೇಶವಾಗಿದೆ. ಆಶೋತ್ತರಗಳ ಮನೋಭಾವಗಳನ್ನು ಮಾಪಿಸುವುದರೊಂದಿಗೆ ಅಧ್ಯಾಯ ೨ರಲ್ಲಿ ಮತ್ತು ಆಚರಣೆಗಳ ಮನೋಭಾವಗಳನ್ನು ಅಧ್ಯಾಯ೩ರಲ್ಲಿಯೂ ಸುವಿಸ್ತಾರವಾಗಿ ವಿವರಿಸಲಾಗಿದೆ. ಪ್ರಸ್ತುತ ಪ್ರಕಲ್ಪದ ವಿಸ್ತರಣೆಯಾಗಿ ಅಗತ್ಯಗಳ ಮನೋಭಾವಗಳನ್ನು ಮಾಪಿಸಬೇಕೆಂದು ನಾವು ಪ್ರಸ್ತಾಪಿಸಿದ್ದೇವೆ. ವರದಿಯನ್ನು ಮುಕ್ತಾಯದೊಂದಿಗೆ ಕೆಳಗಿನವುಗಳನ್ನು ಚರ್ಚಿಸೋಣ:

೧. ಎರಡು ಮನೋಭಾವಗಳ ನಡುವಿನ ಕಾರ್ಯಕ್ಷಮತೆಯ ಅಂತರ

೨. ಜೋಟೋರೋನ ಜ್ಞಾನಮಾದರಿಯು ಚಾಲ್ತಿಯಲ್ಲಿರುವ ಪರಿವೀಕ್ಷಣಾ ವ್ಯವಸ್ಥೆಯ ಸಾಧನವಾಗಿ ನಿರೂಪಿಸಲಾಗಿದೆ

೩. ಮೂರನೆ ಮತ್ತು ಕೊನೆಯ ಅಂಶವಾದ ಅಗತ್ಯಗಳ ಮನೋಭಾವಗಳನ್ನು ಮಾಪಿಸುವ ಕುರಿತ ಪ್ರಸ್ತಾವನೆ

೪. ಪ್ರಕಲ್ಪದ ಸಮಗ್ರವಾದ ಮಿತಿಗಳು, ಸಾಮರ್ಥ್ಯ ಮತ್ತು ಮುಕ್ತಾಯ

### ಆಶೋತ್ತರ ಮತ್ತು ಆಚರಣಾ ಮನೋಭಾವಗಳ ನಡುವಿರುವ ಕಾರ್ಯಕ್ಷಮತೆಯ ಅಂತರ

ಚಿತ್ರ ೨–೨ ಮತ್ತು ೩–೩ ಗಳನ್ನು ಹೋಲಿಸಿ ಮತ್ತು ವೈದೃಶ್ಯಗಳ ಸಹಾಯದಿಂದ ಕಾರ್ಯಕ್ಷಮತೆಯ ಅಂತರಗಳನ್ನು ವಿಶ್ಲೇಷಿಸೋಣ. ಒಟ್ಟಿಗೇ ಎರಡನ್ನೂ ಚಿತ್ರ ೪–೧ರಲ್ಲಿ ನೀಡಲಾಗಿದೆ. ಆಕಾಂಕ್ಷೆಗಳು/ಸಫಲತೆ, ವಿಸ್ತಾರ, ಕ್ರಿಯೆ, ಕೇಂದ್ರಿತ ಮತ್ತು ಫಲಿತಾಂಶಗಳ ಅಂತರಗಳನ್ನು ಅನುಕ್ರಮವಾಗಿ ಚರ್ಚಿಸೋಣ.

| ಆಶೋತ್ತರಗಳು | | ಪರಿಧಿ | | ಕಾರ್ಯಗಳು | | ಕೇಂದ್ರಿತ ವಲಯ | | ಫಲಿತಾಂಶ | |
|---|---|---|---|---|---|---|---|---|---|
| ಸರ್ವಶ್ರೇಷ್ಠ (೧೯) | [ಸಂ | ಜಾಗತಿಕ (೧೩) | [ನ | ಸಂಶೋಧನೆ (೫೮) | [ನ | ವಿಜ್ಞಾನಗಳು (೪೩) | [ಗೆ] | ವೈಜ್ಞಾನಿಕ (೩೩) | [ಜ್ಞಾನ |
| ಪ್ರಮುಖ (೨೭) | ಸ್ಥೆ | ಪ್ರಾಂತ (೦) | ಲ್ಲಿ] | ಶಿಕ್ಷಣ (೫೬) | ಲ್ಲಿ] | ಉದ್ಯೋಗ (೩೮) | | ತಾಂತ್ರಿಕ (೨೪) | ಸಮಾಜದ |
| ಸುಧಾರಿತ (೧೯) | ಗ | ದೇಶ (೩೦) | | ಸೇವೆ (೩೪) | | ವೃತ್ತಿಪರತೆ (೧) | | ಆರ್ಥಿಕ (೧೩) | ಅಭಿವೃದ್ಧಿ |
| ಸಾಮಾನ್ಯ (೦) | ಳು] | ರಾಜ್ಯ ೨೨) | | | | ಲಲಿತ ಕಲೆಗಳು (೧೮) | | ಸಾಮಾಜಿಕ (೫೨) | ಯಲ್ಲಿ] |
| | | ಜಿಲ್ಲೆ(ಗಳು) (೦) | | | | ಮಾನವಿಕಗಳು/ ಸ.ವಿಗಳು (೨೬) | | ಸಾಂಸ್ಕೃತಿಕ (೧೩) | |

| | ಸಫಲತೆ | | | | | | | | ವ್ಯಾಪ್ತಿ | | | | ಕೇಂದ್ರಿತ ವಲಯ | | | | | ಫಲಿತಾಂಶ | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| ಕಾರ್ಯ | ಆ ಸರ್ವಶ್ರೇಷ್ಠ | ಸ ಸರ್ವಶ್ರೇಷ್ಠ | ಆ ಪ್ರಮುಖ | ಸ ಪ್ರಮುಖ | ಆ ಸುಧಾರಿತ | ಸ ಸುಧಾರಿತ | ಆ ಸಾಮಾನ್ಯ | ಸ ಸಾಮಾನ್ಯ | ಜಾ | ದೇಶ | ರಾಜ್ಯ | ಜಿಲ್ಲೆ(ಗಳು) | ವಿಜ್ಞಾನ | ಉದ್ಯೋಗ | ವೃತ್ತಿಪರ | ಲಲಿತಕಲೆಗಳು | ಮಾನವಿಕಗಳು/ಸ.ವಿ | ವೈಜ್ಞಾನಿಕ | ತಾಂತ್ರಿಕ | ಆರ್ಥಿಕ | ಸಾಮಾಜಿಕ | ಸಾಂಸ್ಕೃತಿಕ |
| ಸಂಶೋಧನೆ | 0 | 0 | 5 | 14 | 8 | 22 | 4 | 9 | 1 | 41 | 15 | 5 | 43 | 24 | 7 | 7 | 29 | 43 | 22 | 16 | 39 | 15 |
| ಶಿಕ್ಷಣ | 1 | 2 | 2 | 13 | 4 | 20 | 8 | 12 | 1 | 32 | 23 | 6 | 41 | 40 | 16 | 13 | 29 | 41 | 22 | 28 | 44 | 15 |
| ಸೇವೆ | 0 | 0 | 3 | 6 | 3 | 19 | 7 | 18 | 0 | 15 | 30 | 11 | 29 | 24 | 13 | 4 | 27 | 22 | 17 | 11 | 47 | 17 |

ಚಿತ್ರ ೪–೧: ಕಾರ್ಯಕ್ಷಮತೆಯ ಅಂತರ

### ಆಶೋತ್ತರ/ಸಫಲತೆಯ ಅಂತರ

ಆಕಾಂಕ್ಷೆಗಳು ಸಫಲತೆಯನ್ನು ಮೀರಿಸುತ್ತವೆ. ಕೆಲವೇ ಕೆಲವು ಸರ್ವಶ್ರೇಷ್ಠ ಮತ್ತು ಪ್ರಮುಖ ಸಂಸ್ಥೆಗಳು ಅಚರಣೆಗಳಲ್ಲಿವೆ ಅದಾಗ್ಯೂ ಈ ಮಟ್ಟವನ್ನು ತಲುಪುವ ಗುರಿತಾದ ಆಶಯಕ್ಕಿಂತ ಹೆಚ್ಚಾಗಿದೆ. ಸಂಕುಚಿತ ಮೂಲವಾಗಿ, ಆಕಾಂಕ್ಷೆಗಳು

ಸೂಚಿಸಿದ್ದಕ್ಕಿಂತ ಹೆಚ್ಚಿನ ಸುಧಾರಿತ ಮತ್ತು ಸಾಮಾನ್ಯ ಸಂಸ್ಥೆಗಳಿವೆ. ಮಾದರಿ ಆಕಾಂಕ್ಷೆಯಾಗಿ ಪ್ರಮುಖ ಸಂಸ್ಥೆ ಹಾಗೂ ಮಾದರಿ ಸಫಲತೆಯಾಗಿ ಸುಧಾರಿತ ಸಂಸ್ಥೆಯು, ಪ್ರಮಾಣಕ್ಕಿಂತ ಕಡಿಮೆ ಹಂತದಲ್ಲಿದೆ. ಆದರೆ, ಆಚರಣೆಯಲ್ಲಿನ ಕೆಲವೇ ಸರ್ವಶ್ರೇಷ್ಠ ಸಂಸ್ಥೆಗಳು ಜ್ಞಾನ ಪರಿಸರಕ್ಕೆ ಉತ್ತಮವಾಗಿರಲಿಕ್ಕಿಲ್ಲ, ಹೆಚ್ಚಿನ ಸಾಮಾನ್ಯ ಸಂಸ್ಥೆಗಳು ಒಳ್ಳೆಯ ಅವಕಾಶವಾಗಿರಬಹುದು. ಹೀಗಾಗಿ, ಆಕಾಂಕ್ಷೆ/ಸಫಲತೆ ಜೊತೆಗೇ ವಿತರಣೆಯ ಕ್ರಮದಲ್ಲಿ ಅಂತರವಿದೆ. ಸಫಲತೆಯು ಆಕಾಂಕ್ಷೆಗಳಿಗಿಂತಲೂ ಕಡಿಮೆ ಇದ್ದು, ಸಾಮಾನ್ಯದೆಡೆಗೆ ಹಂಚಿಕೆಯಾಗುತ್ತಿದೆ.

### ವಿಸ್ತಾರದಲ್ಲಿನ ಅಂತರ

ವಿಸ್ತಾರಗಳ ಅಂತರಗಳು, ಆಕಾಂಕ್ಷೆ/ಸಫಲತೆಗಳಲ್ಲಿನ ಅಂತರಗಳ ಪ್ರತಿಧ್ವನಿಗಳಾಗಿವೆ. (ಯಾವುದೇ ಸಂಸ್ಥೆಗಳು ವಿಶ್ವದಲ್ಲಿನ ಪ್ರಾಂತದ ಕುರಿತು ಕೇಂದ್ರೀಕೃತವಾಗಿಲ್ಲದ ಕಾರಣ, ಆಚರಣೆಗಳ ಮನೋಭಾವಗಳನ್ನು ಸಂಕೇತೀಕರಿಸುವಾಗ ಪ್ರಾಂತವನ್ನು ಕೈಬಿಡಲಾಯಿತು.) ಕಡಿಮೆ ಸಂಖ್ಯೆಯ ಸಂಸ್ಥೆಗಳು ವಿಶ್ವವನ್ನು ತಮ್ಮ ಆದ್ಯತೆಯನ್ನಾಗಿ, ಮತ್ತೂ ಕೆಲವು ದೇಶ, ರಾಜ್ಯ ಮತ್ತು ಜಿಲ್ಲೆಗಳನ್ನು ತಮ್ಮ ಪರಿಧಿಗಳನ್ನಾಗಿಸಿಕೊಂಡಿವೆ. ಮಹತ್ತರವಾದ ಗಮನವನ್ನು ರಾಜ್ಯ ಮತ್ತು ಜಿಲ್ಲೆಗಳಿಗೆ ನೀಡಲಾಗಿದ್ದು, ಜ್ಞಾನಪರಿಸರದ ಆಚರಣೆಗಳಿಗೆ ಉತ್ತಮವಾಗಿದೆ. ಆದರೂ, ಕಡಿಮೆ ಸಂಸ್ಥೆಗಳು ವಿಶ್ವಕ್ಕೆ ನೀಡಿದ್ದು, ಇದು ಜ್ಞಾನಪರಿಸರವನ್ನು ದುರ್ಬಲಗೊಳಿಸುವ ಸಾಧ್ಯತೆ ಇದೆ. ಹೀಗಾಗಿ, ವ್ಯಾಪ್ತಿಯ ಜೊತೆಗೇ ವಿತರಣೆಯ ಕ್ರಮದಲ್ಲಿ ಅಂತರವಿದೆ. ಸಫಲತೆಯು ಆಕಾಂಕ್ಷೆಗಳಿಗಿಂತಲೂ ಕಡಿಮೆ ಇದ್ದು, ಸಾಮಾನ್ಯದೆಡೆಗೆ ಹಂಚಿಕೆಯಾಗುತ್ತಿದೆ.

### ಕ್ರಿಯೆಗಳ ಅಂತರ

ಆಶಿಸಿದ ರೀತಿಯಲ್ಲಿ, ಸಂಶೋಧನೆ ಮತ್ತು ಶಿಕ್ಷಣಗಳು ಸಮಾನವಾಗಿದ್ದು, ಹೆಚ್ಚಿನ ಮಹತ್ವವನ್ನು ಪಡೆದಿವೆ, ಸೇವೆಯು ಆಕಾಂಕ್ಷೆ ಮತ್ತು ಆಚರಣೆ ಎರಡರಲ್ಲಿಯ ಮಹತ್ವದ ಕಾಲುದಾರಿಯಾಗಿದೆ. ಆಶೋತ್ತರಗಳಲ್ಲಿನ ತುಲನಾತ್ಮಕ ಮಹತ್ವವನ್ನು ಹೋಲಿಸಿದರೆ, ಸಂಶೋಧನೆಗಿಂತಲೂ ಶಿಕ್ಷಣಕ್ಕೆ ತುಸು ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಹೀಗಾಗಿ, ಕ್ರಮಗಳಲ್ಲಿ ಮತ್ತು ಕ್ರಿಯೆಗಳ ವಿತರಣೆಯಲ್ಲಿ ಗಮನಾರ್ಹವಾದ ಅಂತರವಿಲ್ಲ, ಒಂದು ಪಕ್ಷದಲ್ಲಿ ಇದ್ದರೆ, ಆಚರಣೆಗಳು ಆಶೋತ್ತರಗಳಿಗಿಂತಲೂ ಸೇವೆಗಳೆಡೆಗೆ ತ್ರಿವಿಮೀತಿಯವಾಗುತ್ತದೆ.

### ಕೇಂದ್ರಿತ ವಲಯಗಳಲ್ಲಿನ ಅಂತರ

ಆಚರಣೆಗಳಲ್ಲಿನ ವಿಜ್ಞಾನ ಮತ್ತು ವೃತ್ತಿಗಳ ಕುರಿತಾದ ಗಮನವು, ಆಶೋತ್ತರಗಳಲ್ಲಿನ ಸಂಶೋಧನೆ ಮತ್ತು ಶಿಕ್ಷಣಕ್ಕೆ ಹೊಂದಾಣಿಕೆಯಾಗುತ್ತದೆ, ಅದರೆ ಸೇವೆಯ ಕ್ಷೇತ್ರಗಳಲ್ಲಿ ಸಂದರ್ಭಗಳು ವಿಭಿನ್ನವಾಗಿವೆ ಮತ್ತು ಕಡಿಮೆ ಇದೆ. ಆಚರಣೆಯಲ್ಲಿನ ವೃತ್ತಿಯು, ಆಕಾಂಕ್ಷೆಯ ಶಿಕ್ಷಣಕ್ಕೆ ಸರಿಸಾಟಿಯಾಗಿದೆ, ಆದರೆ ಇದು ಸಂಶೋಧನೆ ಮತ್ತು ಸೇವೆಯಲ್ಲಿ ಕಡಿಮೆ ಪ್ರಮಾಣದಲ್ಲಿದೆ. ವೃತ್ತಿಪರತೆಯು ಆಶೋತ್ತರಗಳಿಗಿಂತ ಆಚರಣೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ, ಲಲಿತಕಲೆಗಳು ಆಶೋತ್ತರಗಳಿಗಿಂತ ಆಚರಣೆಯಲ್ಲಿ ಅಲ್ಪ ಪ್ರಾಧಾನ್ಯತೆಯನ್ನು ಹೊಂದಿದೆ. ಕೊನೆಯದಾಗಿ, ಮಾನವಿಕ/ಸಮಾಜವಿಜ್ಞಾನಗಳಲ್ಲಿ ಕಾರ್ಯಕ್ಷಮತೆಯ ಅಂತರವಿದೆ ಎಂದು ತೋರುತ್ತದೆ. ಹೀಗಾಗಿ ಕಾರ್ಯಕ್ಷಮತೆಯ ಅಂತರಗಳ ಕುರಿತಾದ ಗಮನವು ಸಂಕೀರ್ಣವಾಗಿದೆ. ಐದು ಕೇಂದ್ರ ವಲಯಗಳ ನಡುವೆ, ವೃತ್ತಿಪರತೆಯು (ಆಶೋತ್ತರಗಳಿಗಂತ ಹೆಚ್ಚಿನ) ಮತ್ತು ಲಲಿತಕಲೆಗಳು (ಆಶೋತ್ತರಗಳಿಗಿಂತ ಕಡಿಮೆ) ಗಮನಾರ್ಹವಾಗಿದೆ.

### ಫಲಿತಾಂಶಗಳ ಅಂತರ

ಆಚರಣೆಗಳ ಸಂಶೋಧನಾ ಫಲಿತಾಂಶದ ವಿವರಗಳನ್ನು ಗಮನಿಸಿದಾಗ ವೈಜ್ಞಾನಿಕ ಫಲಿತಾಂಶಗಳೂ ಮತ್ತು ಸಾಮಾಜಿಕ ಫಲಿತಾಂಶಗಳು ಆಕಾಂಕ್ಷೆಗಳ ಮನೋಭಾವಗಳ ಫಲಿತಾಂಶಗಳಿಗಿಂತ ಕಡಿಮೆ ಪ್ರಮಾಣದಲ್ಲಿದೆ. ಆಚರಣೆಯ ಶಿಕ್ಷಣದ ಫಲಿತಾಂಶಗಳು ಆಕಾಂಕ್ಷೆಗಳ ವಿವರಗಳಿಗೆ ನಿಕಟವಾಗಿದ್ದು, ತುಸು ಹೆಚ್ಚಿನ ಮಹತ್ವವನ್ನು ವೈಜ್ಞಾನಿಕ ಫಲಿತಾಂಶ,

ಕಡಿಮೆಯನ್ನು ಸಾಮಾಜಿಕ ಫಲಿತಾಂಶ ಮತ್ತು ಸ್ವಲ್ಪಮಟ್ಟಿಗೆ ಆರ್ಥಿಕ ಫಲಿತಾಂಶಗಳಿಗೆ ನೀಡಿವೆ. ಸೇವೆಯು ಆಶೋತ್ತರಗಳಿಗಿಂತಲೂ ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ಧಿಗೆ ಕಡಿಮ ಒತ್ತನ್ನು ನೀಡಿದೆ. ಹೀಗಾಗಿ, ಸಂಶೋಧನೆ, ಶಿಕ್ಷಣ ಮತ್ತು ಸೇವಾ ಕ್ರಿಯೆಗಳಿಗೆ ಸಂಬಂಧಿಸಿದಂತೆ ಕಾರ್ಯಕ್ಷಮತೆಯ ಅಂತರಗಳ ಫಲಿತಾಂಶಗಳು ಮಿಶ್ರ ಸ್ಥಿತಿಯಲ್ಲಿವೆ.

### ಕಾರ್ಯಕ್ಷಮತೆಯ ಅಂತರ – ಸಾರಾಂಶ

ಹಲವು ಕಾರ್ಯಕ್ಷಮತೆಯ ಅಂತರಗಳನ್ನು ಚಿತ್ರ ೪–೧ರಲ್ಲಿ ಎತ್ತಿಹಿಡಿಯಲಾಗಿದೆ ಮತ್ತು ಈಗಾಗಲೇ ಮೇಲೆ ವರ್ಣಿಸಿದ ರೀತಿ, ಕೆಲವು ಅಪೇಕ್ಷಣೀಯವಿರಬಹುದು ಹಾಗೂ ಕೆಲವು ಅನಪೇಕ್ಷಣೀಯವಿರಬಹುದು. ನಾವು ವ್ಯವಸ್ಥಿತವಾಗಿ ಈ ಅಂತರಗಳನ್ನು ವಿಶ್ಲೇಷಿಸಿದ್ದೇವೆ; ಸಮೂಹ ಹಂತದಲ್ಲಿ ಮತ್ತು ಸಾಂಸ್ಥಿಕ ಹಂತದಲ್ಲಿ ವಿಶ್ಲೇಷಿಸಬಹುದಾಗಿದೆ. ದತ್ತಾಂಶ ಮತ್ತು ವಿಧಾನಗಳು ವಿವಿಧ ಹಂತಗಳ ರಚನೆಯನ್ನು ವಿಶ್ಲೇಷಿಸಲು ಅನುವು ಮಾಡಿಕೊಡುತ್ತದೆ. ಉದಾಹರಣೆಗೆ, ಚಿತ್ರ ೪–೧ರಲ್ಲಿನ ವಿವರಗಳನ್ನು ಅಧ್ಯಾಯ ೩ರಲ್ಲಿ ಪ್ರಸ್ತುತಪಡಿಸಿರುವ ಪ್ರತ್ಯೇಕ ಸಮೂಹಗಳ ವಿವರಗಳನ್ನು ಹೋಲಿಸಬಹುದಾಗಿದೆ. ಕಾರ್ಯಕ್ಷಮತೆಯ ಅಂತರಗಳು ಅಪೇಕ್ಷಣೀಯವೇ ಅಥವಾ ಅನಪೇಕ್ಷಣೀಯವೇ ಎಂದು, ಆಶೋತ್ತರಗಳು ಸೂಕ್ತವಾಗಿವೆಯೇ, ಇವುಗಳು ಅಗತ್ಯಗಳಿಗೆ ಸರಿಹೊಂದುತ್ತವೆಯೇ ಎಂದು ಉದ್ದೇಶಿಸುವ ಅಗತ್ಯವಿದೆ. ಕರ್ನಾಟಕದಲ್ಲಿ ಜ್ಞಾನಸಮಾಜದ ಅಭಿವೃದ್ಧಿಗಳ ಅಗತ್ಯಗಳನ್ನು ಅರ್ಥೈಸಿಕೊಳ್ಳದೇ ಇದ್ದರೆ, ಆಶೋತ್ತರಗಳು ಕಾಲ್ಪನಿಕವಾಗಿರಬಹುದು ಅಥವಾ ನಿರಂಕುಶ ಮಾದರಿಯಲ್ಲಿರಬಹುದು. ಆಚರಣೆಗಳನ್ನು ಈ ಆಶೋತ್ತರಗಳೊಂದಿಗೆ ರೂಪಿಸುವುದು ಕರ್ನಾಟಕವನ್ನು ಜ್ಞಾನಸಮಾಜವನ್ನಾಗಿ ಪರಿವರ್ತಿಸುವುದು ಅಷ್ಟು ಪರಿಣಾಮಕಾರಿಯಾಗಿರುವುದಿಲ್ಲ. ಈ ಕಾರಣಗಳಿಂದಾಗಿ ನಾವು ಅಗತ್ಯಗಳ ಮನೋಭಾವಗಳನ್ನು ಪ್ರಕಲ್ಪದ ವಿಸ್ತರಣೆಯ ಭಾಗವಾಗಿ ಪ್ರಸ್ತಾಪಿಸಿದ್ದೇವೆ.

### ಜೋಟೋರೋನ ಜ್ಞಾನಮಾದರಿಯು ಚಾಲ್ತಿಯಲ್ಲಿರುವ ಪರಿವೀಕ್ಷಣಾ ವ್ಯವಸ್ಥೆಯ ಸಾಧನವಾಗಿ ನಿರೂಪಣೆ

ದತ್ತಾಂಶಗಳು ಮತ್ತು ಆಶೋತ್ತರ ಹಾಗೂ ಆಚರಣೆಗಳ ಮನೋಭಾವಗಳ ವಿಶ್ಲೇಷಣೆಯನ್ನು ಹೊರತುಪಡಿಸಿ, ನಾವು ಅಭಿವೃದ್ಧಿಪಡಿಸಿರುವ ಜೋಟೋರೋನ ಜ್ಞಾನನೆಲೆಯು ಈ ಪ್ರಕಲ್ಪದ ಪ್ರಮುಖ ಕೊಡುಗೆಯಾಗಿದೆ. ಇದು ಸಂಗ್ರಹಿಸಿ ಎಲ್ಲಾ ದತ್ತಾಂಶಗಳನ್ನು ಹೊಂದಿದೆ. ಮೊದಲಿನ ಅಧ್ಯಾಯಗಳಲ್ಲಿ, ವ್ಯವಸ್ಥೆಯನ್ನು ಮಾಪಿಸಲು ಅಗತ್ಯವಾದ ದತ್ತಾಂಶಗಳ ಸಂಗ್ರಹಣೆಯಲ್ಲಿ ಎದುರಿಸಿದ ತೊಂದತೆಗಳನ್ನು ಚರ್ಚಿಸಿದ್ದೇವೆ. ಈ ತೊಂದರೆಗಳು ಸೂತ್ರೀಕರಣದ ಕಾರ್ಯತಂತ್ರಗಳು ಮತ್ತು ಪ್ರಸ್ತುತ ಸಾಕ್ಷ್ಯಗಳ ಅನುಷ್ಠಾನಗಳಿಗೆ ಬದಲಿಗೆ ಉಪಾಖ್ಯಾನಗಳ ಅನುಭವ ಅಥವಾ ವೈಯಕ್ತಿಕ ಪರಿಣಿತಿಗಳಿಗೆ ಮಹತ್ತರವಾದ ತೊಡಕನ್ನುಂಟುಮಾಡುತ್ತದೆ. ಮುಂದಿನ ಹಂತದಲ್ಲಿ ಜೋಟೋರೋನ ಜ್ಞಾನಮಾದರಿಯನ್ನು ಚಾಲ್ತಿಯಲ್ಲಿರುವ ಪರಿವೀಕ್ಷಣಾ ವ್ಯವಸ್ಥೆಯ ಸಾಧನವಾಗಿ ನಿರೂಪಿಸುವುದನ್ನು ವಿವರಿಸುತ್ತೇವೆ.

ಜ್ಞಾನನೆಲೆಯು ವ್ಯಾಪಕ. ಆಭ್ಯಸಿಸಿದ ಎಲ್ಲಾ ಸಂಸ್ಥೆಗಳು ಇದರಲ್ಲಿ ಅಡಗಿದೆ ಮತ್ತು ಹೆಚ್ಚುವರಿ ಸಂಸ್ಥೆಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. ಜನಸಂಖ್ಯೆಯ ಬದಲಿಗೆ ಮಾದರಿಗಳಿಂದ ಪುರಾವೆಗಳ ಆಧಾರದ ಮೇರೆಗೆ ಯೋಜನೆ ಮತ್ತು ಮೇಲ್ವಿಚಾರಣೆಗಳಿಗೆ ಅನುವುಮಾಡಿಕೊಡುತ್ತದೆ.

ಜ್ಞಾನನೆಲೆಯ ಅಧ್ಯಯನವು ಪ್ರಸ್ತುತವಗಿದ್ದು, ಎಲ್ಲಾ ಈ ದಿನಾಂಕದವರೆಗೂ ಲಭ್ಯವಿರುವ ದಾಖಲೆಗಳನ್ನು ಒಳಗೊಂಡಿದೆ. ಅನುಕೂಲಕ್ಕೆ ತಕ್ಕಂತೆ ಹೊಸ ದಾಖಲೆಗಳನ್ನು ಸೇರಿಸಿಕೊಳ್ಳಬಹುದಾಗಿದೆ. ಹೆಚ್ಚಾಗಿ, ಸಮಯಾಧಾರಿತದ ದಾಖಲೆಗಳು ಅನುಲಂಬಿತ ಅಧ್ಯಯನಗಳಿಗೆ ಅನುಮತಿಕೊಡುತ್ತದೆ.

ಜ್ಞಾನನೆಲೆಯು ಸಹಕಾರಿ: (ಅ) ಎಲ್ಲಾ ಬಳಕೆದಾರರು ಒಂದೇ ನೋಟದಲ್ಲಿ ಸಮಕಾಲಿಕವಾಗಿ ಮತ್ತು ಅಸಮಕಾಲಿಕವಾಗಿ ಕೆಲಸ ಮಾಡಬಹುದಾಗಿದೆ ಮತ್ತು (ಆ) ಎಲ್ಲಾ ಬಳಕೆದಾರರು ತಮ್ಮ ಹಸ್ತಪ್ರತಿಯ ಹಕ್ಕುಗಳನ್ನು ಈ ಜ್ಞಾನನೆಲೆಯಲ್ಲಿ

ಸಂಸ್ಥೆಗಳಿಗೆ ಮತ್ತು ಸಾರ್ವಜನಿಕರ ಓದುವಿಕೆಗೆ ಹಾಗೂ ಸಂಶೋಧಕರಿಗೆ ಓದಲು ಮತ್ತು ಬರವಣಿಗೆಯ ಹಕ್ಕುಗಳು ಲಭ್ಯವಾಗುವಂತೆ ಮಾಡುತ್ತದೆ.

ಜ್ಞಾನನೆಲೆಯು ಪಾರದರ್ಶಕ. ಮೂಲಗಳು, ಉಲ್ಲೇಖಗಳು ಮತ್ತು ದಾಖಲೆಗಳು ಎಲ್ಲಾ ಬಳಕೆದಾರರಿಗೆ ಗೋಚರಿಸುತ್ತದೆ. ಈ ಪಾರದರ್ಶಕತೆಯು ವಿಶ್ವಾಸಾರ್ಹತೆಯನ್ನು ಭದ್ರಪಡಿಸುತ್ತದೆ ಮತ್ತು ದತ್ತಾಂಶಗಳಿಂದ ರಚಿಸಿದ ಮಾಪನಗಳನ್ನು ಮೌಲ್ಯೀಕರಿಸುತ್ತದೆ. ಸುಲಭ ಗುರುತಿಸುವಿಕೆ ಮತ್ತು ದೋಷಗಳ ತಿದ್ದುಪಡಿ, ದತ್ತಾಂಶಗಳ ನವೀಕರಣ ಮುಂತಾದವುಗಳಿಗೆ ಎಡೆಮಾಡಿಕೊಡುತ್ತದೆ.

ಜ್ಞಾನನೆಲೆಯು ಪುನರಾವರ್ತನೀಯ. ಇದನ್ನು ಮಾಪನವನ್ನಾಗಿ ಪುನರಾವರ್ತಿಸಬಹುದು ಉದಾಹರಣೆಗೆ ಇತರ ರಾಜ್ಯಗಳ ಮತ್ತು ಪ್ರದೇಶಗಳ ಉನ್ನತ ಶಿಕ್ಷಣ ವ್ಯವಸ್ಥೆಗಳು ಹಾಗೂ ಇತರ ವ್ಯವಸ್ಥೆಯ ಮಾದರಿಗಳು. ದೇಶದ ಇತರ ರಾಜ್ಯಗಳು ಮತ್ತು ಪ್ರದೇಶಗಳಿಗೆ ಪುನರಾವರ್ತಿಸುವುದರಿಂದ, ಅತ್ಯುನ್ನತವಾದ ತುಲನಾತ್ಮಕ ನೆಲೆಯನ್ನು ಉನ್ನತ ಶಿಕ್ಷಣ ವ್ಯವಸ್ಥೆಗೆ ಅಭಿವೃದ್ಧಿಪಡಿಸಬಹುದಾಗಿದೆ.

ಜ್ಞಾನನೆಲೆಯು ಮರುಕಳಿಸುತ್ತದೆ, ಇದರ ಪಾರದರ್ಶಕತೆಯು ಇದರ ಸಮತೆಯಾಗಿದೆ. ದತ್ತಾಂಶ ಮತ್ತು ಇವುಗಳ ಮಾಪನವನ್ನು ಮೌಲ್ಯೀಕರಿಸುವ ಅಗತ್ಯವಿದ್ದಲ್ಲಿ ಇತರರು ಈ ಪ್ರಕ್ರಿಯೆಯನ್ನು ಮರುಕಳಿಸಬಹುದಾಗಿದೆ.

ಜ್ಞಾನನೆಲೆಯ ಪರಿಧಿ ಮತ್ತು ಸಮಯ ವಿಸ್ತರಣೀಯ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ದತ್ತಾಂಶಗಳನ್ನು ಸೇರಿಸಿಕೊಳ್ಳುವಿಕೆ ಮತ್ತು ತರುವಾಯದ ಸಮಯದ ಅನುಗುಣವಾಗಿ ದತ್ತಾಂಶಗಳನ್ನು ಲಗತ್ತಿಸಿವುದರೊಂದಿಗೆ ಹೊಸ ಸಂಸ್ಥೆಗಳೊಂದಿಗೆ ಪ್ರಗತಿಯನ್ನು ಸಾಧಿಸಬಹುದಾಗಿದೆ. ಹೀಗಾಗಿ, ಕಾಲಾನಂತರದಲ್ಲಿ, ಸಾಕ್ಷಧಾರಿತ ಕಾರ್ಯತಂತ್ರಗಳ ನಿರೂಪಣೆ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಗಾಗಿ ಅನುಷ್ಠಾನಗಳಿಗೆ ಘನ ಅಡಿಪಾಯವನ್ನು ಒದಗಿಸುತ್ತದೆ.

ಜ್ಞಾನನೆಲೆಯನ್ನು ಪ್ರಕಟಿಸಬಹುದು. ಪ್ರತ್ಯೇಕ ಓದು/ಬರಹಗಳ ನಿಯಂತ್ರಣಗಳ ಮುಖೇನ ಸಾರ್ವಜನಿಕರಿಗೆ ಆಯ್ಕೆ ಅಥವಾ ಸಾರ್ವತ್ರಿಕವಾಗಿ ಪ್ರವೇಶಿಸುವ ಅಧಿಕಾರವನ್ನು ನೀಡಬಹುದು.

ಜ್ಞಾನನೆಲೆಯು ಅನುಶೋಧನೆಯಾಗಿದೆ. ಪ್ರಸ್ತುತ ದತ್ತಾಂಶಗಳು ಸಮಗ್ರವಾಗಿವೆ. ಹೆಚ್ಚಿನ ದತ್ತಾಂಶಗಳನ್ನು ಸೇರಿಸುವುದರೊಂದಿಗೆ ಇದು ಇನ್ನೂ ವ್ಯಾಪಕವಾಗಬಹುದು. ಅನುಕ್ರಮಣಿಕೆ ಮತ್ತು ಅನುಶೋಧನೆಗಳು ಪ್ರತ್ಯೇಕ ವಿಷಯ ಸಾಮಗ್ರಿಗಳನ್ನು ಗುರುತಿಸಲು ಸಹಾಯಕವಾಗಿದೆ. ಅನುಶೋಧನೆಯ ಸಾಮರ್ಥ್ಯವು ಬಳಕೆದಾರರ ದತ್ತಾಂಶಗಳ ನಿಲುಕಣೆಗೆ ಬೆಂಬಲವನ್ನೀಯುತ್ತದೆ.

ಜ್ಞಾನನೆಲೆಯು ಸಮರ್ಥನೀಯ. ಹಣಕಾಸು ವೆಚ್ಚ ಮತ್ತು ಮಾನವ ಪ್ರಯತ್ನಗಳು ಜ್ಞಾನನೆಲೆಯ ನಿರ್ವಹಣೆಗೆ ಅತ್ಯಗತ್ಯ. ಅಮೂಲ್ಯವಾದ ಸಂಪನ್ಮೂಲಗಳೊಂದಿಗೆ ಬಹಳ ಸಮಯ ಸಮರ್ಥಿಸಬಹುದಾಗಿದೆ.

ಹೀಗಾಗಿ, ಎಲ್ಲಾ ದಾಖಲೆಗಳ ವ್ಯಾಪಕವಾದ ಗ್ರಂಥಸೂಚಿಯನ್ನು ಈ ವರದಿಯಲ್ಲಿ ಲಗತ್ತಿಸಿಲ್ಲ. ಆದರೆ, ಈ ಮಾಹಿತಿಗಳು ಸಂಸ್ಥೆಗಳ ಪ್ರತಿನಿಧಿಗಳು, ನೀತಿ ನಿಯೋಜಕರು ಮತ್ತು ನಿರ್ಣಯ ತಯಾರಕರ ನಿಲುಕಣೆಯನ್ನು ಒದಗಿಸುತ್ತದೆ ಎಂದು ತಿಳಿಸಲು ಹರ್ಷಿಸುತ್ತೇವೆ.

## ಅಗತ್ಯಗಳ ಮನೋಭಾವಗಳ ಮಾಪನ

ಅಗತ್ಯಗಳ ಮನೋಭಾವಗಳನ್ನು ಮಾಪಿಸುವುದರ ಮುಖೇನ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಮೂರು ಭಾಗಗಳ ಮಾಪನ ಪ್ರಕ್ರಿಯೆ ಮುಕ್ತಾಯವಾಗುತ್ತದೆ.

- ಉನ್ನತ ಶಿಕ್ಷಣ ವ್ಯವಸ್ಥೆಯು ರಾಜ್ಯವನ್ನು ಜ್ಞಾನಸಮಾಜವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಕರ್ನಾಟಕದ ಭಾಗಿದಾರರ ಅಗತ್ಯಗಳನ್ನು ಮಾಪಿಸುವುದು;
- ಆಶೋತ್ತರ, ಆಚರಣೆ ಮತ್ತು ಆಗತ್ಯತೆಗಳ ಮನೋಭಾವಗಳ ನಡುವಿರುವ ಅಂತರಗಳ ನಿರ್ಣಯ ಮತ್ತು ವಿಶ್ಲೇಷಣೆ;
- ವಿಶ್ಲೇಷಣೆಯ ಆಧಾರಿತವಾಗಿ ಉನ್ನತ ಶಿಕ್ಷಣ ವ್ಯವಸ್ಥೆಯು ರಾಜ್ಯವನ್ನು ಜ್ಞಾನಸಮಾಜವನ್ನಾಗಿ ಪರಿವರ್ತನೆಯ ರೂಪಣೆ;
- ಮೂರು ಮನೋಭಾವಗಳ ನಡುವಿನ ಅಂತರಗಳನ್ನು ಕಡಿಮೆಮಾಡಲು ಕಾರ್ಯತಂತ್ರಗಳ ರಚನೆ ಮತ್ತು ಕರ್ನಾಟಕವನ್ನು ಜ್ಞಾನ ಸಮಾಜವನ್ನಾಗಿ ಪರಿವರ್ತನೆ

ಅಗತ್ಯಗಳ ಮನೋಭಾವಗಳನ್ನು ಮಾಪಿಸುವ ವಿಧಾನ ಈ ಕೆಳಗಿನಂತಿವೆ:

೧. ಸಾಹಿತ್ಯ ವಿಮರ್ಶೆ ೦ ಜೋಟೋರೋನ ಜ್ಞಾನನೆಲೆಯ ಅಗತ್ಯಗಳ ಮನೋಭಾವ

೨. ಮಾದರಿ ವಿನ್ಯಾಸ

೩. ಸಮೀಕ್ಷೆ

- ಪ್ರಶ್ನಾವಳಿಗಳ ತಯಾರಿಕೆ
- ಪ್ರಶ್ನಾವಳಿಯ ಮುಂಚಿತ ಪರೀಕ್ಷೆ
- ಪ್ರಶ್ನಾವಳಿಯ ಸಮಾಪ್ತಿ
- ಪ್ರಶ್ನಾವಳಿಯ ಆಡಳಿತಾತ್ಮಕ ಮತ್ತು ಅನುಸರಣೆ

೪. ಸಂಕೇತಿಕರಣ

೫. ವಿಶ್ಲೇಷಣೆ

೬. ಅಗತ್ಯಗಳ ಮನೋಭಾವಗಳ ವರದಿ

ಕಾರ್ಯಕ್ಷಮತೆಯ ಅಂತರಗಳೊಂದಿಗೆ (ಆಶೋತ್ತರ ಮತ್ತು ಆಚರಣೆಗಳ ನಡುವೆ), ನಿರೀಕ್ಷಣಾ ಅಂತರ (ಅಗತ್ಯ ಮತ್ತು ಆಕಾಂಕ್ಷೆಗಳ ನಡುವೆ) ಮತ್ತು ಹೊಂದಾಣಿಕೆಯ ಅಂತರ (ಅಗತ್ಯ ಮತ್ತು ಆಚರಣೆಯ ನಡುವೆ) ಗಳನ್ನು ವಿಶ್ಲೇಷಿಸಲು ಅಗತ್ಯಗಳ ಮನೋಭಾವಗಳು ಸಹಾಯಕವಾಗಿವೆ. ಈ ಅಂತರಗಳ ಪೂರ್ಣ ಅರ್ಥೈಸುವಿಕೆಯು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ರಾಜ್ಯದ ಜ್ಞಾನ ಆರ್ಥಿಕತೆಯನ್ನಾಗಿ ಸಮರ್ಪಕವಾಗಿ ಅಭಿವೃದ್ಧಿಪಡಿಸಲು ನೆರವಾಗುತ್ತದೆ.

## ಪ್ರಕಲ್ಪದ ಸಮಗ್ರವಾದ ಮಿತಿಗಳು, ಸಾಮರ್ಥ್ಯ ಮತ್ತು ಮುಕ್ತಾಯ

ಅಗತ್ಯಗಳ ಮನೋಭಾವಗಳನ್ನು ಅಭ್ಯಸಿಸವಾದಲ್ಲಿ ಪ್ರಕಲ್ಪವು ಪರಿಪೂರ್ಣತೆಯನ್ನು ಹೊಂದುವುದಿಲ್ಲ. ಅದಾಗ್ಯೂ, ಈ ಹಂತವನ್ನು ಮುಕ್ತಾಯಗೊಳಿಸುವುದರೊಂದಿಗೆ ಮಿತಿಗಳು, ಸಾಮರ್ಥ್ಯಗಳು ಮತ್ತು ಉಪಸಂಹಾರಗಳನ್ನು ಸಂಕ್ಷೇಪಿಸೋಣ.

ವ್ಯವಸ್ಥಿತವಾಗಿ ಮತ್ತು ಸುಸಂಬದ್ಧವಾಗಿ ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನದ ಕುರಿತ ಅಧ್ಯಯನವು ಮೊದಲನೆಯದಾಗಿದೆ. ಮಾಪಿಸಲು ಅಗತ್ಯವಾದ ದತ್ತಾಂಶಗಳ ಲಭ್ಯತೆಯು ಕಷ್ಟ ಸಾಧ್ಯ. ಹೆಚ್ಚಿನ ದತ್ತಾಂಶಗಳು ಲಭ್ಯವಾಗಿರಲಿಲ್ಲ, ಲಭ್ಯವಿದ್ದರೂ ನಿಲುಕುತ್ತಿರಲಿಲ್ಲ ಹಾಗೂ ನಿಲುಕುತ್ತಿದ್ದರೂ ಅಸಮವಾದ ರಚನೆ ಮತ್ತು ಗುಣಮಟ್ಟವನ್ನು ಹೊಂದಿರುತ್ತಿತ್ತು. ಕೇಂದ್ರಿಯ ಜ್ಞಾನನೆಲೆಗೆ, ಬಹುಮೂಲಗಳಿಂದ ದತ್ತಾಂಶಗಳ ಸಮಗ್ರ ಸಂಗ್ರಹ ಮತ್ತು ಹೋಲಿಕೆಗೆ ಪ್ರಯತ್ನಿಸಲಾಯಿತು. ಆಶೋತ್ತರಗಳು ಮತ್ತು ಆಚರಣೆಗಳ ಮನೋಭಾವಗಳನ್ನು ಮಾಪಿಸುವಾಗ, ಮಾಪನಗಳನ್ನು ಅಂಗೀಕಾರಾರ್ಹತೆಯನ್ನು ಗರಿಷ್ಠೀಕರಿಸಲು ವಿವಿಧ ಅನುಕೂಲಕರವಾದ ಬಿಂದುಗಳಿಂದ ತ್ರಿಕೋನಿಸಲು ಪ್ರಯತ್ನಿಸಲಾಯಿತು. ಇನ್ನೂ, ಲೋಪಗಳು, ನಿಯೋಜಿತ, ವಿವರಣೆ ಮತ್ತು ವ್ಯಾಖ್ಯಾನಗಳಲ್ಲಿ ದೋಷಗಳಿರಬಹುದು. ಹೊಸ ದತ್ತಾಂಶಗಳ ಲಭ್ಯತೆಯಿಂದ ದೋಷಗಳ ಅವಿಷ್ಕಾರ ಮತ್ತು ಸರಿಪಡಿಸುವಿಕೆ ಅಥವಾ ಮಾಪನಗಳ ಸಂಸ್ಕರಣೆ ಮತ್ತು ಮಾರ್ಪಡಿಸುವಿಕೆ, ಜ್ಞಾನನೆಲೆಗೆ ಈ ದತ್ತಾಂಶಗಳನ್ನು ಸಂಯೋಜಿಸುವುದು, ಸಂಕೇತಿಕರಿಸುವುದು ಮತ್ತು ಮಾಪನಗಳನ್ನು ಬದಲಾಯಿಸಬಹುದಾಗಿದೆ. ಈ ಮಾದರಿಯ ಪ್ರಕ್ರಿಯೆಯನ್ನು ಕಾಲಾನಂತರದಲ್ಲಿ ಹೊಸ ದತ್ತಾಂಶಗಳೊಂದಿಗೆ ಅಳವಡಿಸಿಕೊಳ್ಳಬಹುದಾಗಿದೆ.

ಮಿತಿಗಳಿದ್ದರೂ, ದತ್ತಾಂಶಗಳು ಸಮೃದ್ಧವಾಗಿವೆ ಮತ್ತು ಪ್ರಸ್ತುತ ವರದಿಯನ್ನು ಮೊದಲ ಪದರವನ್ನಾಗಿ ವಿಶ್ಲೇಷಿಸಬಹುದು. ದತ್ತಾಂಶಗಳ ಆಧಾರದ ಮೇಲೆ ನಾವು ಒಂದು ಪುಸ್ತಕವನ್ನು ಬರೆಯಬಹುದೆಂದು ನಂಬಿದ್ದೆವು ಅದರೆ, ಕಾಲಾವಕಾಶದ ಅಗತ್ಯವಿದೆ. ವರದಿಯು ಪ್ರಮುಖ ಒಳನೋಟಗಳನ್ನು ಬಿಂಬಿಸುತ್ತದೆ. ತದನಂತರದ ಪ್ರಬಂಧಗಳು ಮತ್ತು ಪುಸ್ತಕವು ದತ್ತಾಂಶವನ್ನು ಆಳವಾಗಿ ಮತ್ತು ವಿವರವಾಗಿ ಪರಿಶೋಧಿಸುತ್ತದೆ.

ಸಂಸ್ಥೆಗಳ ಹಾಗೂ ವ್ಯವಸ್ಥೆಯ ಮೌಲ್ಯಮಾಪನ ಅಥವಾ ವಿಮರ್ಶನವಲ್ಲದೆ, ಅಧ್ಯಯನದ ಮಾಪನವು ದರ್ಪಣದಂತೆ ಕಾರ್ಯನಿರ್ವಹಿಸುತ್ತದೆ ಎಂದು ಆಶಿಸುತ್ತೇವೆ. ಯಾವುದೇ ಮೌಲ್ಯದ ವಿವೇಚನೆ ಇಲ್ಲದೆ ಹಾಗೂ ಯಾವುದೇ ತಾರ್ಕಿಕತೆ ಇಲ್ಲದೆ ಅಥವಾ ಸಮಜಾಯಿಷಿ ಯಾವುದಕ್ಕೆ ಎಂಬ ಮುಂತಾದವುಗಳಿಗೆ ಮಾಪನಗಳನ್ನು ನಿರೂಪಕಗಳಾಗಿ ನಾವು ಸಮರ್ಪಿಸುತ್ತಿದ್ದೇವೆ. ನಿರ್ಧಾರ/ನಿರ್ಣಯಗಳನ್ನು ಕೈಗೊಳ್ಳಲು, ಸಂಸ್ಥೆಗಳು ಮತ್ತು ವ್ಯವಸ್ಥೆ ಈ ವಿಷಯಗಳನ್ನು ಚರ್ಚಿಸಬೇಕು. ಮಾಪನಗಳು ದರ್ಪಣದಂತೆ, ವ್ಯವಸ್ಥೆ ಹಾಗೂ ಸಂಸ್ಥೆಗಳಿಗೆ ಪ್ರತಿಕ್ರಿಯಿಸುತ್ತದೆ ಮತ್ತು ಪ್ರತಿಯಾಗಿ ದೋಷಗಳು, ಅನಿಷ್ಕೃಷ್ಟತೆ ಅಥವಾ ತಪ್ಪಿಹೋದ ವಿವರಗಳ ಕುರಿತು ನಮಗೆ ಹಿಮ್ಮಾಹಿತಿಯನ್ನು ಒದಗಿಸುತ್ತದೆ ಎಂಬ ವಿಶ್ವಾಸವಿದೆ. ಹೆಚ್ಚುವರಿ ಆಧಾರಗಳು ಮಾಪನಗಳನ್ನು ಮಾರ್ಪಡಿಸಿದರೆ, ಜ್ಞಾನ ನೆಲೆ ಮತ್ತು ಮಾಪನಗಳ ಬದಲಾವಣೆಯನ್ನು ನಾವು ಸಂಯೋಜಿಸುತ್ತೇವೆ. ಮೇಲಿನ ಸಂವಾದಾತ್ಮಕ ಪ್ರತಿಕ್ರಿಯೆ ಕುಣಿಕೆಯು ಮಾಪನಗಳ ಗುಣಮಟ್ಟವನ್ನು ಸುಧಾರಿಸಲು ಹಾಗೂ ಅವುಗಳ ವಿಷಯಗ್ರಹಣ ಮತ್ತು ಬಳಕೆಗೆ ಸಹಾಯಕವಾಗುತ್ತದೆ.

ಸಾಕ್ಷ್ಯಾಧಾರಿತವಾಗಿ, ವ್ಯವಸ್ಥಿತವಾಗಿ ಮತ್ತು ಸುಸಂಬದ್ಧ ಕಾರ್ಯತಂತ್ರಗಳ ಮುಖೇನ ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಗೆ ಸಂಭವನೀಯ ಮಾಪನಗಳನ್ನು ಸಜ್ಜುಗೊಳಿಸುತ್ತದೆ ಎಂದು ಆಶಿಸುತ್ತೇವೆ. ಈ ಮಾಪನಗಳು ಕಾರ್ಯತಂತ್ರಗಳ ಅಭಿವೃದ್ಧಿಗೆ ಸಹಾಯಕವಾಗುವುದಲ್ಲದೇ, ನಿರ್ಣಯ, ಮೌಲ್ಯಮಾಪನ ಮತ್ತು ಸರಿಪಡಿಸಲು ನೆರವಾಗುತ್ತದೆ. ಮಾಪನಗಳಿಗೆ ಅನುಗುಣವಾಗಿ ಅನುಲಂಬಿತ ಜ್ಞಾನನೆಲೆಯ ಮೌಲ್ಯವು ಹಲವು ಬಾರಿ ಅಡ್ಡಛೇದ ಮಾಪನಗಳಿಗಿಂತ ಹೆಚ್ಚಿರುವುದನ್ನು ಈ ಅಧ್ಯಯನದಲ್ಲಿ ತೋರಿಸಿದ್ದೇವೆ.

ಹೀಗಾಗಿ, ಪ್ರಮುಖವಾಗಿ, ಈ ಪ್ರಕಲ್ಪವು ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯ ಮಾಪನದ ಮೌಲ್ಯಗಳಿಗೆ ಸ್ವರೂಪದ ಸಾಕ್ಷಿಯಾಗಿದೆ. ಇದು ನಿಖರವಾಗಿಲ್ಲದಿದ್ದರೂ, ಕಾರ್ಯಸಾಧ್ಯತೆಗಳನ್ನು ಪ್ರಮಾಣೀಕರಿಸಲು ಉತ್ತಮವಾಗಿದೆ ಎಂದು ಹೇಳಬಹುದು. ಪ್ರಗತಿಯಲ್ಲಿರುವ ಮಾಪನಗಳು ಮತ್ತು ವಿಧಾನಗಳಿಗೆ ಜ್ಞಾನನೆಲೆಯ ಕೇಂದ್ರವನ್ನು ಅಭಿವೃದ್ಧಿಪಡಿಸಿದ್ದೇವೆ.

### ಕರ್ನಾಟಕ ಸರ್ಕಾರಕ್ಕೆ ಮಂಡಿಸಲಾಗುವ ಶಿಫಾರಸ್ಸುಗಳು

ಸಂಗ್ರಹಿತವಾದ ಪುರಾವೆಗಳು ಕಣ್ಣು ತೆರೆಸುತ್ತದೆ ಎಂದು ನಂಬಿದ್ದೇವೆ. ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಕೆಲವು ನಿರೀಕ್ಷೆಗಳನ್ನು ಮೌಲ್ಯೀಕರಿಸುತ್ತದೆ ಮತ್ತು ಅನಿರೀಕ್ಷಿತ ಒಳನೋಟಗಳನ್ನು ಒದಗಿಸುತ್ತದೆ. ಆಚರಣೆಗಳ ಮತ್ತು ಆಶೋತ್ತರಗಳ ಮನೋಭಾವಗಳ ಸಾರಾಂಶದ ಚಿತ್ರಣವನ್ನು ಒದಗಿಸುತ್ತದೆ. ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಸಾಕ್ಷ್ಯಾಧಾರಿತ ಕಾರ್ಯತಂತ್ರಗಳ ಅಭಿವೃದ್ಧಿಗಳಿಗೆ ಅತ್ಯುತ್ತಮವಾದ ಅಡಿಪಾಯವನ್ನು ಒದಗಿಸುತ್ತದೆ. ಜ್ಞಾನನೆಲೆ ಮತ್ತು ಸಂಬಂಧಿಸಿದ ವಿಶ್ಲೇಷಣೆಗಳಿಗೆ ದೀರ್ಘಕಾಲದ ಪರಿವರ್ತನೆಯನ್ನು ಸಮರ್ಥಿಸಲು ಸಹಜೀವನದ ಬೆಳವಣಿಗೆಯ ಅಗತ್ಯವಿದೆ. ಆದ್ದರಿಂದ ಈ ಕೆಳಗಿನವುಗಳನ್ನು ಶಿಫಾರಸ್ಸು ಮಾಡುತ್ತೇವೆ:

೧. ಜ್ಞಾನನೆಲೆಯನ್ನು ನಿರ್ವಹಿಸುವುದು ಮತ್ತು ನೀತಿ–ತಟಸ್ಥ ಉಗ್ರಾಣವಾಗಿ ಅಭಿವೃದ್ಧಿಪಡಿಸುವುದು
೨. ಜ್ಞಾನನೆಲೆಯು ಸ್ವತಂತ್ರವಾಗಿ ನೀತಿಯೋಜಕರಿಗೆ ಮತ್ತು ವಿದ್ವಾಂಸರಿಗೆ ವಿಶ್ಲೇಷಣೆಗೆ ಲಭ್ಯವಾಗುವುದು
೩. ಜ್ಞಾನನೆಲೆಯು ಸಂಶೋಧನೆ, ಅಭ್ಯಾಸ ಮತ್ತು ಕರ್ನಾಟಕದ ಉನ್ನತ ಶಿಕ್ಷಣ ವ್ಯವಸ್ಥೆಯ ಪರಿವರ್ತನೆಯ ನೀತಿಗಳಿಗೆ ಕೇಂದ್ರೀಯ ಭಂಡಾರವಾಗುವುದು
೪. ಜ್ಞಾನನೆಲೆಯು ಭಾರತದ ಇತರ ರಾಜ್ಯಗಳ ಉನ್ನತ ಶಿಕ್ಷಣದ ಪರಿವರ್ತನೆಯ ಮಾದರಿಯಾಗಬೇಕು.